3. ವಿತ್ತೀಯ ಕಾರ್ಯಕಲಾಪಗಳು :

ಅ) ವಿಷಯ :– 2006–07ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಹಾಗೂ ಅಂತಿಮ ಕಂತು) ಕುರಿತು ಚರ್ಚೆ:

ಅಧ್ಯಕ್ಷರು :– ಈಗ 2006–07ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಹಾಗೂ ಅಂತಿಮ ಕಂತು) ಕುರಿತು ಚರ್ಚೆ ಮತ್ತು ಉತ್ತರ. ಈಗ ಪ್ರತಿಪಕ್ಷದ ನಾಯಕರು ಮಾತನಾಡಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :– ಮಾನ್ಯ ಸಭಾಧ್ಯಕ್ಷರೇ, ಬಜೆಟ್ ಅನ್ನು 16ನೇ ತಾರೀಖು ಮಂಡಿಸಿದ್ದಾರೆ. ಬಜೆಟ್ ಮೇಲೆ ಚರ್ಚೆ ಇವತ್ತು, ನಾಳೆ ಪ್ರಾರಂಭವಾಗುತ್ತಿದೆ. ಏಕೆಂದರೆ Supplementary estimates, Second installment ನ್ನು ಇವತ್ತು ಉಪಮುಖ್ಯಮಂತ್ರಿಗಳು ಸದನದಲ್ಲಿ ಮಂಡಿಸಿದ್ದಾರೆ. ಬಜೆಟ್ ತಯಾರು ಮಾಡತಕ್ಕಂಥ ಕಾಲದಲ್ಲಿ ಒಟ್ಟಾರೆ ರಾಜ್ಯದಲ್ಲಿ tax revenue ಏನಿದೆ, non tax revenue ಏನಿದೆ, 16ನೇ ತಾರೀಖಿನಿಂದ ಇಲ್ಲಿಯವರೆಗೆ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಏನು ಮಂಡನೆ ಮಾಡಿದ್ದಾರೆ. ಇವತ್ತು ಯಾವುದೇ ಊಹೆ ಮಾಡಲಾರದಂಥ, unforeseen, ಬಜೆಟ್‌ನ್ನು ತಾವು ಮಂಡನೆ ಮಾಡತಕ್ಕಂಥ ಕಾಲದಲ್ಲಿ ಯಾವ್ಯಾವ ಇಲಾಖೆಗಳಿಗೆ, ಯಾವ್ಯಾವ ಬಾಬ್ತುಗಳಿಗೆ ಎಷ್ಟು ಹಣ ಬೇಕು ಎಂದು ತಾವು ಈಗಾಗಲೇ ನಿಗದಿ ಮಾಡಿದ್ದೀರಿ. 6–8 ದಿವಸಗಳೊಳಗಾಗಿ ಬೆಳಗಾಂನಲ್ಲಿ ಆಗಿರತಕ್ಕಂಥ ಅಧಿವೇಶನ, ಅಲ್ಲಿಯೂ ಕೂಡ ನಾವು ಹೇಳಿದ್ದೇವೆ. ಪೂರಕ ಅಂದಾಜುಗಳಲ್ಲಿ ಇವತ್ತು ನಮಗೆಷ್ಟು ಹಣ ಬೇಕಾಗಿದೆಯೆಂದು ನಾವು ಹೇಳಿದ್ದೇವೆ. Floods ಬಂತು, ಬರಗಾಲ ಪರಿಸ್ಥಿತಿ, ಬೇರೆ ಬೇರೆ ವಿಚಾರಗಳು ಬಂದಾಗಲೂ ಕೂಡ ತಾವು ಅದರಲ್ಲಿ mention ಮಾಡಿದಿರಿ. ಬೆಳಗಾಂ ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಕೃಷ್ಣಾ ನದಿಯಿಂದ ಬಂದಂಥ ಪ್ರವಾಹದಿಂದ ಭೀಕರವಾದಂಥ ಪರಿಸ್ಥಿತಿ ಬಂತು. ಇವತ್ತು ಕೇಂದ್ರ ಸರ್ಕಾರಕ್ಕೆ ನಾನು, ಮಲ್ಲಿಕಾರ್ಜುನ್ ಖರ್ಗೆಯವರು, ಆಗಿನ ಉಪಮುಖ್ಯಮಂತ್ರಿಗಳಾದಂಥ ಶ್ರೀ ಎಂ.ಪಿ.ಪ್ರಕಾಶ್‌ರವರು ಆಲಮಟ್ಟಿ ಡ್ಯಾಂ

ನೋಡಲಿಕ್ಕೆ ಹೋಗಿದ್ದೆವು. ರಾಜ್ಯದಲ್ಲಿ unexpected situation has arisen in Karnataka State, "you must come", ಎಂದು ಮತ್ತು ಇದಕ್ಕೆ ನೇರವಾಗಿ ತಾವು ಹಣ ಕೊಡಬೇಕೆಂದು ಕೇಳಿದ್ದೆವು. ಉಪಮುಖ್ಯಮಂತ್ರಿಗಳು, ನಾವೆಲ್ಲಾ ಬೆಳಗಾಂಗೆ ಹೋಗಿದ್ದೆವು. ಬೆಳಗಾಂಗೆ ಪ್ರಧಾನಮಂತ್ರಿಗಳು ಬರುವ ಪೂರ್ವದಲ್ಲಿ ಶ್ರೀ ಶರದ್ ಪವಾರ್ ಅಥಣಿಯ ಒಂದು ಪ್ರದೇಶಕ್ಕೆ ಭೇಟಿ ನೀಡಿ ಅಲ್ಲಿ ಶುಗರ್ ಕೇನ್‌ಗೆ ಆದಂಥ ಹಾನಿಯನ್ನು ನೋಡಲಿಕ್ಕೆ ಬಂದಿದ್ದರು. ಪ್ರಧಾನಮಂತ್ರಿಗಳು 16ನೇ ಆಗಸ್ಟ್‌ರಂದು ಲೋಕಸಭೆ ನಡೆಯುತ್ತಿದ್ದರೂ ಕರ್ನಾಟಕಕ್ಕೆ ಹೋಗಬೇಕಾಗಿದೆ, ಅಲ್ಲಿ ರೈತರ ಬಗ್ಗೆ ಆದಂಥ ಅನಾಹುತಗಳನ್ನು ನೋಡಬೇಕಾಗಿದೆ, ಅವರಿಗೆ ಸಹಾಯ ಮಾಡಬೇಕಾಗಿದೆ ಎಂದು ಹೇಳಿ he came to Goa, ಗೋವಾದಿಂದ ಬರಲಿಕ್ಕೆ Helicopter take off ಆಗಲಿಲ್ಲ. ಅಲ್ಲೇ ಒಂದು ದಿವಸ ಕಳೆದು ಹೋಯಿತು. ಅಲ್ಲಿಂದ ಶರದ್ ಪವಾರ್ ಜೊತೆಯಲ್ಲಿ ಮಾತನಾಡಿದ ಮೇಲೆ ಏನು ಮಾಡಬೇಕಾಗಿತ್ತು. ಅವತ್ತು ನಮ್ಮ ಜೊತೆ ಶ್ರೀ ಸಿದ್ಧರಾಮಯ್ಯ, ದೇಶಪಾಂಡೆ, ಮಲ್ಲಿಕಾರ್ಜುನ್ ಖರ್ಗೆಯವರು ಮತ್ತು ಎಲ್ಲಾ ಹಿರಿಯ ಸಚಿವರೂ ಮಾತನಾಡಿ at least 400-00 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡಬೇಕಾಗುತ್ತದೆಂದು ಹೇಳಿದರು. ಕೇಂದ್ರ ಸರ್ಕಾರದಿಂದ ಒಂದು ನಯಾ ಪೈಸೆಯೂ ಬರಲಿಲ್ಲವೆಂದು ಹೇಳಲಿಕ್ಕೆ ಆಗ ಯಡಿಯೂರಪ್ಪನವರು, ಅನಂತಕುಮಾರ್‌ರವರು ಅದ್ವಾನಿಯವರು ಬೆಳಗಾಂಗೆ ಹೋದರು. ಪೂರಕ ಅಂದಾಜಿನಲ್ಲಿ ಕೇಂದ್ರ ಸರ್ಕಾರದಿಂದ 354.00 ಕೋಟಿ ರೂ.ಗಳು ಬಂದಿವೆ ಎನ್ನತಕ್ಕಂಥ ಮಾತನ್ನು ಉಲ್ಲೇಖ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ಕೇಳಿದ್ದೇವೆ. "ನೀವು ವಿರೋಧಪಕ್ಷದಲ್ಲಿದ್ದೂ ಕೂಡ ಒಂದು ಪೈಸೆ ಕೂಡ ಕೇಂದ್ರ ಸರ್ಕಾರದಿಂದ ಬರಲಿಲ್ಲ ಎಂದರೆ, ಈ ಹಣ ಹೇಗೆ ಬಂತು? ಈಗಾಗಲೇ ಬೆಳಗಾಂನಲ್ಲಿ ಪ್ರವಾಹ ಪೀಡಿತ ಪ್ರದೇಶಕ್ಕೆ 197.00 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಜನಾಭಿಪ್ರಾಯವಾಗಿದೆ. ಇವತ್ತು ನೀವು ಬಂದ ಮೇಲೆ ಯಾವ ಕಡೆಯೂ ಯಾವ ಕೆಲಸಗಳು ಆಗುತ್ತಿಲ್ಲ. ಇದರ ಬಗ್ಗೆ ಬಹಳಷ್ಟೂ ಕೂಡ, ನೋಡಿದ್ದೇನೆ, ನಿಮ್ಮ ಪಟ್ಟಿಯ ಬೇರೆ ಬೇರೆ ಪುಟಗಳಲ್ಲಿ ಯಾವ ರೀತಿಯಾಗಿ ಕೊಟ್ಟಿದ್ದೀರಿ. ಒಟ್ಟು 5,980.00 ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ. ಅದಕ್ಕೆ ತಾವೇನು ಮಾಡಿದ್ದೀರಿ?

Electricity bill ಪಾವತಿ ಮಾಡಲಿಕ್ಕೆ ಊಹೆ ಮಾಡಿಲ್ಲ, ಅದಕ್ಕೆ ನಾನು ಹೇಳಿದ್ದು, you don't have the Principle Secretary, Finance. Subramanyam is also one of the best officers, ಆದರೆ ತಾವು ಹಣಕಾಸಿನ ಸಚಿವರಾದ ಮೇಲೆ ಮೊಟ್ಟ ಮೊದಲನೆಯದಾಗಿ ಕರ್ನಾಟಕದ ಇತಿಹಾಸದಲ್ಲಿ ಯಾರೂ ಪ್ರಧಾನ ಕಾರ್ಯದರ್ಶಿಗಳೂ ತಮ್ಮ ಜೊತೆಯಿಲ್ಲ. ತಾವು ಇವತ್ತು ಯಾವ್ಯಾವ ಬಾಬ್ತಿಗೆ ಹಣವನ್ನು ಒದಗಿಸಲಿಕ್ಕೆ ಕೇಳಿದ್ದೀರಿ? ಹಾಗೆಯೇ ತಮ್ಮ ಬಜೆಟ್ ಲೆಕ್ಕಾಚಾರವೂ ಕೂಡ ಸರಿಯಾದ ರೀತಿಯಲ್ಲಿ ಆಗಿಲ್ಲ. ಇವತ್ತು ಪೆಂಡಿಂಗ್ ಬಿಲ್ಸ್ ಇವೆ. ಏಕೆಂದರೆ ರೇವಣ್ಣನವರು ಪ್ರಭಾವಿ ಸಚಿವರಾಗಿದ್ದಾರೆ, ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ. ಚೆಲುವರಾಯಸ್ವಾಮಿಯವರು ಪ್ರಭಾವಿ ಸಚಿವರಾಗಿರುವುದರಿಂದ ನಾಗಮಂಗಲಕ್ಕೆ ಹಣ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳ ಮನೆಯ ಮುಂದಿರುವ ಗಾರ್ಡನ್ ಅನ್ನು ಸುಂದರವಾಗಿ ಮಾಡುವುದಕ್ಕೆ 12.00 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ನೀವು Supplementary estimate ಅನ್ನು ಪ್ರೆಸೆಂಟ್ ಮಾಡಿರತಕ್ಕಂಥ ಕಾಲದಲ್ಲಿ, ಬಜೆಟ್ ಮೇಲೆ ಸಂಪೂರ್ಣವಾದ, ದೀರ್ಘವಾದ ಚರ್ಚೆಯಾಗಿಲ್ಲ. ಬಜೆಟ್ ಮೇಲೆ ಚರ್ಚೆ ಆದಮೇಲೆ ತಾವೇನು ಹೇಳುತ್ತಿದ್ದೀರಿ, ಬಜೆಟ್ ಮೇಲೆ ಇಡೀ ರಾಷ್ಟ್ರದಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತಿದೆ. ನಾನು ಮುಖ್ಯಮಂತ್ರಿಯಾಗಿದ್ದಾಗ, ಸಿದ್ಧರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ pro farmers, pro poor budget ಎಂದು ನಾವು ಮಾಡಿದ್ದೆವು. ಆಗ ಅದು ಇಡೀ ರಾಷ್ಟ್ರ ಮಟ್ಟದಲ್ಲೇ ಚರ್ಚೆಯಾಗಿತ್ತು. ಆಗ ಶರದ್ ಪವಾರ್‌ರವರು ಬೆಂಗಳೂರಿಗೆ ಬಂದಾಗ ನೀವು ಹೇಗೆ 6% ಪ್ರತಿಶತ ಬಡ್ಡಿ ಮೇಲೆ ಸಾಲವನ್ನು ರೈತರಿಗೆ ಸಹಾಯ ಮಾಡುತ್ತಿದ್ದೀರಿ ಎಂದು ನಮ್ಮನ್ನು ಕೇಳಿದ್ದರು. "This is the only State where you have taken the initiative" ಎಂದು ಕೇಂದ್ರದ ಕೃಷಿ ಸಚಿವರು ಸಹ ನಮ್ಮನ್ನು appreciate ಮಾಡಿದ್ದರು. ನೀವೇ ಹೇಳಿದ್ದೀರಿ, ನಾವೇನು ಹೇಳಬೇಕಾಗಿಲ್ಲ, ಬಜೆಟ್ ಮೇಲೆ ಚರ್ಚೆಯಾಗುವ ಪ್ರಾರಂಭದಲ್ಲಿ. ಒಂದು ಸಮ್ಮಿಶ್ರ ಸರ್ಕಾರದಲ್ಲಿ common minimum programme ಬಗ್ಗೆ ನಾವು 8 ತಿಂಗಳುಗಳ ಕಾಲ ಚರ್ಚೆ ಮಾಡಿದ್ದೇವೆ, ಒಂದು ಕೆ.ಜಿ. ಅಕ್ಕಿಯನ್ನು 3–00

ರೂಪಾಯಿಗಳಿಗೆ ಕೊಡುವಂಥದ್ದಾಗಲಿ, ಶೇಕಡ 6 ಪ್ರತಿಶತ ಬಡ್ಡಿಯ ಮೇಲೆ ರೈತರಿಗೆ ಸಾಲವನ್ನು ಕೊಡತಕ್ಕಂಥದ್ದಾಗಲಿ, ಪ್ಲಾನಿಂಗ್ ಕಮಿಷನ್‌ನವರೇ ಹೇಳಿರುವ ಪ್ರಕಾರ Karnataka is the only state, ಇದು ನಾವು ಮಾಡುತ್ತೇವೆಂದು ಹೇಳುವುದಿಲ್ಲ, ವ್ಯವಹಾರಿಕವಾಗಿ ಯಾವ ರೀತಿ ಮಾಡುತ್ತೀರಿ ಎಂಬುದನ್ನು ಕೂಡ ತಾವೆಲ್ಲರೂ ಕೂಡ ಇವತ್ತು ಹೇಳಬೇಕಾಗಿದೆ. ಅದಕ್ಕೆ ಯಾವುದಾದರೂ new services, unforeseen expenditures, ಊಹೆ ಮಾಡಲಾರದಂಥ ಯಾವುದಾದರೂ ಇದ್ದರೆ Supplementary budget ನಲ್ಲಿ ಮಾಡುತ್ತಾರೆ. ಬಹಳ ತರಾತುರಿಯಿಂದ ಮಾಡಿರುವುದರಿಂದ plan ಮತ್ತು Non plan ನಲ್ಲಿ ಕೂಡ ಸರಿಯಾದ ರೀತಿಯಲ್ಲಿ ತಮ್ಮ ಲೆಕ್ಕಾಚಾರವಿಲ್ಲ. ಇವತ್ತು ಬೇಜವಾಬ್ದಾರಿಯಾದ ಅಧಿಕಾರಿಗಳನ್ನು ತಾವು ಇಟ್ಟುಕೊಂಡು ಅವರು ಇವತ್ತು ಹೇಳಿದ್ದನ್ನೇ ಲೆಕ್ಕಚಾರ ಮಾಡಿ ಈ ಸದನದ ಸಮಯವನ್ನು ಹಾಳು ಮಾಡತಕ್ಕಂಥ ರೀತಿಯಲ್ಲಿ ಏನು ತಂದಿದ್ದೀರಿ, ಇದಕ್ಕೆ ನಮಗೆ ಒಪ್ಪಿಗೆಯಿಲ್ಲವೆನ್ನುವಂಥ ಮಾತನ್ನು ಹೇಳುತ್ತಿದ್ದೇವೆ. Centrally Sponsored Scheme, SC/ST scheme ನಲ್ಲಿ matching grant ನಿಮಗೆ, ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರುತ್ತದೆ? ಎಸ್.ಸಿ/ಎಸ್.ಟಿ ಸ್ಕಾಲರ್‌ಷಿಪ್‌ಗಾಗಿ ಮ್ಯಾಚಿಂಗ್ ಗ್ರಾಂಟ್‌ಗಾಗಿ ಎಷ್ಟು ಹಣ ಬರುತ್ತದೆ ಗೊತ್ತಿದೆಯೇ ನಿಮಗೆ? ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಸಮಾಲೋಚನೆ ಮಾಡುವಂಥ ರೀತಿಯಲ್ಲಿ ಹೇಳುವುದಿಲ್ಲ. ಇವತ್ತು 6–8 ದಿವಸಗಳಲ್ಲಿ. already ಕೇಂದ್ರ ಸರ್ಕಾರದ ನಿರ್ಧಾರಿತ ಏನು ಒಂದು social service sector ನಲ್ಲಿ ಹಣ ಕೊಡಬೇಕಾಗುತ್ತದೆ ಆಗಲೇ ಆ ಮ್ಯಾಚಿಂಗ್ ಗ್ರಾಂಟ್ ಕೊಡುತ್ತಾರೆ. SC/ST ಗೆ ಸಬ್ಸಿಡಿ ಕೊಡುವಂಥ ರೀತಿಯಲ್ಲಿ, ಎಲ್ಲಾ ಕಡೆಗೂ ನೋಟಿಸ್‌ಗಳು ಕೂಡ ಇಷ್ಯೂ ಆಗಿವೆ. ಬಡವರ, ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷವಾಗಿ SC/ST ವಿದ್ಯಾರ್ಥಿಗಳಿಗೆ 25.00 ಕೋಟಿ ರೂ.ಗಳನ್ನು ಇದುವರೆಗೂ ಕೊಟ್ಟಿಲ್ಲ. ನಮ್ಮ ಖಜಾನೆ ಭರ್ತಿಯಾಗಿದೆ, ಈಗಲ್ಲ, ನನ್ನ ಕಾಲದಲ್ಲಿ, ಸಿದ್ಧರಾಮಯ್ಯನವರ ಕಾಲದಲ್ಲಿ ನಮ್ಮ ಸಮ್ಮಿಶ್ರ ಸರ್ಕಾರದಲ್ಲಿ 4,000 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು, ಅದೇ ಖಜಾನೆ ಭರ್ತಿಯಾಗಿದೆ. ನಿಮ್ಮಲ್ಲೆಲ್ಲಿ ಖಜಾನೆ ಭರ್ತಿಯಾಗಿದೆ. ಕೊಟ್ಟು

ಬಿಡುತ್ತಿದ್ದೀರಿ, ಇಲ್ಲಿಯವರೆಗೆ ತಾವು ಕೊಟ್ಟಿದ್ದೀರಾ? ಇಲ್ಲಿಯವರೆಗೆ ರಾಜ್ಯದಲ್ಲಿ notices ಎಷ್ಟು issue ಆಗಿವೆ? ನೀವು ಅವರ ಜೊತೆ ಮಾತನಾಡಿ. ನಾನೂ ಕೂಡ ಎಷ್ಟೋ ಸಲ ಸುಬ್ರಮಣ್ಯಂರವರಿಗೆ ಹೇಳಿದ್ದೇನೆ. ಬೇರೆ ಇಲಾಖೆಗಳವರೊಂದಿಗೆ ಮಾತನಾಡಿದ್ದೇನೆ, ಅಗವಾನೆಯವರೊಂದಿಗೆ ಮಾತನಾಡಿದ್ದೇನೆ. ಏಕೆ ಇವತ್ತಿನ ದಿವಸ SC/ST ವಿದ್ಯಾರ್ಥಿಗಳಿಗೆ 25.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಒಂದು ವರ್ಷ, ಆರು ತಿಂಗಳುಗಳ ಹಿಂದೆ ಹೇಳಿದ್ದೀರಿ. ಇನ್ನೂ ಕೂಡ ತಾವು ಬಿಡುಗಡೆ ಮಾಡಿಲ್ಲ. ಮ್ಯಾಚಿಂಗ್ ಗ್ರಾಂಟ್ ಎಲ್ಲಿಯವರೆಗೆ ತಾವು ಕೊಡುವುದಿಲ್ಲ, ಅಲ್ಲಿಯವರೆಗೆ ಈ ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಆಗುವುದಕ್ಕೆ ಸಾಧ್ಯವಿಲ್ಲ, ಈಗಾಗಲೇ ನಮ್ಮ ಖರ್ಗೆಯವರು, ಸಿದ್ಧರಾಮಯ್ಯನವರು ಹೇಳಿದರು. ಪ್ರಧಾನ ಮಂತ್ರಿಗಳು ವಿದರ್ಭಕ್ಕೆ ಹೋಗಿದ್ದಾರೆ. ವಿದರ್ಭ ಪ್ಯಾಕೇಜ್ ಕೇವಲ ಅಲ್ಲಿ ಮಾತ್ರವೇ ಅಲ್ಲ, ಇಡೀ ರಾಜ್ಯದಲ್ಲಿ ಬೆಳಗಾಂ ಆಗಲಿ, ದಾವಣಗೆರೆ, ತುಮಕೂರು, ಹಾಸನ ಆಗಲಿ, ಇವತ್ತು ನಮ್ಮ ಉಡುಪಿಯ 6 ಜಿಲ್ಲೆಗಳಿಗೆ 2,679–00 ಕೋಟಿ ರೂಪಾಯಿಗಳು. ನೀವು Action plan prepare ಮಾಡಿರುವಿರಾ? ನಿಮ್ಮ ಸರ್ಕಾರದಿಂದ ಏನು ಮ್ಯಾಚಿಂಗ್ ಗ್ರಾಂಟ್ ಕೊಡಬೇಕಾಗಿದೆ, 2,689–00 ಕೋಟಿ. ಎಲ್ಲಿ ರೈತರ ಆತ್ಮಾಹುತಿ ಆಗುತ್ತಿತ್ತು, ತಾವು ಬಂದ ಮೇಲೆ 172 ರೈತರು ಆತ್ಮಾಹುತಿ ಮಾಡಿಕೊಂಡಿದ್ದಾರೆ. ಇದೇ ರೀತಿಯಾದಂಥ ಮಹಾರಾಷ್ಟ್ರದಲ್ಲಿ ಹಿಂದುಳಿದ ಪ್ರದೇಶವಾದ ವಿದರ್ಭದಲ್ಲಿ ಈ ರೀತಿ ಆಗುತ್ತಿದೆ. ಕರ್ನಾಟಕ ರಾಜ್ಯದಲ್ಲೂ ಈ ರೀತಿ ಆಗುತ್ತಿದೆ They accepted. ಸರ್ಕಾರಕ್ಕೆ ಹಣ ಬಂದಿದೆ, ಮೊನ್ನೆ ರಾಜ್ಯಸಭೆಯಲ್ಲಿಯೂ ಕೂಡ ನಮ್ಮ ಭಾಗದ ಬಿ.ಜೆ.ಪಿ. ಸದಸ್ಯರಾದ ಶ್ರೀ ಕೆ.ಬಿ.ಶಾಣಪ್ಪನವರು ಶರದ್ ಪವಾರ್‌ರವರಿಗೆ "ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ"? ಎಂದು ಕೇಳಿದರು. ಆಗ ಅದಕ್ಕೆ 133 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಾಗಿ ಹೇಳಿದರು. ನೀವು ಈಗಾಗಲೇ ಬಹಳ ದಿನಗಳಿಂದ ಹೇಳುತ್ತಿದ್ದೀರಿ, ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲವೆಂದು ಶ್ರೀ ಶಿವರಾಜ್ ಪಾಟೀಲ್ ಬಂದಾಗ ನಾವು ಖರ್ಗೆಯವರು, ನೀವು ಮತ್ತು ನಿಮ್ಮ ರೆವಿನ್ಯೂ ಮಿನಿಸ್ಟರ್ ಕೂಡ ಜೊತೆಯಲ್ಲಿದ್ದರು. ಅವರ ಜೊತೆ ಮಾತನಾಡಿದ್ದೇವೆ. ಮಾತನಾಡಿದ ಮೇಲೆ ಅವರು "How much money you expected from me?" ಎಂದು ಕೇಳಿದರು.

ಅದಕ್ಕೆ ನಾವು ಆದಷ್ಟು ಸ್ವಲ್ಪ ಹೆಚ್ಚಿನ ಮೊತ್ತವನ್ನು ಕೊಟ್ಟು ಸಹಾಯ ಮಾಡಿ ಎಂದು ಕೇಳಿದೆವು. ಇವರು ನಿರೀಕ್ಷೆಯೇ ಮಾಡಿರಲಿಲ್ಲ, 250-00 ಕೋಟಿ ರೂಪಾಯಿಗಳನ್ನು ಕೊಡಲಿಲ್ಲವೇ? Natural Calamity Relief Fund ನಿಂದ ತಮಗೆ ಹಣ ಬರಲಿಲ್ಲವೇ? ಇವತ್ತು ಕೇಂದ್ರದಿಂದ ಏನೂ ಹಣ ಬರುತ್ತಿಲ್ಲ, ರೈತರಿಗೆ ಏನೂ ಸಹಾಯವಾಗುತ್ತಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೀರಿ. ಕೇಂದ್ರದಿಂದ ಬರತಕ್ಕಂಥ ಹಣವೇನಿದೆ? ಶ್ರೀ ರಘುವಂಶಿ ಪ್ರಸಾದ್‌ರವರು, ಈಗಾಗಲೇ I have already given 88 crores to Karnataka State ಎಂದು ಹೇಳಿದ್ದಾರೆ. Out of that you have spent only 42 crores. ಕುಡಿಯುವ ನೀರಿನ ಬಗ್ಗೆ ಹಾಹಾಕಾರ ಇರತಕ್ಕಂಥ ಪ್ರದೇಶದಲ್ಲಿ, ಇವತ್ತು ಬರ ಪರಿಸ್ಥಿತಿ ನಿರ್ವಹಣೆ ಮಾಡತಕ್ಕಂಥ ಜವಾಬ್ದಾರಿ ಪ್ರಕಾಶರವರಿಗಿದೆ. ಪ್ರಕಾಶ್‌ರವರು ಮೊನ್ನೆ ಎಲ್ಲಾ ಜಿಲ್ಲಾಧಿಕಾರಿಗಳ ಸಭೆ ನಡೆಸಿದ್ದಾರೆ. ಎಲ್ಲಾ ಕಡೆಯಲ್ಲಿಯು ಪಿ.ಡಿ.ಅಕೌಂಟ್‌ನಲ್ಲಿ 243 ಕೋಟಿ ರೂಪಾಯಿಗಳಿವೆ ಎಂದು ಅವರೇ ಹೇಳಿದ್ದಾರೆ. ನಾವು ಹೇಳಿಲ್ಲ. ಕೇಂದ್ರದಿಂದ ಬಂದಂಥ ಹಣ 128 ತಾಲ್ಲೂಕುಗಳಲ್ಲಿ ಬರಪೀಡಿತ ಪ್ರದೇಶವೇನಿದೆ. ಇವತ್ತಿಗೆ ರಾಜ್ಯ ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಅದೇ ರೀತಿ employment guarantee scheme ನಲ್ಲಿ ಸರ್ಕಾರಕ್ಕೆ ಐದಾರು ಜಿಲ್ಲೆಗಳು ಸೇರ್ಪಡೆಯಾಗಿವೆ. ಮತ್ತಷ್ಟು ಜಿಲ್ಲೆಗಳು ಕೂಡ ಬರುತ್ತಿವೆ. ನಾನು ಉಪಮುಖ್ಯಮಂತ್ರಿಯವರಲ್ಲಿ ಕೇಳುವುದೇನೆಂದರೆ ಕೇಂದ್ರದಿಂದ ಬಂದಂಥ ಹಣವನ್ನು ಸರಿಯಾಗಿ ಉಪಯೋಗಿಸಿಕೊಂಡು ರಾಜ್ಯದ ಜನರಿಗೆ ಸಹಾಯವಾಗುವ ರೀತಿಯಲ್ಲಿ ಒದಗಿಸಬೇಕು. ಎಲ್ಲಿ ಹಣ ಬಂದಿದೆ ಎಂದರೆ ನಾಳೆ ಪತ್ರಿಕೆಗಳಲ್ಲಿ ಹಾಗೆ ವಿಷಯ ಬರುತ್ತದೆ. ಹೊರಗಡೆಯೂ ಹಾಗೆ ಹೇಳುತ್ತೀರಿ, ಹೊರಗಡೆ ಮಾತನಾಡಿದರೆ ನಡೆಯುತ್ತದೆ, ಹೊರಗಡೆ ಮಠಕ್ಕೆ, ಬೇರೆ ಕಡೆಗಳಲ್ಲಿ ನಿಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಮಾತನಾಡಿ. ನಾವು ಕೂಡ ಅಂತಹ ಪದಗಳನ್ನು ಉಪಯೋಗಿಸಿಕೊಂಡು ರಾಜಕೀಯದಲ್ಲಿ ಕೆಲಸ ಮಾಡಿದ್ದೇವೆ. ರಾಜಕೀಯದಲ್ಲಿ ಕೆಲಸ ಮಾಡುವಾಗ it requires a commitment. ಮನಃಪೂರ್ವಕವಾಗಿ ಬಡಜನತೆಗೆ ಸಹಾಯ ಮಾಡುವಂಥ ರೀತಿಯಲ್ಲಿರಬೇಕು. ಅದಕ್ಕೆ ಇವತ್ತಿನ ದಿವಸ ನಾವೇನು ಲೆಕ್ಕ ಹಾಕಿಲ್ಲ, Karnataka fiscal responsibility act

ಕೆಳಗೆ management fund ಯಾವುದು 250-00 ಕೋಟಿ ರೂಪಾಯಿಗಳಿವೆ, ಕಿಯೋನಿಕ್ಸ್ ಸಂಸ್ಥೆಗೆ ಹಣ ಬೇಕೆಂದು ಹೇಳಿದ್ದೀರಿ, ಕಿಯೋನಿಕ್ಸ್ ಸಂಸ್ಥೆ ಮೊನ್ನೆ ತಾವು ಬಂದ ಮೇಲೆ ಮಾಡಿರುವಿರಾ? Accelerated water supply scheme ಅದಕ್ಕೆ drinking facilities for Schools and Rural areas. These are all committed programmes. ನಿಮಗೆ ಸರ್ಕಾರವನ್ನು ನಡೆಸುವಂಥ ಜವಾಬ್ದಾರಿ ಕೆಲಸವನ್ನು ಕೊಟ್ಟಿದ್ದಾರೆ. ಜನ ನೇರವಾಗಿ ಅಧಿಕಾರ ವಹಿಸಿಕೊಟ್ಟಿಲ್ಲ, ಏನೋ ಒಂದು ಹೊಂದಾಣಿಕೆಯಿಂದ ಇಲ್ಲಿಗೆ ಬಂದಿದ್ದೀರಿ. ಆದರೆ ಸಮಸ್ಯೆಯೆಲ್ಲಾ ಒಂದೇ ಅಲ್ಲವೇ? ನಮ್ಮ ಕಾಲದಲ್ಲಿಯೂ ಒಂದೇ, ನಿಮ್ಮ ಕಾಲದಲ್ಲಿಯೂ ಒಂದೇ. ರಾಜ್ಯದ ಜನತೆಗೆ ಕುಡಿಯುವ ನೀರಿಗೆ ವ್ಯವಸ್ಥೆ ಮಾಡುವುದು ಇವತ್ತು ಬಂದಿದೆಯೇ? ಇವೆಲ್ಲವನ್ನೂ ಕೂಡ ಮೊದಲೇ ಸಮಗ್ರವಾಗಿ ಲೆಕ್ಕ ಹಾಕಿ ಬಜೆಟ್‌ನಲ್ಲಿ provide ಮಾಡಬೇಕಾಗಿತ್ತು, ಮಾಡಲಿಲ್ಲ. ಅದಕ್ಕೆ ಎಲ್ಲಾ ಕಡೆ ಇವತ್ತಿನ ದಿವಸ ನೀರಿನ ಹಾಹಾಕಾರ ನಡೆಯುತ್ತಿದೆ. ಸರ್ಕಾರ ರೆಂಟಲ್ ಅರಿಯರ್ಸ್ 20.00 ಲಕ್ಷ ರೂಪಾಯಿಗಳನ್ನು ಕೊಡುವುದು, ಅದು ಇವತ್ತೇ ನಿಮ್ಮಲ್ಲಿ ಬಂತೇ? ಧಾರವಾಡ ಕೆ.ಸಿ.ಸಿ. ಬ್ಯಾಂಕ್ ಅನ್ನು ಯಾರೋ ಗದಗದಲ್ಲಿರತಕ್ಕಂಥ ಗೌಡರು ಪ್ರಾರಂಭ ಮಾಡಿದ್ದರು. ಅದು ನಮಗೆ ಹಾಗೂ ಪ್ರಕಾಶ್‌ರವರಿಗೂ ಗೊತ್ತು ಕೆ.ಸಿ.ಸಿ. ಬ್ಯಾಂಕ್ ನಡೆಯುತ್ತಿಲ್ಲ, ಅದಕ್ಕೆ ರಾಜ್ಯ ಸರ್ಕಾರದ ಹಣವನ್ನು ಕೊಡತಕ್ಕಂಥ ರೀತಿಯಲ್ಲಿ ಬಹಳಷ್ಟು ದಿವಸಗಳಿಂದ ಒಂದು ಕಮಿಟ್‌ಮೆಂಟ್ ಇದೆ. ಅದಕ್ಕೂ ಕೂಡ ಇವತ್ತಿನ ದಿವಸ ತಾವು ಹಣವನ್ನು ಒದಗಿಸುವಂತದ್ದನ್ನು ಮಾಡುತ್ತಿದ್ದೀರಿ. Package ನಲ್ಲಿ failed wells 7.00 ಕೋಟಿ ಕೇಳುತ್ತಿದ್ದೀರಿ. ರಾಜ್ಯದಲ್ಲಿ ಇವತ್ತು P.L.D ಬ್ಯಾಂಕ್‌ಗಳಿಂದ ಹಣ ಕೊಡುತ್ತೀರಿ. ಎಷ್ಟು failed wells ಇದೆಯೆಂಬ ಅಂಕಿ ಅಂಶಗಳು ನಿಮಗೆ ಗೊತ್ತಾಗಲಿಲ್ಲವೇ? ಮೊದಲೇ provide ಮಾಡಲಿಕ್ಕಾಗಲಿಲ್ಲವೇ? ನಾವು ಹೇಳತಕ್ಕಂಥ ತಾತ್ಪರ್ಯ ಇಷ್ಟೇ. 16ನೇ ತಾರೀಖು ಬಜೆಟ್ ಮಂಡನೆಯಾದಾಗಿನಿಂದ ಇಲ್ಲಿಯವರೆಗೆ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಏನು 6,000 ಕೋಟಿ ರೂಪಾಯಿಗಳ ಬೇಡಿಕೆಗಳನ್ನು ಕೇಳುತ್ತಿದ್ದೀರಿ. ಅದು ಸರಿಯಾದ ರೀತಿಯಲ್ಲಿಲ್ಲ, ಸರ್ಕಾರದವರು ಮಾಡತಕ್ಕಂಥ ಕೆಲಸಕಾರ್ಯಗಳೇನು ಅಂದರೆ ಎತ್ತಿ ತೋರಿಸುವುದು. Pre metric scholorship, additionally 56.00

ಲಕ್ಷ, ಇವತ್ತು OBC Scholorship ಗಳಿಗಾಗಿ ಅಡಿಷನಾಲಿಟಿ 265.00 ಲಕ್ಷ, students scholorship ಗಳಿಗಾಗಿ 850–00 ಲಕ್ಷ ರೂಪಾಯಿಗಳು. ಇದು ರಾಜ್ಯದ ವಿದ್ಯಾರ್ಥಿಗಳಿಗೆ ಸಹಾಯ ಮಾಡತಕ್ಕಂಥ ರೀತಿಯಲ್ಲಿ ಇದೆ. These are all committed programmes. ಅದೇ ರೀತಿಯಾಗಿ ಗಂಗಾ ಕಲ್ಯಾಣ, flood relief, ಮತ್ತೆ ಜಲಸಂಪನ್ಮೂಲ ಇಲಾಖೆಯ ನೀರಾವರಿಗೆ 3,773–00 ಕೋಟಿ ರೂಪಾಯಿಗಳಿಂದ 4,800–00 ರೂಪಾಯಿಗಳು. ಮೊನ್ನೆ ನಮ್ಮ ಈಶ್ವರಪ್ಪನವರು ಮಾತನಾಡುತ್ತಿದ್ದರು, ಈಶ್ವರಪ್ಪನವರು ಅವರದ್ದೇ ಆದ ಧಾಟಿಯಿಂದ ಮಾತನಾಡುತ್ತಾರೆ. Incomplete projects ಗೆ ಎಷ್ಟು ಹಣ ಬೇಕಾಗಿದೆ ಎಂದು ಸಿದ್ಧರಾಮಯ್ಯನವರಿಗೆ ಕೇಳಿದರು. ಆಗ 2000ನೇ ಇಸವಿಯಲ್ಲಿ 3,024 ಕೋಟಿ ರೂಪಾಯಿಗಳಿದ್ದರೆ ಸಿದ್ಧರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ 3,924–00 ಕೋಟಿ ರೂಪಾಯಿಗಳು ಇತ್ತು, 900–00 crores we have increased. ಆಗ 29% irrigation ನಲ್ಲಿ ಒದಗಿಸಿದ್ದರೆ, last year budget ನಲ್ಲಿ 26% ಇದೆ. ಇವತ್ತಿನ ಬಜೆಟ್‌ನಲ್ಲಿ 17% ನೀವು ಮಾಡಿದ್ದೀರಿ. ಹೀಗಾಗಿ ಹೇಗೆ irrigation ರೈತರಿಗೆ ಏನು ಸಹಾಯ ಮಾಡುತ್ತೀರಿ? ಇವತ್ತು ರೈತರಿಗೆ ಸಹಾಯ ಮಾಡತಕ್ಕಂಥ ರೀತಿಯಲ್ಲಿ ಆಯಾಯ ಪ್ರಾಜೆಕ್ಟ್ ಕೆಳಗಿರತಕ್ಕಂಥ ಎಲ್ಲಾ ಕೃಷ್ಣಾ, ಕಾವೇರಿ ಬೇಸಿನ್‌ನಲ್ಲಿರತಕ್ಕಂಥದ್ದನ್ನು ಸರಿಯಾಗಿ ನಿರ್ವಹಣೆ ಮಾಡುವಂಥ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಅಲ್ಲಿಯೂ ಕೂಡ ಯಾವರೀತಿ ಕೆಲಸ ಮಾಡಿದ್ದಾರೆಂಬುದು ನಮಗೆ ಗೊತ್ತಿಲ್ಲ. ಬೇಡಿಕೆ ನಂ.19 ಮತ್ತು 179 – ಪುರಸಭೆಗಳ ಅಭಿವೃದ್ಧಿ ಕಾಮಗಾರಿಗಳಿಗೆ. ಗುಲ್ಬರ್ಗ ಹಾಸನ, ಮಂಡ್ಯ ಪುರಸಭೆಗಳಿಗೆ 10 ಕೋಟಿ. ಹುಬ್ಬಳ್ಳಿ ಧಾರವಾಡಕ್ಕೆ 12 ಕೋಟಿ, ಶಿವಮೊಗ್ಗಕ್ಕೆ 17.50 ಕೋಟಿ, ಉಳಿದ 17 ಜಿಲ್ಲೆಗಳಿಗೆ ತಲಾ 5 ಕೋಟಿ. ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ 11 ಕೋಟಿ. ಈ ರೀತಿ ತಾರತಮ್ಯ ಮಾಡಿದ್ದೀರಿ. ನಾನೂ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಎಂದೂ ಪ್ರತ್ಯೇಕವಾಗಿ ನಮ್ಮ ಜಿಲ್ಲೆಗೆ ಅಂತ ಹಣ ಕೇಳಲಿಲ್ಲ. ಹಿಂದುಳಿದ ಪ್ರದೇಶಕ್ಕೆ ಕೇಳಿದ್ದೇವೆ. ಬೀದರ್, ರಾಯಚೂರು ಗುಲ್ಬರ್ಗ ಹಿಂದುಳಿದ ಪ್ರದೇಶಗಳ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೇಳಿದ್ದೆವು. ಇವತ್ತು ಎಲ್ಲಾ

ಜಿಲ್ಲೆಗೆ ಹೋಲಿಸಿದರೆ ಕೇವಲ 17 ಕೋಟಿ ಮಾತ್ರ ಯಾಕೆ ಸಿಕ್ಕಿದ್ದೇ ಚಾನ್ಸು 50 ಕೋಟಿಯನ್ನೇ ಕೇಳಬೇಕಾಗಿತ್ತು. ಮತ್ತೆ ಜಲಸಂಪನ್ಮೂಲ ಇಲಾಖೆಯ ಪೆಂಡಿಂಗ್ ಬಿಲ್ಸ್ 12185 ಲಕ್ಷ ಇದೆ. ವಿದ್ಯುತ್ ಬಿಲ್ 80 ಲಕ್ಷ, energy and REC debt services ಗೆ 13 ಸಾವಿರ ಲಕ್ಷ, ಆಡಳಿತ ವೆಚ್ಚ KSRC ಗೆ 1 ಕೋಟಿ, ಈ ರೀತಿಯಾಗೇ ಎಲ್ಲ ಕಡೆ ಮಾಡಿದ್ದೀರಿ. ಎಲ್ಲ ಇಲಾಖೆಗಳದನ್ನೂ ನಾವು ಚರ್ಚೆ ಮಾಡಬೇಕಾಗಿತ್ತು. ಸಹಕಾರ ಇಲಾಖೆಗೆ 2007-08ರ ಆಯವ್ಯಯ ಭಾಷಣದಲ್ಲಿ ಸಾಲ ಮನ್ನಾ ಮಾಡಲು 1950 ಕೋಟಿ ಎಂದು ಹೇಳಿದ್ದೀರಿ. ಇದಕ್ಕಾಗಿ ಬಜೆಟ್ ನಲ್ಲಿ 500 ಕೋಟಿ ಒದಗಿಸಿದ್ದೀರಿ, nationalized banks ದು ಹೇಳುತ್ತಲೇ ಇದ್ದಿರಿ, ಒಬ್ಬ ಮುಖ್ಯಮಂತ್ರಿ ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡಲಿಲ್ಲ. ತಾವೂ ಭರಾಟೆಯಲ್ಲಿ ಹೇಳಿದಿರಿ. ಸೇಡಂನಲ್ಲಿ ಗೋಳವಲ್ಕರ್ ಜನ್ಮಶತಾಬ್ದಿಗೆ ಬಂದಿದ್ದರು, ಮರುದಿವಸವೇ ಹೇಳಿದರು : ಎಲ್ಲ ಕಡೆಯ ಸಾಲ ಮನ್ನಾ ಮಾಡುತ್ತೇನೆ ಎಂದು ಇವತ್ತು ಸಹಕಾರ ಬ್ಯಾಂಕಿನ ಅಧ್ಯಕ್ಷರುಗಳ ಜತೆ, ಆ ಕ್ಷೇತ್ರದಲ್ಲಿ ಕೆಲಸ ಮಾಡಿರುವವರ ಜೊತೆ ಪಕ್ಷಭೇದ ಮರೆತು ಇವತ್ತು ಸಹಕಾರ ಚಳುವಳಿಯನ್ನೇ ದೇಶದಲ್ಲಿ ಹಾಳು ಮಾಡುತ್ತಿದ್ದಾರೆ ಎಂಬ ಮಾತು ಕೇಳಬರುತ್ತಿದೆ. ದೇವರಾಜ ಅರಸರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಘೋರ್ಪಡೆ ಹಣಕಾಸಿನ ಸಚಿವರಾಗಿದ್ದರು. ಬಡತನದ ರೇಖೆಯೊಳಗಿನ ಬಡವರ ಬಗ್ಗೆ ಅರಸರು ಹೆಚ್ಚಿನ ವಿಶ್ವಾಸ ಮೂಡಿಸುವ ರೀತಿಯಲ್ಲಿ ಮಾಡಿದಂತಹ ಕಾರ್ಯಕ್ರಮ 8 ವರ್ಷಗಳ ಕಾಲ ಕರ್ನಾಟಕದಲ್ಲಿ ಯಾವ ಮುಖ್ಯಮಂತ್ರಿಯೂ ಮಾಡಲಿಲ್ಲ. ಆದರೆ ಇಲ್ಲಿ ಯದ್ವಾತದ್ವಾ ಯಾಕೋ ಚುನಾವಣೆಗೆ ಹೋಗುವ ಹಾಗೆ ಕಾಣುತ್ತಿದೆ. ಈ ಬಜೆಟ್ ಪಾಸಾಗುವುದರಲ್ಲಿ ನಮಗೇನು ಅನುಮಾನವಿಲ್ಲ. ನಾವಿವತ್ತು ಸದನದಲ್ಲಿದ್ದೇವೆ, ಯಾವುದೇ ಸರ್ಕಾರವಿರಲಿ ಅದಕ್ಕೆ ಸಲಹೆ ಸೂಚನೆ ಕೊಡಬೇಕೆಂಬುದು ನಮ್ಮ ಅಭಿಪ್ರಾಯ. You are causing financial crisis in the Karnataka State, today. ನಾವು ಯಾವ ಗುಡಿಗುಂಡಾರಗಳಿಗೆ ಕೊಡಿ ಅಂತ ಕೇಳಲಿಲ್ಲ. ಬೇರೆಯದಕ್ಕೆ ಮಾಡಲು ನಾವು ಹೇಳಲಿಲ್ಲ. ಇವತ್ತು ಸಾರಾಸಗಟಾಗಿ ಯಾವ ಇಲಾಖೆಗೂ ಇವರು ಬಿಡದೆ ತಾವೇ announce ಮಾಡಿಬಿಟ್ಟರು. ಇದು ಸರಿಯಾದ ನೀತಿಯಲ್ಲ. ರಾಜ್ಯದ ಅರ್ಥಸಚಿವರಾಗಿ ತಮ್ಮ ಜೀವನದಲ್ಲಿ ಸಿಕ್ಕಂತಹ ಅವಕಾಶ

ಏನಿದೆ ಯಡಿಯೂರಪ್ಪನವರೇ ರಾಜ್ಯದ ಎಕಾನಮಿ ದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವ ರೀತಿ ಉತ್ತಮ ಬಜೆಟ್ ಕೊಡಬೇಕು. ರಾಜ್ಯದ ಬಗ್ಗೆ ವಿಚಾರ ಮಾಡುವ ಅರ್ಥಶಾಸ್ತ್ರಜ್ಞರಿದ್ದಾರೆ. ಬೇರೆಯವರು ಸಹ ಹೇಳುತ್ತಾರೆ. Cheap popularity ಗಾಗಿ ಬಜೆಟ್ ಮಂಡನೆ ಆಗಬಾರದು. They will ask us also, ಅವರೇನೋ ಮಾಡಿದರು, ಅದನ್ನು ನೀವು ಸದನದಲ್ಲಿ ಪ್ರಶ್ನೆ ಮಾಡಿದ್ವಿ ಅಂತ. ಇದರ ಜೊತೆಗೆ ಪೂರ್ಣ ಪ್ರಮಾಣದ ಬಜೆಟ್ ಚರ್ಚೆಯಲ್ಲಿ ನಾವು ಭಾಗವಹಿಸುತ್ತೇವೆ. ಆದರೆ ಇವತ್ತೇನು ಹೆಚ್ಚುವರಿ ಬಜೆಟ್ ಮಂಡನೆ ಮಾಡಿದ್ದೀರಿ, ಇದರ ಬಗ್ಗೆ ಸಾಕಷ್ಟು ಜಿಜ್ಞಾಸೆ ಇದೆ. ಸರಿಯಾದ ರೀತಿ ನೀವು ಮಂಡನೆ ಮಾಡಿಲ್ಲ. ಮತ್ತು ಊಹಿಸಲಿಲ್ಲ. You have not properly anticipated the expenditure. ಸುಮ್ಮನೆ ಎಲ್ಲಾ ಕಡೆಗಾಗಿ ಹಣ ಕೇಳುವುದು. ಬೆಳಗಾವಿಯಲ್ಲೂ ಕೇಳಿದ್ದಿರಿ. ಇದು ಸರಿಯಾದದ್ದಲ್ಲ. ಹೀಗೆ ನನ್ನ ಅಭಿಪ್ರಾಯ ಹೇಳಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):– ಅಧ್ಯಕ್ಷರೇ ಕ್ಷಮಿಸಬೇಕು, ಇವತ್ತು ನಾವ್ಯಾರು ಇದರ ಬಗ್ಗೆ ಚರ್ಚೆ ಮಾಡಲು ತಯಾರಾಗಿಲ್ಲ. 5 ಸಾವಿರ ಮತ್ತು ಚಿಲ್ಲರೆ ಕೋಟಿ ಹೆಚ್ಚುವರಿ ಬಜೆಟ್‌ನಲ್ಲಿ ಬರುತ್ತದೆ ಅಂತ ನಾವು ನಿರೀಕ್ಷೆನೂ ಮಾಡಿರಲಿಲ್ಲ. ಎರಡನೆಯದು, ಇದರ ಚರ್ಚೆ ನಾವೀಗ ಆರಂಭ ಮಾಡಿದರೆ ಮೂಲ ಬಜೆಟಿನ ಮೇಲೆ ನಡೆಯುವ ಚರ್ಚೆಯ ಪಾವಿತ್ರ್ಯತೆ ಹೋಗುತ್ತೇನೋ ಅಂತ ಹಣಕಾಸು ಸಚಿವರು ಯೋಚಿಸಬೇಕಾಗಿತ್ತು. ಅಲ್ಲಿ ಏನೇನು ಹಂಚಿಕೆ ಮಾಡಿದ್ದೀರಿ ಮತ್ತೆ ಇಲ್ಲೂ ಕೊಟ್ಟುಕೊಂಡು ಹೋಗಿದ್ದೀರಿ. ಅಲ್ಲಿ ಸಾಲಲಿಲ್ಲ ಇಲ್ಲಿ ಕೊಟ್ಟೆವು ಅಂತ ಆಮೇಲೆ ಹೇಳಬಹುದಾಗಿತ್ತು. ಆದರೆ ದಿಢೀರಂತ ಯಾಕೆ ಇಲ್ಲಿ ಪ್ಲೇಸ್ ಮಾಡಿದಿರೋ ನನಗೆ ಗೊತ್ತಿಲ್ಲ. ಬಹುಶಃ ಶಾಸನಸಭೆಯಲ್ಲಿ ಚರ್ಚೆಯಾಗುತ್ತದೋ ಇಲ್ಲವೋ, ಅದು ಗಿಲಿಟಿನ್ ಆಗುವಾಗ ಇದೂ ಗಿಲಿಟಿನ್ ಆಗಿಬಿಡಲಿ ಅಂತ ಅಭಿಪ್ರಾಯವಿತ್ತೇನೋ. ಆದರೂ ಅನೇಕ ಸಲ ನಾವು ಈ ಸದನದಲ್ಲಿ ಮಾತನಾಡಿದ್ದೇವೆ. ಇದು ಒಳ್ಳೆಯ ಪದ್ಧತಿಯಲ್ಲ. ಬಜೆಟ್ ಮಂಡಿಸಿ ಅದರ ಮೇಲೆ ಚರ್ಚೆಯಾಗುವ ಮೊದಲೇ ಪೂರಕ ಅಂದಾಜುಗಳನ್ನು ತಂದಿಟ್ಟು ನಾವು ಅದನ್ನು ಇದನ್ನು ಕೈಬಿಟ್ಟಿದ್ದೆವು,

ಆ ಲೆಕ್ಕ ಹೊಂದಾಣಿಕೆಯಾಗಲಿಲ್ಲ ಎಂದರೆ the entire process of budgeting has to be questioned. ಹಾಗಾದರೆ ಬಜೆಟ್ ಮಾಡುವ ಮುನ್ನ ನೀವು ಪೂರ್ಣ ಪ್ರಮಾಣದ ಚರ್ಚೆ ಮಾಡಿರಲಿಲ್ಲವೇ ಎಲ್ಲ ಇಲಾಖೆಗಳೂ ಅವರವರ ಬೇಡಿಕೆ ಹೇಳಿರಲಿಲ್ಲವೇ ಅಂತ ಕೇಳಬೇಕಾಗುತ್ತದೆ. ಇವತ್ತು ಬಜೆಟ್ ಇಟ್ಟ ಮೇಲೆ ಯಾರ್‍ಯಾರಿಗೆ ಪ್ರಭಾವವಿದೆ ಅವರು ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ಪೂರಕ ಅಂದಾಜುಗಳಲ್ಲಿ ಇನ್ನೊಂದಷ್ಟು ಸೇರಿಸಿಕೊಂಡಿರುವುದು ಕಾಣುತ್ತಿದೆ. ಇದು ರಾಜ್ಯಕ್ಕೆ ಇಡುವ ಬಜೆಟ್? ಅಂತ ನಾವು ಕೇಳಬೇಕಾಗುತ್ತದೆ. ಈ ಪುಸ್ತಕ ಓದಿದರೆ ಹಾಗೆ ಅನ್ನಿಸುತ್ತದೆ. ಈ demands ಅನಿರೀಕ್ಷಿತ ವೆಚ್ಚಗಳಿಗೆ ಆಕಸ್ಮಿಕಗಳನ್ನು ಕವರ್ ಮಾಡಿಕೊಳ್ಳಲು ಮಾಡಬೇಕಾಗಿದ್ದಂಥವು. ಇವತ್ತು ಅಂಥದ್ದು ಇಲ್ಲಿ ಕಾಣುತ್ತಿಲ್ಲ. ಇದರ ಮೇಲೆ ಎಷ್ಟೇ ಕಟ್ ಮಾಡಿ ಮಾತನಾಡಬೇಕೆಂದರೂ ಮೂಲ ಬಜೆಟ್‌ನ ಅಂಶಗಳ ಮೇಲೆ ಮಾತನಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆ demands ಇನ್ನೂ start ಆಗಿಲ್ಲ. ಆದ್ದರಿಂದ ಎಷ್ಟು ಮಿತಿಯೊಳಗೆ ಇದರ ಮೇಲೆ ಚರ್ಚೆ ಮಾಡಬೇಕೋ ನನಗೆ ಅರ್ಥವಾಗುತ್ತಿಲ್ಲ. ಯಡಿಯೂರಪ್ಪನವರು ನಮಗೆ ದಾರಿತೋರಿಸಬೇಕಾಗುತ್ತದೆ. ಈ ಪೂರಕ ಅಂದಾಜು ಬಗ್ಗೆ ಈಗ ಮಾತನಾಡಿ ಮೂಲ ಬಜೆಟ್ ಮೇಲೆ ಆಮೇಲೆ ಮಾತನಾಡುವುದು ನಮಗೊಂದು ಹೊಸ ಪರೀಕ್ಷೆ ಅಥವಾ ಪ್ರಯೋಗ ಅಂತ ತಿಳಿದುಕೊಂಡು, ಉಪ ಮುಖ್ಯಮಂತ್ರಿಗಳೇನು ಹಣಕಾಸು ಸಚಿವರಾಗಿದ್ದಾರೆ ಕೆಲವು ಬಾಬ್ತುಗಳಲ್ಲಿ ಅನಿವಾರ್ಯತೆಯಿತ್ತೇ ಎಂದು ಕೇಳಬೇಕಾಗುತ್ತದೆ. ಮತ್ತೆ ಕೆಲವು ಬಾಬ್ತುಗಳಲ್ಲಿ ಯಾರ ಹೆಸರಲ್ಲಿ ಏನು ಮಾಡುವುದಕ್ಕೆ ಹೊರಟಿದ್ದೀರಿ ಅಂತ ಕೇಳಬೇಕಾಗುತ್ತದೆ. ಕೃಷಿ ತೋಟಗಾರಿಕೆ ಅಂತ ಹಣ ತರುತ್ತೀರಿ, ಮುಖ್ಯಮಂತ್ರಿಗಳ ಮನೆ ಮುಂದೆ ಪಾರ್ಕ್ ಮಾಡುವುದಕ್ಕೆ ಅಂತ 12 ಲಕ್ಷ ಕೊಡುತ್ತೀರಿ. ಪೂರ್ತಿ ಓದದೇ ಏನೋ ನಮ್ಮ ರೈತರಿಗೆ ಸಹಾಯ ಮಾಡಲು ಕೊಟ್ಟಿದ್ದಾರೇನೋ ಅಂತ ನಾವು ಭಾವಿಸಿಕೊಂಡರೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಮನೆಯ ಉದ್ಯಾನವನವನ್ನು ಮೇಂಟೇನ್ ಮಾಡಲು 12 ಲಕ್ಷ ಬೇಕಾ? Fisheries ನಲ್ಲಿ ಹಣ ಇಡುತ್ತೀರಿ, ಇಡೀ ಕರಾವಳಿ ಪ್ರದೇಶದಲ್ಲಿ ರಸ್ತೆ ರಿಪೇರಿ ಮಾಡುತ್ತೇವೆ ಅನ್ನುತ್ತೀರಿ. ಇದೆಲ್ಲ ನಿಮಗೆ ಸಮಾಧಾನ ಆಗುತ್ತದೆಯೇ? ಯಾರೋ ಮೀನುಗಾರರ ಹೆಸರಿನಲ್ಲಿ ರಸ್ತೆಯನ್ನು ಮಾಡುವುದು, ಯಾರೋ ಕೃಷಿ ಮಾಡುವವರ

ಹೆಸರಿನಲ್ಲಿ ಬೆಂಗಳೂರಿನಲ್ಲಿ ಪಾರ್ಕ್‌ನ್ನು ಮಾಡುವುದು, ಇನ್ಯಾರೋ ಹೆಸರಿನಲ್ಲಿ ನಿಮ್ಮ ಮಂತ್ರಿಗಳಿಗೆಲ್ಲ subsidized ಮಾಡಿಕೊಡುವುದು, ಅವರವರ ಕ್ಷೇತ್ರಕ್ಕೆ ವೆಟರ್‌ನರಿ ಆಸ್ಪತ್ರೆಗಳನ್ನು ಕಟ್ಟುವುದು, ಅವರು ಹುಟ್ಟಿದ ಜಾಗಗಳಿಗೆಲ್ಲ ಈಗಲೇ ಸಮಾಧಾನಗಳನ್ನು ಕಟ್ಟುವುದು, ತಾಜ್‌ಮಹಲ್‌ನ್ನು ನಿರ್ಮಾಣ ಮಾಡುವುದು, ಇದೆಲ್ಲಾ ಮಾಡಬೇಕಾ ಸಾರ್? ಈ ರಾಜ್ಯಕ್ಕೆ ನೀವು ಶಹಜಹಾನ್ ಆಗಬೇಕಾ? ಇದನ್ನು ಶಹಜಹಾನ್ ಇಟ್ಟಿರುವುದು. ಮಮ್ತಾಜ್ ಬೇಗಂ ಹೆಸರಿನಲ್ಲಿ ಇಡುತ್ತಿರುವ ಬಜೆಟ್ ಮತ್ತು ಪೂರಕವಾದ ಬೇಡಿಕೆಗಳು ಇವು. ಯಾವ ಯಾವ ಊರಿನಲ್ಲಿ ನೀವು ಇಟ್ಟಿದ್ದೀರಿ, ಊರುವೈಸ್ ಓದಿಕೊಂಡು ಹೋಗಿಬಿಟ್ಟರೆ ನಾವೆಲ್ಲ ಈ ಶಾಸನಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ನಾಚಿಕೆಪಡಬೇಕಾಗುತ್ತದೆ. ಯಾರ ಸಮಾಧಾನಕ್ಕೆ ಪೂರಕ ಬಜೆಟ್‌ನಲ್ಲಿ ಇಷ್ಟು ವಿಷಯಗಳು ಬಂದಿದೆ? ಬಡ್ಡಿಯೆನೋ ನೀವು 50 ಸಾವಿರದವರೆಗೆ ತೆಗೆದುಕೊಂಡು ಹೋಗಿದ್ದೀರಿ. 300 ಕೋಟಿ ಹಿಂದೆ ಕೊಟ್ಟಿದ್ದೀರಿ, ಇನ್ನು ಕೊಡಬೇಕಾಗಿತ್ತು, ಹೌದು, ಈಗ ಕೇಳಿದ್ದೀರಿ, ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದು ನಿಮ್ಮ ಕಾರ್ಯಕ್ರಮ. ಇವೆಲ್ಲಾ ಯಾರ ಕಾರ್ಯಕ್ರಮಗಳು ಸಾರ್? ಏಕೆ ಆ ಕಾರ್ಯಕ್ರಮಗಳನ್ನು ನೀವು ಇಲ್ಲಿ ತರುತ್ತಿದ್ದೀರಿ ಎಂದು ನನಗೆ ಗೊತ್ತಾಗುತ್ತಿಲ್ಲ. ಇದನ್ನು ನೀವು ಹೇಳಬೇಕು. Fisheries head ಕೆಳಗೆ ರಸ್ತೆ ನಿರ್ಮಾಣವನ್ನು ಏಕೆ ತೆಗೆದುಕೊಳ್ಳುತ್ತೀದ್ದೀರಿ? ಮೀನುಗಾರರ ಹೆಸರಿನಲ್ಲಿ ಕರಾವಳಿ ಪ್ರದೇಶದ ರಸ್ತೆಗಳ ಗುಂಡಿಗಳನ್ನು ಮುಚ್ಚುತ್ತಾರಂತೆ. ಬಾಬ್ತು ಸಂಖ್ಯೆ 101 ರಿಂದ 107 ಮೀನುಗಾರಿಕೆ ಇಲಾಖೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಹಣ ಕೇಳುತ್ತಿದ್ದೀರಿ. ಆಮೇಲೆ 288 ಲಕ್ಷ ಅಭಿಯಾಚನೆಗೆ ಸೇರಿಸಿದೆ. ಹಾಳಾದ ಗುಂಡಿ ರಸ್ತೆಗಳ ರಿಪೇರಿಗೆ ಹೆಚ್ಚುವರಿಯಾಗಿ 23.33 ಲಕ್ಷ ರೂಪಾಯಿಗಳನ್ನು ಸೇರಿಸಲಾಗಿದೆ. ಚಿಕ್ಕಮಗಳೂರಿನಲ್ಲಿ ಎಲ್ಲ ಕಡೆ ನೀವು ಇದನ್ನೇ ಮಾಡುತ್ತಿದ್ದೀರಿ. ಕರಾವಳಿ ಜಿಲ್ಲೆಯಲ್ಲಿ ಹೆಚ್ಚಿನ ಮಳೆಯಿಂದ 94–98 ರಲ್ಲಿ 10 ಲಕ್ಷ ರೂಪಾಯಿ Extra ಕೊಡುತ್ತಿದ್ದೇವೆ, 109–122 ರಲ್ಲಿ ಹಾಳಾದ ಗುಂಡಿ ರಸ್ತೆಗಳ ರಿಪೇರಿಗಾಗಿ 33 ಲಕ್ಷ ರೂಪಾಯಿಗಳು ಮತ್ತು ಮಧ್ಯಂತರ ಪರಿಹಾರಕ್ಕಾಗಿ 0.8 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಆಮೇಲೆ ಮೀನುಗಾರಿಕಾ ಅಭಿವೃದ್ಧಿ ನಿಗಮವನ್ನು ಮುಚ್ಚಲು ತೀರ್ಮಾನಿಸಲಾಗಿತ್ತು. ಮತ್ತೆ

ಪುನಶ್ಚೇತನಗೊಳಿಸಲಿಕ್ಕೆ 412 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಮತ್ತೆ 10 ಕೋಟಿ ಕೊಡುತ್ತೀರಿ. ನೀವು ಇಲ್ಲಿ ಒಂದು ಆಯೋಗವನ್ನು ನೇಮಿಸಿಕೊಂಡಿದ್ದೀರಿ. ರಾಜ್ಯ ಹಣಕಾಸು ಆಯೋಗಕ್ಕೆ ಯಾರನ್ನು ನೇಮಿಸಿದ್ದೀರಿ? ಅದಕ್ಕೆ 60 ಲಕ್ಷ ಬಜೆಟ್ ಇದ್ದುದೇ 60 ಲಕ್ಷ ಅಷ್ಟನ್ನು ಕೊಟ್ಟಿದ್ದೀರಿ. ಯಾವ ಯಾವ ವಲಯದಲ್ಲಿ ಯಾರ್ಯಾರನ್ನು meet ಮಾಡಿದ್ದಾರೆ? ಆ ಆಯೋಗದವರು ಏನು ವರದಿಯನ್ನು ಕೊಟ್ಟಿದ್ದಾರೆ? ಇದರಿಂದ ರಾಜ್ಯಕ್ಕೆ ಏನು ಪ್ರಯೋಜನವಾಗಿದೆ ಎನ್ನುವುದನ್ನು ತಾವು ಅದರ ಬಗ್ಗೆಯೂ ಸ್ವಲ್ಪ ಹೇಳಬೇಕು ಸಾರ್. ಯಾವ Economist ಅವರು? ಯಾವ ಕ್ಷೇತ್ರದಲ್ಲಿ ಅವರು ನುರಿತರಿದ್ದರು? ಈ ಆಯೋಗದ ಅಧ್ಯಕ್ಷ ಆಗುವವರ ಹಕ್ಕುಗಳು ಎಲ್ಲಿಂದ ಇತ್ತು? ಯಾವ ಯಾವ ಇಲಾಖೆಯಲ್ಲಿ ಅವರು ಅನುಭವ ಇಟ್ಟುಕೊಂಡು ಬಂದು ಅಥವಾ ಬಹಳ ಮೇಲ್ಮಟ್ಟದ ಸುಧಾರಣೆಗಳನ್ನು ಸೂಚಿಸುವಂಥವರು ಇದ್ದರು, ಇದನ್ನು ಹೇಳಬೇಕಲ್ಲ. ಹಣಕಾಸು ಆಯೋಗಕ್ಕೆ ಹಣ ಸಾಲಲಿಲ್ಲ. ನಾನು 60 ಲಕ್ಷ ಇಟ್ಟಿದ್ದೇನೆ. ಏತಕ್ಕೆ? TA, DA ಗೆ. ಇನ್ನು Officers ಬಗ್ಗೆ ಹೇಳುವುದಾದರೆ, ನಾನು ಹೋದಸಲವೂ ಭಾರೀ ತೀಕ್ಷ್ಣವಾಗಿ ಮಾತನಾಡಿದ್ದೆ. ದೆಹಲಿಯಲ್ಲಿ ಯಾರಾದರೂ ಯಾವುದಾದರೂ building useless ಎಂದು ಹರಾಜು ಹಾಕುತ್ತಾರೆಂದರೆ, ಇದು ಕರ್ನಾಟಕ ಸರ್ಕಾರದವರಿಗೆ ಏಕೆ ಬೇಕು ಸಾರ್? Reserve Bank ನವರು ಕಟ್ಟಿಸಿರುವ building ಗಳನ್ನು ಮಾರುತ್ತೇವೆಂದು ಹೇಳಿ, ನೀವು 35 ಕೋಟಿ ಚಿಲ್ಲರೆ ಕೊಟ್ಟು ದೆಹಲಿಯಲ್ಲಿ building ಅನ್ನು ಕೊಂಡುಕೊಳ್ಳುತ್ತೇವೆಂದು ಹೋಗುತ್ತಿದ್ದಿರಲ್ಲ, Is it your policy? ದೆಹಲಿಯಲ್ಲಿ Resident Commissioner ಅವರ office ನಲ್ಲಿ, ದೆಹಲಿಯಲ್ಲಿ ಕರ್ನಾಟಕ ಭವನದಲ್ಲಿ ಕೆಲಸ ಮಾಡುವ ಎಲ್ಲ ನೌಕರರ ವಸತಿ ಗೃಹಕ್ಕೆ ಈ ಹಣವನ್ನು ಇಡುತ್ತಿರುವುದು ಇದು emergency ಅಲ್ಲ. ಏತಕ್ಕೆ ಬೇಕಾಗಿತ್ತು ಸಾರ್ ಇದು. ಕರ್ನಾಟಕದಲ್ಲಿರುವವರಿಗೆ ಏನು ಮಾಡುತ್ತೀರಿ ಎಂದು ಮೊದಲು ಹೇಳಿ. ನೀವು ಹಾಗಾದರೆ ಎಲ್ಲ ನೌಕರರಿಗೂ ವಸತಿ ಗೃಹಗಳನ್ನು ಮೊದಲೇ ನಿರ್ಮಾಣ ಮಾಡಿಬಿಡಿ. ದೆಹಲಿಯಲ್ಲಿರುವವರಿಗೆ ದೆಹಲಿಯ HRA ಮತ್ತು CCA ಯನ್ನು ಕೊಡುವುದಿಲ್ಲವೇ? ಅವರು ಬಾಡಿಗೆ ಮನೆಯಲ್ಲಿದ್ದರೆ ಅಪರಾಧವೇ?

ಹಾಗಾದರೆ ನೀವು ಸಂಬಳ ನಿಗದಿ ಮಾಡುವಾಗ ಇದನ್ನೆಲ್ಲಾ ನೋಡಿ ಮಾಡುವುದಿಲ್ಲವೇ? Transfer ಮಾಡಬೇಕಾದರೆ ಇದನ್ನೆಲ್ಲ ನೋಡಿ ನಿಗದಿ ಮಾಡುವುದಿಲ್ಲವೇ? Every year, ದೆಹಲಿ ಕರ್ನಾಟಕ ಭವನದ ಹೆಸರಿನಲ್ಲಿ ಅಲ್ಲಿ Resident Commissioner ಅವರ ಹೆಸರಿನಲ್ಲಿ ಎಷ್ಟು ಹಣ ಖರ್ಚಾಗುತ್ತಿದೆ ಎಂದು ಒಂದು ಲೆಕ್ಕವನ್ನು ಇಟ್ಟುಬಿಡಿ. ಯಾರಿಗೋಸ್ಕರ ಇದು ಖರ್ಚಾಗುತ್ತಿದೆ ? ನಿಮ್ಮ ಕರ್ನಾಟಕ ಮೂರನೇ ಭವನ ನಮಗೆ ಎಷ್ಟು ಬಳಕೆಯಾಗಿದೆ ಎಂದು ಹೇಳಿ. ಯಾರ್ಯಾರು ಹೋಗಿದ್ದಾರೆ ಆ ಕರ್ನಾಟಕ ಭವನಕ್ಕೆ ನಮಗೆ ಒಂದು ಪಟ್ಟಿ ಕೊಡಿಸಿ ಯಾರ್ಯಾರು Officers transfer ಆಗಿರುವವರು permanent ಆಗಿ ಎಷ್ಟು ಎಷ್ಟು ವರ್ಷ, ಎಷ್ಟೆಷ್ಟು ತಿಂಗಳಿಂದ ಅಲ್ಲಿದ್ದಾರೆ ಎಂದು ಒಂದು ಪಟ್ಟಿ ಕೊಡಿಸಿ. ಇವರ ಮೋಜಿಗೆ Exchequer ದುಡ್ಡನ್ನು ನೀವು ಇಲ್ಲಿ ಕುಳಿತುಕೊಂಡು ಖರ್ಚು ಮಾಡುತ್ತೀರಾ? ಅದು supplementary demands ನಲ್ಲಿ ಇದು ಅರ್ಥವಾಗುತ್ತಿಲ್ಲ. ಇದನ್ನೆಲ್ಲ ನೀವು ಏಕೆ ತರುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಯಾವ ಇಲಾಖೆಯಲ್ಲಾದರೂ plan ಕೆಳಗಡೆ ಏನಾದರೂ ನಿಮಗೆ ಕೊರತೆ ಬಂದು ಕೇಂದ್ರ ಸರ್ಕಾರದವರು reimburse ಮಾಡಬೇಕಾಗಿರುವ ಹಣ ಇದೆ, ಇದನ್ನು ನಾನು release ಮಾಡುತ್ತಿದ್ದೇನೆಂದು ತಾವು ಮಾಡಿದ್ದೀರಾ? ಸಾರ್ ಇವತ್ತು ನಮ್ಮ ದುರ್ದೈವ. ಇಡೀ ರಾಜ್ಯದ ಅರಣ್ಯೀಕರಣ ನಾಶವಾಗುತ್ತಿದೆ. ನನಗೆ ಗೊತ್ತಿಲ್ಲ ಇದು, ಸನ್ಮಾನ್ಯ ಸಚಿವರು ಇದನ್ನು ಹೇಗೆ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ನಿಮಗೆ ದುಡ್ಡು ಇಲ್ಲಾದರೂ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೆ ಚನ್ನಿಗಪ್ಪನವರೇ. Afforestation, ನಿಮ್ಮ Water conservation ಎರಡೇ ಕರ್ನಾಟಕಕ್ಕೆ ಆಗಬೇಕಾಗಿತ್ತು. ಒಂದು ಕಡೆ ಮರವನ್ನು ಬೆಳೆಸಬೇಕಾಗಿತ್ತು, ಮತ್ತೊಂದು ಕಡೆ ಭೂ ಮಟ್ಟದ ನೀರನ್ನು ಸುಧಾರಣೆ ಮಾಡಬೇಕಾಗಿತ್ತು ನೀವು. ಯಾವ ಅಭಿಯಾಚನೆಯಲ್ಲೂ ನಿಮಗೆ ದುಡ್ಡಿಲ್ಲ ಚನ್ನಿಗಪ್ಪನವರೇ. ಕಾಡಿನೊಳಗೆ ಇದ್ದುಬಿಡಿ ಎಂದು ಕೈಬಿಟ್ಟುಬಿಟ್ಟಿದ್ದಾರೆ. ಅಂಥ ಯಾವ ಕಾರ್ಯಕ್ರಮವನ್ನು ಇಡದೇ ಒಂದೇ ಒಂದು ಒಪ್ಪಬಹುದಾದಂಥ ಕಾರ್ಯಕ್ರಮ ಇದರಲ್ಲಿ ಇಲ್ಲ. ತಾವು ಕೂಡ defend ಮಾಡುವಂಥ ಐದು ಸಾವಿರ ಚಿಲ್ಲರೆ ಕೋಟಿ ಇಟ್ಟು ತಾವೇನು supplementary demands ಅನ್ನು ಮಾಡುತ್ತಿದ್ದೀರಿ, ಇದರ ಮೇಲೆ ನಾವು

ಜಾಸ್ತಿ ಖರ್ಚು ಮಾಡಲಿಕ್ಕೆ ಮಾತನಾಡಲಿಕ್ಕಾಗುವುದಿಲ್ಲ ಇದು ಒಂದು. ಎರಡನೆಯದು, ಬೆಳಗಾವಿ ಬಗ್ಗೆ ನಾವು ಸ್ವಲ್ಪ ಮಾತನಾಡಬೇಕಾಗಿದೆ. ಬೆಳಗಾವಿಯಲ್ಲಿ ಅಸೆಂಬ್ಲಿ ಮಾಡುವುದಕ್ಕೆ ಎಷ್ಟು ಖರ್ಚಾಯಿತು? ಅಲ್ಲಿ ಅಷ್ಟು ದಿವಸಕ್ಕೆ? ಇದು ಯಾರ ಸಾನಿಧ್ಯದಲ್ಲಿ ಆಯಿತು? ನಾವೇನೋ ತಿಳಿದುಕೊಂಡಿದ್ದೆವು, ಏನೋ ಅಲ್ಲಿಯವರು ಬಹಳ ಕಷ್ಟಪಟ್ಟು ನಮ್ಮೆಲ್ಲರನ್ನು ಕರೆದುಕೊಂಡು ಹೋಗಿ ಆತಿಥ್ಯವನ್ನು ನೀಡಿ ಅಲ್ಲಿ ಶಾಸನಸಭೆಯನ್ನು ನಡೆಸಿಕೊಟ್ಟಿದ್ದಾರೆ ಎಂದು ಹೇಳಿ. The thinking was like that. Deputy Commissioner ಗೆ ಕಾಗದವನ್ನು ಬರೆಯುವುದು Resident Commissioner ಗೆ ಕಾಗದವನ್ನು ಬರೆಯುವುದು. ಅಲ್ಲೊಂದು ಕಮಿಟಿ ಆಗಿಬಿಟ್ಟಿತ್ತು. ತಮಗೂ ಗೊತ್ತು. ಅಲ್ಲೂ ಇದರ ಬಗ್ಗೆ ಮಾತನಾಡಿದೆವು, ಎಷ್ಟೆಷ್ಟು ಖರ್ಚಾಗಿದೆ ಎಂದು. ತಾವೇ ಅದನ್ನು ಓದಿಬಿಡಿ. ಬಾಬ್ತು ಸಂಖ್ಯೆ 19 ರೆವಿನ್ಯೂನಲ್ಲಿ ಎಷ್ಟು ಇದೆ ಎಂದು. " ವಿಶೇಷ ಅಧಿವೇಶನವನ್ನು ನಡೆಸಲು ತೀರ್ಮಾನಿಸಲಾಯಿತು. ಆದ್ದರಿಂದ 220 ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಮೊತ್ತವನ್ನು ಮಂಜೂರಿ ಮಾಡಿತು." ಮತ್ತು ಬೆಳಗಾವಿ ವಿಭಾಗದ ಕಚೇರಿ ನಿರ್ವಹಣೆಗಾಗಿ 50 ಲಕ್ಷ ಆಯಿತು. ಆಮೇಲೆ ಬಾಬ್ತು 21 ರಲ್ಲಿ 10 ಲಕ್ಷ ರೂಪಾಯಿ ಖರ್ಚಾಯಿತು. ಇನ್ನು ನಮಗೆಲ್ಲ TA, DA ಕೊಡಲು ಇದೆಲ್ಲ ಹೆಚ್ಚುವರಿ ಬಾಬ್ತು ಆಯಿತು. ನೀವು ತೆಗೆದುಕೊಳ್ಳುವ ತೀರ್ಮಾನಗಳಿಗೆ ಏನು ಆಗಬೇಕಾಗಿದೆ? ಎಲ್ಲಾದರೂ ಇದು ಶಾಸನಸಭೆಯಲ್ಲಿ ತೀರ್ಮಾನವಾಗಿತ್ತಾ? ಮತ್ತು ಖರ್ಚನ್ನು ನೀವೇ ಮಾಡಿದ ಮೇಲೆ ಅಲ್ಲಿ host ಎಂದು ಏಕೆ ನೀವು creat ಮಾಡಿದಿರಿ? ಇದು ನಮಗೆ ಅರ್ಥವಾಗಲಿಲ್ಲ. ಯಾರದೋ ದಾಕ್ಷಿಣ್ಯದಲ್ಲಿ ಇದ್ದುಕೊಂಡು ಶಾಸನಸಭೆಯನ್ನು ನಡೆಸುವ ಸ್ಥಿತಿಯನ್ನು ನಮಗ್ಯಾಕೆ ತಂದಿರಿ? ಶಾಸನಸಭೆಯಲ್ಲಿ ಮಾತನಾಡಬೇಕಾದರೂ ಉತ್ತರ ಕರ್ನಾಟಕಕ್ಕೆ ಸೀಮಿತವಾಗಿ ಚರ್ಚೆ ಮಾಡಿ ಎನ್ನುವ ಸ್ಥಿತಿಯನ್ನು ನಮಗ್ಯಾಕೆ ತಂದಿರಿ? ನೀವು. Was it called an Assembly Session? It was nothing but Zilla Panchayat meeting. ಏತಕ್ಕೆ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ? ಎಂದು ತಾವು ಹೇಳಬೇಕಲ್ಲ. ನಾವು ಅದನ್ನು ಅಸೆಂಬ್ಲಿ ಸೆಷನ್ ಎಂದು ತಿಳಿದುಕೊಳ್ಳಲಿಲ್ಲ. ನೀವು ಕರೆಯಬೇಕಾದರೂ ನೀವು ಕರೆದು ಆ ನಂತರ ನಮಗೆ ಹೇಳಿದಿರಿ. ಈ ಭಾಗದವರಿಗೆ ಮಾತನಾಡುವುದಕ್ಕೆ ಬಿಡಿ ಎಂದು. ಹಾಗಾದರೆ

ಅಸೆಂಬ್ಲಿಯನ್ನು ನೀವು ಹೀಗೆ ನಡೆಸಿಕೊಂಡು ಹೋಗುವುದಾದರೆ ದಯಮಾಡಿ ನಾವು demand ಮಾಡುತ್ತಿದ್ದೇವೆ, ಪ್ರತಿ ಜಿಲ್ಲಾ ಕೇಂದ್ರದಲ್ಲೂ ಶಾಸನ ಸಭೆ ನಡೆಯಬೇಕು. ನಮ್ಮಲ್ಲೂ ನಡೆಸಿ. ನಮ್ಮದೂ ಚರ್ಚೆ ಮಾಡಿ. ನಮಗೂ ಅವತ್ತು ರೋಡ್ ಮಾಡಿ. ನಮಗೂ ಅವತ್ತು building ಮಾಡಿ. ನೀವು ಅಸೆಂಬ್ಲಿ ನಡೆಸುತ್ತೇವೆಂದು ಬೆಳಗಾಂ ಸಿಟಿಯಲ್ಲಿ ಖರ್ಚುಮಾಡಿದ account ಅನ್ನು ಇವತ್ತು ಮುಂದಿಡಿ. ಅಸೆಂಬ್ಲಿಗೋಸ್ಕರ ಅಲ್ಲದೆ ಮಾಡಿರುವುದನ್ನು ಇವತ್ತು ಚರ್ಚೆ ಮಾಡಿಸಿ ಇವತ್ತು. ಯಾರು ಸಾರ್ ಇದಕ್ಕೆ ಜವಾಬ್ದಾರರು? ಏತಕ್ಕೆ conclude ಆಗಲಿಲ್ಲ? ಏತಕ್ಕೆ ನಿಮ್ಮ ಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡಿಗರಿಗೆ ವ್ಯವಸ್ಥೆ ಮಾಡುವುದಕ್ಕೆ ಈ ಶಾಸನಸಭೆ ಇರುವುದು. ನಾವು ಎಲ್ಲರಿಗಿಂತ ಹೆಚ್ಚು ಅಭಿಮಾನ ಇಟ್ಟುಕೊಂಡಿರುವುದು ಬೆಳಗಾವಿ ಮೇಲೆ. ತಾವು ಖರ್ಚುವೆಚ್ಚದ ಬಗ್ಗೆ ಇಲ್ಲಿ ಹೇಳಬೇಕು. ಎಷ್ಟು ಖರ್ಚು ಮಾಡಿ ಈ ಕೆಲಸವನ್ನು ಮಾಡುತ್ತಿದ್ದೇವೆಂದು. ನಾಳೆ ನಾವು ಜನರಿಗೆ ಉತ್ತರವನ್ನು ಹೇಳಬೇಕಲ್ಲ. ಏನಪ್ಪ ಬೆಳಗಾಂಗೆಂದು excursion ಗೆ ಹೋಗಿದ್ದಿರಾ? Sight seeing ಗೆ ಹೋಗಿದ್ದಿರಾ? ಏನೇನು ಮಾಡಿ ಬಂದೆವು ಎಂದು ಹೇಳಬೇಕಲ್ಲ. ಇವೆಲ್ಲವನ್ನು ನೋಡಿದರೆ ಸರ್ಕಾರಕ್ಕೆ ಒಂದು ನಿರ್ದಿಷ್ಟವಾದ ನಿಲುವೇ ಇಲ್ಲ. ನೀವೇನು ಮಾಡಬೇಕೆಂದು ಇದ್ದೀರಿ ಎಂದು ಹೇಳಿ ನಿಲುವೇ ಇಲ್ಲ. ಇನ್ನು ಬರ ಪರಿಹಾರದ್ದು. ನಾವು ಈಗಾಗಲೇ ಕೇಳಿದೆವು. ಮೇವಿಗಾಗಿ ಹೆಚ್ಚುವರಿಯಾಗಿ 50 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ, ಇದರಲ್ಲಿ ಮೂವತ್ತೇಳುವರೆ ಲಕ್ಷ ಕೇಂದ್ರದ ಬಾಬ್ತು, ಉಳಿದದ್ದು ಹನ್ನೆರಡೂವರೆ ಲಕ್ಷ. ಸಾರ್, ನಾವು ಬರಗಾಲದ ದವಡೆಗೆ ಸಿಲುಕಿರುವವರು. ನಮಗೆ ಒಂದು ಪಟ್ಟಿ ಕೊಡಿ. ನಮ್ಮ ಜಿಲ್ಲೆಗಳಲ್ಲಿ ಇವತ್ತು ಮೇವಿಗಾಗಿ ಎಷ್ಟು ಹಣವನ್ನು release ಮಾಡಿದ್ದೀರಿ? ಒಂದು ರೂಪಾಯಿ ಕೂಡ ಮಾಡಿಲ್ಲ. ನಮ್ಮ ಡಿಸ್ಟ್ರಿಕ್ಟ್ ಇನ್ ಚಾರ್ಜ್ ಮಿನಿಸ್ಟರ್ ಅವರು ಹೇಳಲಿ. ಮೇವಿಗಾಗಿ ಇವತ್ತಿನವರೆಗೂ release ಆಗಿಲ್ಲ. ನಾವು ಕಾಮಗಾರಿಗಳನ್ನು ಮಾಡಿದ್ದೇವೆ. ಮೇವನ್ನು ಕೊಳ್ಳಬೇಕೆಂದರೆ ಗೋಶಾಲೆಯನ್ನು ಮಾಡುತ್ತೇವೆಂದರು. ಗೋಶಾಲೆ ಮಾಡುತ್ತಾರೆ ಎಂದರೆ ಇಲ್ಲ, ಮೇವನ್ನು ತೆಗೆದುಕೊಳ್ಳಬಹುದು ಎಂದು ಇಲ್ಲಿ ಉತ್ತರವನ್ನು ಹೇಳಿದಿರಿ. ಸನ್ಮಾನ್ಯ ಸಚಿವರು ಇಲ್ಲಿದ್ದೀರಿ *in charge*

Minister Scarcity ಗೆ ಮೇವಿಗೆ ಇವತ್ತಿನವರೆಗೆ ರೈತರಿಗೆ ಯಾವುದೇ ರೀತಿ ಸಬ್ಸಿಡಿಯನ್ನು ನಿಮ್ಮ ಸರ್ಕಾರದ ವತಿಯಿಂದ ಕೊಟ್ಟಿಲ್ಲ. ಯಾರಿಗೂ ಹೇಳಿಲ್ಲ. ನೀವು ಮೇವನ್ನು ತೆಗೆದುಕೊಂಡು ಬನ್ನಿ, ಮೇವಿನ ದುಡ್ಡನ್ನು ಕೊಡುತ್ತೇವೆಂತಲೋ, transportation ದುಡ್ಡನ್ನು ಕೊಡುತ್ತೇವೆಂತಲೋ ಹೇಳಿಲ್ಲ. ಇನ್ನು ಪ್ರವಾಹ, ಎಲ್ಲಿ ಖರ್ಚಾಗುತ್ತಿದೆ ಈ ಹಣ? ನಮ್ಮವು ಇನ್ನು ಬಿಲ್‌ಗಳೇ ಆಗಿಲ್ಲ. ಪ್ರವಾಹ ಪರಿಹಾರ ಕಾಮಗಾರಿಗಳಲ್ಲಿ ಕೆಲಸಗಳು ಸಣ್ಣಮಟ್ಟವು ಐದೈದು ಲಕ್ಷ, ಹತ್ತತ್ತು ಲಕ್ಷ ರೂಪಾಯಿ ಒಂದೊಂದು ತಾಲ್ಲೂಕಿಗೆ ಡಿಸಿ ಗಳಿಗೆ ಕೊಟ್ಟಿದ್ದರು, ಇವತ್ತಿನವರೆಗೂ ಬಿಲ್ ಪೇಮೆಂಟ್ ಆಗಿಲ್ಲ. ಹಣವನ್ನು ಇಲ್ಲಿ ಕೊಡುತ್ತೇವೆಂದು ಹೇಳಿದ ಮೇಲೆ ಏತಕ್ಕೆ ಪೇಮೆಂಟ್‌ನ್ನು ಮಾಡಿಲ್ಲವೆಂದು ಹೇಳಬೇಕಾಗುತ್ತದೆ. ಆಮೇಲೆ PWD ಯಲ್ಲಿ ನಾನು ಕೇಳುತ್ತಿದ್ದೇನೆ, PWD ಯಲ್ಲಿರುವ arrears bill ಎಷ್ಟು? ಎಷ್ಟು ವರ್ಷದಿಂದ ಇದೆ? ಯಾವ ಮಾನದಂಡವನ್ನು ಇವತ್ತು ತಾವು adopt ಮಾಡಿಕೊಂಡು arrears payment ಮಾಡಿದ್ದೀರಿ ಎಂದು ಹೇಳಬೇಕು. ಮತ್ತು ಯಾವ್ಯಾವ ಜಿಲ್ಲೆಗಳಿಗೆ ಕೊಟ್ಟಿದ್ದೀರೆಂದು ಹೇಳಬೇಕು. ಇರಿಗೇಶನ್‌ನಲ್ಲೂ ನೀವು ಹೇಳಬೇಕು. ಇರಿಗೇಶನ್‌ನಲ್ಲಿ ಕಂಟ್ರಾಕ್ಟ್ ಮಾಡಿದವರು ಎಷ್ಟು ದಿವಸಗಳಿಂದ ಬಿಲ್‌ಗೆ ಕಾಯುತ್ತಿದ್ದಾರೆಂದು ನೀವು ಹೇಳಬೇಕು. ಯಾವ ಆಧಾರದ ಮೇಲೆ ನೀವು ಕೊಟ್ಟುಕೊಂಡು ಹೋಗುತ್ತಿದ್ದೀರಿ? ಹೇಳಿ. ಯಾರಿಗೆ ಬಿಲ್ ಕೊಡುತ್ತಿದ್ದೀರಿ? ಯಾವ್ಯಾವ ಜಿಲ್ಲೆಗಳಿಗೆ ಕೊಟ್ಟಿದ್ದೀರಿ? LOC ಹೇಗೆ ರಿಲೀಸ್ ಆಗುತ್ತಿದೆ? ವಿಧಾನಸೌಧದೊಳಗೆ, ಈ ಶಾಸನ ಸಭೆಯೊಳಗೆ ಯಾರಿಗೆ ಪ್ರಭಾವವಿದೆಯೋ, ಅವರವರ ಹೆಸರಿಗೆ ಇಷ್ಟಿಷ್ಟು ಎಂದು, ನಾನು Original Budget ನಲ್ಲಿ ಇಟ್ಟಿಲ್ಲ, Supplementary Budgetನಲ್ಲಿ ಇಟ್ಟುಕೊಳ್ಳುತ್ತೇನೆಂದು ಉಪಮುಖ್ಯಮಂತ್ರಿಗಳು ರಾಜಿಯಾಗಿಬಿಟ್ಟರೆ, ರಾಜ್ಯ ಯಾವ ದಿಕ್ಕಿಗೆ ಹೋಗಬೇಕಾಗುತ್ತದೆ? ನಮಗೆ ಅರ್ಥವಾಗುತ್ತಿಲ್ಲ. What is the emergency in placing such a supplementary demand in the Assembly ? ಇದರಲ್ಲಿ ಕನಿಷ್ಠ ಮೂರನೇ ಒಂದು ಭಾಗದಷ್ಟು ಕೂಡ ಅತ್ಯಂತ ತುರ್ತು ಎಂದು ಇದ್ದು, ಪಾಸ್ ಮಾಡಲೇಬೇಕು ಎಂದು ನನಗನ್ನಿಸುವುದಿಲ್ಲ. ಸಿದ್ಧರಾಮಯ್ಯನವರು ಆ ಖಾತೆಯನ್ನು ನಿರ್ವಹಿಸಿದರು. ಅವರು ಏನು ಹೇಳುತ್ತಾರೋ, ನನಗೆ ಗೊತ್ತಿಲ್ಲ. ಸುಮಾರು 5 ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳಷ್ಟು supplementary

demand ಇಡುತ್ತಿದ್ದೇವೆ. Not one thousand crore is worth for discussion under this supplementary demands. ನಿಮ್ಮದು ಬಜೆಟ್ ಚರ್ಚೆ ಇತ್ತು, ಮಾಡಬೇಕಾಗಿತ್ತು. ಇದೆಲ್ಲಕ್ಕೂ ಪೂರಕವಾಗಿ ಏನು additional ಆಗಿ ಬಜೆಟ್ ಇಟ್ಟುಕೊಂಡು, ಬಂದಿರುವುದನ್ನೆಲ್ಲಾ ನೀವು emergency ಎಂದು ತಂದಿದ್ದೀರಿ. What is your policy in Housing? Slum Board ಏನಿತ್ತು KHSDP, IHSDP ಅನ್ನು ಏನೇನು ಮಾಡುವುದಕ್ಕೆ ಹೊರಟಿದ್ದೀರಿ? ಅದನ್ನು ಈ ಶಾಸನಸಭೆಯಲ್ಲಿ ನಿಂತುಕೊಂಡು ಹೇಳಿ. ನಗರದಲ್ಲಿ ಮನೆ ಕಟ್ಟುವ ಕಾರ್ಯಕ್ರಮವೇನು? ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟುತ್ತಿರುವ ಕಾರ್ಯಕ್ರಮವೇನು? ಹಳ್ಳಿಗಳಲ್ಲಿ ಮನೆ ಕಟ್ಟುವ ಕಾರ್ಯಕ್ರಮವಾದ ಇಂದಿರಾ ಆವಾಸ್ ಯೋಜನೆಯಡಿ 2004–05 ಮತ್ತು 2005–06 ನೇ ಸಾಲಿನ ದುಡ್ಡನ್ನು ಕೊಟ್ಟಿದ್ದೀರಾ? ಏಕೆ ಕೊಟ್ಟಿಲ್ಲ? ಕೇಂದ್ರ ಸರ್ಕಾರದ ಹಣವನ್ನೇಕೆ ನೀವು ಬಳಸಲಿಲ್ಲ? ಇಲ್ಲಿ ನಮ್ಮನ್ನೆಲ್ಲಾ ಕೇಳಿ list ಮಾಡಿಸಿದಿರಿ. ವಾಲ್ಮೀಕಿ–ಅಂಬೇಡ್ಕರ್ ಯೋಜನೆಯಲ್ಲಿ ನೀವು ಫಲಾನುಭವಿಗಳಿಂದ ಹತ್ತು ಸಾವಿರ ಹಣವನ್ನು ಕೊಡಿಸಿಬಿಡಿ ನಾವು ಮನೆ ಕೊಡುತ್ತೇವೆಂದು ಒಂದು ಯೋಜನೆ ಮಾಡಿದಿರಿ. ಆ ದುಡ್ಡೂ ಇಲ್ಲ, ಮನೆಯೂ ಇಲ್ಲ. ಈಗ Slum Board ನವರು ನಿಮ್ಮ D. D. ಗಳನ್ನು ವಾಪಸ್ ತೆಗೆದುಕೊಳ್ಳಿರೆಂದು ಆದೇಶ ಮಾಡಿದ್ದಾರೆ. What is your programme ? ಇನ್ನು IHSDP programme ನಲ್ಲಿ ಎಷ್ಟು ಕೋಟಿ ರೂಪಾಯಿಯನ್ನು ಇಲ್ಲಿ ನಿಗದಿ ಮಾಡಿಕೊಂಡಿದ್ದೀರಿ? ಈಗ ಎಷ್ಟು ಕೋಟಿ ರೂಪಾಯಿಗಳಿಗೆ ಅದು ಇಳಿದಿದೆ? ಹಾಗಾದರೆ, ಪೂರಕ ಬಜೆಟ್‌ನಲ್ಲಿ ಬೇರೆ ಊರುಗಳಿಗೆ ಅಂದರೆ ನಿಮ್ಮ ರಾಮನಗರ, ಶಿಕಾರಿಪುರ ಅಥವಾ ಹೊನ್ನಾಳಿ, ಇಂತಹ 4–5 ತಾಲ್ಲೂಕುಗಳನ್ನು ಬಿಟ್ಟು, ಬೇರೆ ಊರುಗಳಿಗೆ ತಾವು Slum Board ನಿಂದ ಎಷ್ಟು ಮನೆಗಳನ್ನು ಕೊಡಿಸುತ್ತೀರೆಂದು ಇಲ್ಲಿ ತಾವು ಎದೆ ಮೇಲೆ ಕೈಯನ್ನಿಟ್ಟುಕೊಂಡು ಹೇಳಬೇಕು? ನಮಗೆ ಗೊತ್ತಿದೆ Slum Board ಗೆ ಬಂದಿರುವ 15 ಕೋಟಿ ರೂಪಾಯಿಗಳು ನಿಮ್ಮಿಬ್ಬರು–ಮೂವರ ಮಧ್ಯ ಹಂಚಿಕೆಯಾಗುತ್ತದೆಂದು ನಮಗೆ ಇವತ್ತೇ ಗೊತ್ತಿದೆ. ಇದನ್ನು ಯಾರೂ ಹೇಳಬೇಕಾಗಿಲ್ಲ. Things go without saying. ಶಾಸನಸಭೆ ಮುಂದೆ ಇದನ್ನೆಲ್ಲಾ ಏತಕ್ಕಾಗಿ ಇಡಬೇಕು? ಬೇರೆ ಪ್ರದೇಶಗಳಿಂದ ಗೆದ್ದು ಬಂದಿರುವ ಶಾಸಕರಾದ ನಾವುಗಳು ಏನು ಮಾಡಬೇಕು?

ಕಾರ್ಯಕ್ರಮಗಳನ್ನು ನಿಮ್ಮ ನಿಮ್ಮ ಕ್ಷೇತ್ರಗಳಿಗೆ ನೀವು ಸೀಮಿತವಾಗಿ ಇಟ್ಟುಕೊಂಡರೆ ಹೇಗೆ? ಚಲುವರಾಯ ಸ್ವಾಮಿಯವರು ಆವತ್ತಿನ ದಿವಸ ದೂರದರ್ಶನದಲ್ಲಿ ಮಾತನಾಡುತ್ತಾ, Individualised Budget ಎಂದು ನೇರವಾಗಿ ಹೇಳಿದರು. ಅವರನ್ನು ತೃಪ್ತಿ ಮಾಡುವುದಕ್ಕೋಸ್ಕರ ಇವತ್ತು ನಾಗಮಂಗಲಕ್ಕೆ ದುಡ್ಡು ಕೊಡುತ್ತೀರಿ. ಅವರು open ಆಗಿ ಹೇಳಿದ್ದು. I challenge in this House. He made a statement, about "Individualised Budget" ವ್ಯಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿರುವ ಬಜೆಟ್ ಎಂದು ನಿಮ್ಮ ಕ್ಯಾಬಿನೆಟ್ ಸಚಿವರು public ನಲ್ಲಿ ಹೇಳಿದರು.

ಶ್ರೀ ಬಿ. ಶಿವರಾಮು :- ಅವರು ಅದಕ್ಕೆ deny ಸಹ ಮಾಡಿಲ್ಲ

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವರು deny ಮಾಡಲಿಲ್ಲ. ನೀವು ಅವರನ್ನು ತೃಪ್ತಿ ಪಡಿಸುವುದಕ್ಕೋಸ್ಕರ ದುಡ್ಡನ್ನು ಇಟ್ಟುಕೊಂಡರೆ, ಇದನ್ನು ಪೂರಕ ಅಂದಾಜು ಎಂದು ನಾವು ಕರೆಯಬೇಕೆ?

ಶ್ರೀ ಬಿ. ಶಿವರಾಮು :- ಬೇರೆಯವರೂ ಸ್ವಲ್ಪ ಹಾಗೇ ಮಾತನಾಡಿದ್ದರೆ, ಅವರಿಗೂ ಸ್ವಲ್ಪ ಅನುಕೂಲವಾಗುತ್ತಿತ್ತು ! ಏಕೆಂದರೆ, ಅವರೆಲ್ಲಾ, ತಣ್ಣಗಾಗಿದ್ದಾರೆ, ಅವರಿಗೆ ದುಡ್ಡಿಲ್ಲ ಅಷ್ಟೇ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಬೇರೆ ಎಂ.ಎಲ್.ಎ ಗಳಿಗೆ ಬುದ್ಧಿ ಬೇಡವೇ? ನೀವೂ ಎದ್ದೆದ್ದು ಒಂದೊಂದು ಟೀಕೆ ಮಾಡಿದ್ದರೆ, supplementary demands ನಲ್ಲಿ ದುಡ್ಡು ಜಾಸ್ತಿ ಮಾಡಿಕೊಡುತ್ತಿರಲಿಲ್ಲವೇ?

ಶ್ರೀ ಬಿ. ಶಿವರಾಮು :- ರೇವಣ್ಣನವರಿಗೆ, ಒಂದಿಬ್ಬರಿಗೆ ಬಿಟ್ಟುಕೊಟ್ಟರು. ಬಾಕಿಯವರು ಸುಮ್ಮನಿದ್ದಾರೆ. ಅದಕ್ಕೆ ಅವರಿಗೆ ಸಿಗಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾವು ಬಜೆಟ್ ಮೇಲೆ ಪ್ರತಿಕ್ರಿಯೆ ಮಾಡಬೇಕಾದರೆ, ಇದು Individualised Budget, ಹೆಚ್ಚು ಗಮನವನ್ನು ವ್ಯಕ್ತಿಗಳ ದೃಷ್ಟಿಯಿಂದ ತೆಗೆದುಕೊಂಡಿದ್ದಾರೆಂದು ಹೇಳಿದ್ದೀರೆಂದು ಹೇಳಿದ್ದೇನೆ. ನಾನು ಇನ್ನೇನೂ ಹೇಳಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ :- ಬಜೆಟ್ ಬಗ್ಗೆ ಕಾಮೆಂಟ್ ಆಗಲಿ, ಉಪಮುಖ್ಯಮಂತ್ರಿಯವರು ಬಜೆಟ್‌ನ್ನು ಸರಿಯಾಗಿ ಕೊಟ್ಟಿಲ್ಲ ಎಂದಾಗಲಿ ನಾನು ಹೇಳಲಿಲ್ಲ. ಎಲ್ಲವನ್ನೂ ಸ್ವಾಗತ ಮಾಡಿ, ಸ್ವಲ್ಪ ವ್ಯತ್ಯಾಸ ಇದೆ, ಅದರ ಬಗ್ಗೆ ನಾವು ಅವರ ಹತ್ತಿರ ಮಾತನಾಡುತ್ತೇವೆಂದು ಹೇಳಿದ್ದೇವಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವು ದೂರದರ್ಶನದಲ್ಲಿ ನೋಡಿದ್ದೇವೆ. ಅಷ್ಟು ಹೇಳಿದ್ದೇವೆ. ನಿಮ್ಮ reaction ನೀವೇನೂ ಕೆಟ್ಟ ಮಾತಗಳನ್ನಾಡಿದ್ದೀರೆಂದು ನಾವೇನೂ ಹೇಳಿಲ್ಲ. ಅದಕ್ಕೆ ಈಗ ನಾಗಮಂಗಲ ಬಂದು ಬಿಟ್ಟಿತು.

ಶ್ರೀ ಎನ್. ಚಲುವರಾಯಸ್ವಾಮಿ :- ಈ ಸರ್ಕಾರ ಎಷ್ಟು transparent ಆಗಿದೆ, at least ನಿಮ್ಮ ಕೈಯಿಂದ ನಾವು ತಪ್ಪು ಹೇಳಿಸಿಕೊಳ್ಳುವ ಮೊದಲೇ ಏನಾದರೂ ವ್ಯತ್ಯಾಸವಾಗಿದ್ದರೆ, ನಾವೇ ಅದನ್ನು ಮಾತನಾಡಿಕೊಂಡು ಸರಿಪಡಿಸಿಕೊಳ್ಳುತ್ತೇವೆಂದು ಹೇಳಿದ್ದೆ.

ಶ್ರೀ ಬಿ. ಶಿವರಾಮು :- ಎಷ್ಟು transparent ಆಗಿದೆ ಎನ್ನುವುದಕ್ಕೆ ಇದೊಂದು ನಿದರ್ಶನ. ನಿಮ್ಮ reaction ಗೆ ಈಗ supplementary Budget ನಲ್ಲಿ ಬಂದಿದೆ. ಇಷ್ಟೇ ಆಗುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಬೀದಿ ಜಗಳವನ್ನೆಲ್ಲಾ transparency ಎಂದು ಹೇಳಿಬಿಟ್ಟರೆ, ಇನ್ನು ಆ transparency Act ಗೆ ಬೆಲೆಯೇ ಇಲ್ಲ. ಇದು ಇವರ ಬೀದಿ ಜಗಳ. ಚಲುವರಾಯಸ್ವಾಮಿಯವರು ಬೀದಿ ಜಗಳವನ್ನೇ transparency Act ಗೆ ಹೋಲಿಕೆ ಮಾಡುತ್ತಿದ್ದಾರೆ. ಹೀಗಾದರೆ, transparency Act ಏನಾಗಬೇಕು? ಹಾಗಾದರೆ, transparency Act ಏಕೆ ಬೇಕು? ಅದರ ಗತಿ ಏನಾಗಬೇಕು?

ಶ್ರೀ ಬಿ. ಶಿವರಾಮು :- ಈಗ Transparency Act ಎಂದರೆ, ಏನೆಂದು ಅವರನ್ನು ಕೇಳಬೇಕಾಗುತ್ತದೆ. ಇವರ ದೃಷ್ಟಿಯಲ್ಲಿ ಅದೇನಾ? ಬೀದಿ ಜಗಳ ನಿಮ್ಮದು.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ :– ಅದರ ಬಗ್ಗೆ ಒಳ್ಳೆಯದನ್ನು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಸರ್ಕಾರದಲ್ಲಿ ಹೊಂದಾಣಿಕೆ ಇಲ್ಲ ಎನ್ನತಕ್ಕಂಥಾದ್ದು, ಅದಕ್ಕೂ Transparency Act ಗೂ ಏಕೆ ಸಂಬಂಧ ಬೆಳೆಸುತ್ತೀರಿ?

ಶ್ರೀ ಎನ್. ಚಲುವರಾಯಸ್ವಾಮಿ :– ರಾಷ್ಟ್ರದಿಂದ ರಾಜ್ಯದವರೆಗೆ ಎಲ್ಲಾ ಪಕ್ಷಗಳಲ್ಲೂ ಹೊಂದಾಣಿಕೆ ಯಾವ ರೀತಿ ಇದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ಒಂದು ವಿನಂತಿ. ಶಿವರಾಮಣ್ಣನವರೆ, ಒಂದು ನಿಮಿಷ ಕೇಳಿ. ಒಳ್ಳೆಯ ಬಜೆಟ್‌ನ್ನು ಕೊಟ್ಟಿದ್ದೇವೆ. ಆ ಬಜೆಟ್ ಬಗ್ಗೆ ಒಳ್ಳೆಯ ಅಭಿಪ್ರಾಯ, ಸಮಸ್ಯೆ ಇದ್ದರೂ ಹೇಳಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– That is what exactly we mean ಚಲುವರಾಯ ಸ್ವಾಮಿಯವರೆ, ಅದು ಒಳ್ಳೆಯ ಬಜೆಟ್ ಚಲುವರಾಯಸ್ವಾಮಿಯವರು ಇವತ್ತು ಹೇಳುತ್ತಿದ್ದಾರೆ. ಆದರೆ, 16 ನೇ ತಾರೀಖು ಅದನ್ನು ಒಪ್ಪಲಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ :– ಅವತ್ತೂ ಹೇಳಿದ್ದೇವೆ. ಅವತ್ತೂ ಪತ್ರಿಕೆಯಲ್ಲಿ, electronic media ದಲ್ಲಿ ಹೇಳಿದ್ದೇವೆ. ಸಾರಾಯಿ ರದ್ದು ಮಾಡಿರುವುದು, ಲಾಟರಿ ರದ್ದು ಮಾಡಿರುವುದು, ರೈತರಿಗೆ ಸಾಲ ಮನ್ನಾ ಮಾಡಿರುವುದು, ಬಡ್ಡಿ ಮನ್ನಾ ಮಾಡಿರುವುದು, ಈ ರೀತಿ ಪ್ರತಿಯೊಂದನ್ನು ಅವತ್ತೂ ಸ್ವಾಗತ ಮಾಡಿದ್ದೇವೆ. ಅದರ ಬಗ್ಗೆ ಸ್ವಾಗತ ಮಾಡದೇ, ನಾವೆಂದೂ ಕಾಮೆಂಟ್ಸ್ ಮಾಡಿಲ್ಲ. ದಯಮಾಡಿ ಅದನ್ನು ಮುಂದುವರೆಸುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ :– ಹೋಗಲಿ, ಸ್ವಾಗತ ಮಾಡದಿರುವುದು ಯಾವುದು ಎಂಬುದನ್ನಾದರೂ ಹೇಳಿಬಿಡಿ!

ಶ್ರೀ ಬಿ. ಶಿವರಾಮು :– ಅವರು ಸ್ವಾಗತ ಮಾಡಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಹೇಳಿರುವುದಕ್ಕೆ ದಾಖಲೆ ಇರುತ್ತದೆ. ಪತ್ರಿಕೆಯಲ್ಲಿ ಬಂದಿರುವುದನ್ನು ಬೇಕಾದರೆ, ನೀವು deny

ಮಾಡಬಹುದು ದಯವಿಟ್ಟು ನೀವು ಅದನ್ನು ತರಿಸಿ ಹೇಳಿಬಿಡಿ. ಪ್ರಾಮಾಣಿಕವಾಗಿ ಹೇಳಿಬಿಡಿ. ಚಲುವರಾಯಸ್ವಾಮಿಯವರ ಮೇಲೆ ನನಗೆ ವಿಶ್ವಾಸವಿದೆ. ಪ್ರಾಮಾಣಿಕವಾಗಿ electronic media ದಲ್ಲಿ ಬಂದಿರುವುದು, It is an Individualised Budget ಎಂದೇ ಅವರು ಹೇಳಿರತಕ್ಕಂಥಾದ್ದು.

ಶ್ರೀ ಎನ್. ಚಲುವರಾಯಸ್ವಾಮಿ :– ಮೀಡಿಯಾ ಒಂದು ಕಡೆ. ಇಲ್ಲಿ ನಾನೇ ನಿಂತಿದ್ದೇನೆ. ಹೇಳಿರತಕ್ಕಂಥವರು ನಾನೇ ಇಲ್ಲಿ ನಿಂತಿದ್ದೇನೆ. ನಾನು ಹೇಳಿದ್ದು ಏನೆಂದರೆ, ಎಲ್ಲೋ ಒಂದು ಕಡೆ ಸ್ವಲ್ಪ ವೈಯಕ್ತಿಕ ಹಿತಾಸಕ್ತಿಯನ್ನು ತೋರಿಸಿದಂತಿದೆ. ಅದರ ಬಗ್ಗೆ ನಾನು ಮಾತನಾಡುತ್ತೇನೆಂದು ನಾನು ಹೇಳಿದ್ದು.

ಶ್ರೀ ಬಿ. ಶಿವರಾಮು :– ನಿಮಗೀಗ ಸಾಕೇ?

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ :– ಶಿವರಾಮ್‌ಜಿ, ನಾವು ಸದನದಲ್ಲಿ ಸುಳ್ಳನ್ನು ಹೇಳುವ ಅವಶ್ಯಕತೆ ಇಲ್ಲ. ಹಾಗೆ ಸುಳ್ಳು ಹೇಳಿ ನಿಮ್ಮಿಂದ ತೆಗೆದುಕೊಳ್ಳಬೇಕಾದ್ದೇನೂ ಇಲ್ಲ. ನಾನು ಅವರ ಜೊತೆ ಮಾತನಾಡಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ :– ಏಕೆ ಮಾತನಾಡುತ್ತೀರಿ ?

ಶ್ರೀ ಎನ್. ಚಲುವರಾಯಸ್ವಾಮಿ :– ಯಾಕೆ ಮಾತನಾಡುತ್ತೀರಿ ಎಂದರೆ, ನಿಮ್ಮವರು ಕೇಳಿದರು ಅದಕ್ಕೆ ಮಾತನಾಡಿದೆ. ಕೇಳದಿದ್ದರೆ, ನಾವೇಕೆ ಮಾತನಾಡುತ್ತಿದ್ದೆವು? ಬಜೆಟ್ ಬಗ್ಗೆ ಹೇಳಲಿ. ಈಗ ನಿಮಗೆ ಏನಾಗುತ್ತದೆಂದರೆ, ಏನೂ ಸಿಗದಿದ್ದಾಗ ಇದರ ಬಗ್ಗೆ ಸುಮ್ಮನೆ ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುವುದರ ಬದಲು, ಹೃದಯ ಶ್ರೀಮಂತಿಕೆ ಇದ್ದರೆ, ಸ್ವಾಗತ ಮಾಡಿ. ಇಲ್ಲದಿದ್ದರೆ, ವಿರೋಧ ಮಾಡಿ. ಜನರು ತೀರ್ಮಾನ ಮಾಡುತ್ತಾರೆ. ಯಾವ ಬಜೆಟ್ ಸರಿ, ತಪ್ಪು ಎಂದು ತೀರ್ಮಾನ ಮಾಡುತ್ತಾರೆ.

ಶ್ರೀ ಎನ್ ಧರ್ಮಸಿಂಗ್ :– 16 ನೇ ತಾರೀಖು ಯಡಿಯೂರಪ್ಪನವರು ಬಜೆಟ್ ಮಂಡನೆ ಮಾಡಿದರು. ಕರ್ನಾಟಕ ರಾಜ್ಯದಲ್ಲಿ ನಾವು ಎಷ್ಟೋ ಸಮ್ಮಿಶ್ರ

ಸರ್ಕಾರಗಳನ್ನು ನೋಡಿದ್ದೇವೆ. ಮರು ದಿವಸವೇ ಬಿ.ಜೆ.ಪಿ. ಅಜೆಂಡಾ ಎಂದು ಚಲುವರಾಯಸ್ವಾಮಿಯವರು ಹೇಳಿದ್ದಾರೆ. ಬಂಡೆಪ್ಪಾ ಕಾಶೆಂಪೂರ್‌ರವರು ಹೇಳಿದ್ದಾರೆ ಮತ್ತು ರೇವಣ್ಣನವರೂ ಹೇಳಿದ್ದಾರೆ. ಅದರ ಬಗ್ಗೆ ಪತ್ರಿಕೆಯಲ್ಲಿ ಬಂದಾಗ deny ಮಾಡಬೇಕಾಗಿತ್ತು, ಇವತ್ತು ಅದರ ಬಗ್ಗೆ ಹೇಳುತ್ತಿಲ್ಲ. ಶಿವರಾಮುರವರು ಏನು ಹೇಳುತ್ತಿದ್ದಾರೆಂದರೆ, supplementary Budget ನಲ್ಲಿ ನೀವು ನಾಗಮಂಗಲಕ್ಕೆ ಏನು ದುಡ್ಡು ತೆಗೆದುಕೊಂಡಿದ್ದೀರಲ್ಲ, ಅದರ ಬಗ್ಗೆ ಹೇಳಿದರು. ನಾಗಮಂಗಲಕ್ಕೆ ದುಡ್ಡು ತೆಗೆದುಕೊಂಡ ನಂತರವೇ ನೀವು ಮೇಲೆ ಸುಮ್ಮನೆ ಆಗಿದ್ದು.

ಶ್ರೀ ಎನ್. ಚಲುವರಾಯಸ್ವಾಮಿ :- ನಾನು ಆವತ್ತೇ ಪತ್ರಿಕೆಗಳಲ್ಲಿ ಬಂದಿರುವುದನ್ನು deny ಮಾಡಿದ್ದೇನೆ ದಯವಿಟ್ಟು ನೀವು ಅರ್ಥ ಮಾಡಿಕೊಳ್ಳಬೇಕು. 19 ನೇ ತಾರೀಖು ಯುಗಾದಿ ಹಬ್ಬದ ದಿವಸವೇ ನಾನು ಪತ್ರಿಕೆಗಳಲ್ಲಿ, electronic media ದಲ್ಲಿ deny ಮಾಡಿದ್ದೇನೆ. ನೀವು ನಿನ್ನೆ ವಿರೋಧ ವ್ಯಕ್ತಪಡಿಸಿದ್ದೀರಲ್ಲ ಎಂದು ಕೇಳಿದಾಗ, ಏಟ್ರಿಯಾ ಹೋಟೆಲ್‌ನಲ್ಲಿ electronic media ದವರು ನನ್ನನ್ನು ಕೇಳಿದಾಗ, " ಇಲ್ಲ, ನಾವು ವಿರೋಧ ಮಾಡಿಲ್ಲ. ಇಂತಿಂತಹ ಸ್ವಾಗತ ಮಾಡಿದ್ದೇವೆ. ಸಣ್ಣ ಪುಟ್ಟ ವ್ಯತ್ಯಾಸವೇನಾದರೂ ಇದ್ದರೆ, ಅದನ್ನು ಸಮನ್ವಯ ಸಮಿತಿಯನ್ನು ಮುಖ್ಯಮಂತ್ರಿಯವರು, ಉಪಮುಖ್ಯಮಂತ್ರಿಯವರು ಕರೆಯುತ್ತಾರೆ, ಅಲ್ಲಿ ನಾವು ಮಾತನಾಡುತ್ತೇವೆ," ಎಂದು ಹೇಳಿದ್ದೇನೆ. ನಾವು ಒಟ್ಟಾರೆ ಬಜೆಟ್‌ನ್ನು ಸ್ವಾಗತ ಮಾಡಿದ್ದೇವೆಯೇ ವಿನಃ ವಿರೋಧ ಮಾಡಿಲ್ಲವೆಂದು ನಾನು ಸ್ಪಷ್ಟವಾಗಿ deny ಮಾಡಿದ್ದೇನೆ

ಅಧ್ಯಕ್ಷರು :- ಮಾನ್ಯ ಮಾಧುಸ್ವಾಮಿಯವರೆ, ಈಗ 1 ಗಂಟೆ 35 ನಿಮಿಷವಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅಧ್ಯಕ್ಷರೆ, ನಾವು ಮಾತನಾಡಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಧ್ಯಾಹ್ನದ ಮೇಲೆ ಮಾತನಾಡುತ್ತೇವೆ.

ಅಧ್ಯಕ್ಷರು :- ಈಗ ಸಣ್ಣ ಕೈಗಾರಿಕಾ ಸಚಿವರು ಭೋಜನಕ್ಕೆ ಏರ್ಪಾಟು ಮಾಡಿದ್ದಾರೆ.

ಶ್ರೀ ಸಿದ್ಧರಾಮಯ್ಯ :– ಮಾನ್ಯ ಅಧ್ಯಕ್ಷರೆ, ಸ್ವಲ್ಪ ಕೇಳಿ. supplementary demands ನಲ್ಲಿ ದೊಡ್ಡ ಮೊತ್ತ ಇಟ್ಟುಬಿಟ್ಟು, ಅದರ ಬಗ್ಗೆ ಮಾತನಾಡಲೇಬಾರದು ಹಾಗೆಯೇ pass ಆಗಬೇಕೆಂದರೆ ಹೇಗೆ?

ಅಧ್ಯಕ್ಷರು :– ಮಾತನಾಡಬಾರದೆಂದು ಹೇಳುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ :– ಮತ್ತೆ ಮಾತನಾಡಬೇಕಾಗುತ್ತದೆ. ಸುಮಾರು ಆರು ಸಾವಿರ ಕೋಟಿ ರೂಪಾಯಿಗಳ supplementary demands ಆಗಿರುವುದರಿಂದ ಮಾತನಾಡಬೇಕು.

ಅಧ್ಯಕ್ಷರು :– ಮಾತನಾಡಿ. ಭೋಜನ ಕೂಟಕ್ಕೆ ತಾವೆಲ್ಲರೂ ದಯಮಾಡಿಸಬೇಕು. ಭಾರಿ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆ ಸಚಿವರು ವಿನಂತಿಸಿದ್ದಾರೆ. ಆದ್ದರಿಂದ, ಭೋಜನದ ನಂತರ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಸದನವನ್ನು 2–30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 1 ಗಂಟೆ 29 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ಮತ್ತೆ ಮಧ್ಯಾಹ್ನ 2 : 30 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 2 ಗಂಟೆ 54 ನಿಮಿಷಕ್ಕೆ ಸೇರಿತು, ಸಭಾಧ್ಯಕ್ಷರು ಪೀಠದಲ್ಲಿದ್ದರು)

3. ವಿತ್ತೀಯ ಕಾರ್ಯಕಲಾಪ

2006–07 ನೇ ಸಾಲಿನ ಪೂರಕ ಅಂದಾಜುಗಳು(ಎರಡನೇ ಹಾಗೂ ಅಂತಿಮ ಮುಂದುವರೆದ ಕುರಿತು ಚರ್ಚೆ)

ಶ್ರೀ ಜೆ. ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ನಾನು ಪೂರಕ ಅಂದಾಜುಗಳ ಮೇಲೆ ಮಾತನಾಡುತ್ತಾ ಹೇಳುತ್ತಿದ್ದೆ, ನಮ್ಮ ಮುಂದೆ ಪೂರಕ ಅಂದಾಜಾಗಿ ಬಂದಿಲ್ಲ, ಅಧಿಕ ಅಥವಾ ಹೆಚ್ಚುವರಿ ಅಧಿಕ ಅಥವಾ ಹೆಚ್ಚುವರಿ ಅಂದಾಜು ಎಂದು ಹೇಳಬಹುದು. ಯಾರ್‍ಯಾರಿಗೆ ಡಿಮ್ಯಾಂಡ್‌ಗಳು ಜಾಸ್ತಿ ಇವೆ, ಅದೆಲ್ಲಾ ಇಲ್ಲಿ ಬಂದು ಏನು ಎಮರ್ಜೆನ್ಸಿಗೆ, ಎಕ್ಸಿಜೆನ್ಸಿಗೆ ಪೂರಕ ಅಂದಾಜು ಎಂದು ಹೇಳಬೇಕಾಗಿತ್ತು, ಅದನ್ನು ಇಟ್ಟಿಲ್ಲ. ಸನ್ಮಾನ್ಯ ಉಪಮುಖ್ಯಮಂತ್ರಿಗಳೇ ಕೆಲವು ಕಡೆ ನಾವು ತೀಕ್ಷ್ಣವಾಗಿ ಮಾತನಾಡಬೇಕಾಗುತ್ತದೆ. ಈ ವರ್ಷದಿಂದ ನೀವು ಲಾಟರಿಯನ್ನು ಬ್ಯಾನ್ ಮಾಡುತ್ತೇವೆಂದು ಹೇಳಿದ್ದೀರಿ. ತಾವು 636 ಪ್ಲಸ್ 568 ಲಕ್ಷ ಹೆಚ್ಚುವರಿಯಾಗಿ ಇಡುತ್ತಿದ್ದೀರಿ. ಲಾಟರಿಯನ್ನು ಕಂಪ್ಲಿಟ್ಲಿ ನಿಷೇಧ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಇದನ್ನು ಸ್ಟೇಟ್ ಪಾಲಿಸಿ ಎಂದು ನೀವೇ ಬಜೆಟ್‌ನಲ್ಲಿ ಹೇಳಿಬಿಟ್ಟಿದ್ದೀರಿ. ಸುಮಾರು 12 ಕೋಟಿ ರೂಪಾಯಿಗಳನ್ನು ಅಲ್ಲಿ ತಾವು ನಾನ್ ಪ್ಲಾನ್‌ನಲ್ಲಿ ಪ್ರೊವೈಡ್ ಮಾಡುತ್ತಿದ್ದೀರಿ, ಏಕೆಂದು ನನಗೆ ಗೊತ್ತಿಲ್ಲ, ತಾವು ಹೇಳಬೇಕು. ಆಮೇಲೆ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬಹಳ ನಿರ್ದಿಷ್ಟವಾಗಿ ಡೈಲಿ ವೇಜ್ ಮೇಲೆ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದೆ. ತಾವು ಈ ಪುಸ್ತಕದಲ್ಲಿ ಪ್ರಿಂಟ್ ಮಾಡಿ, ಡೈಲಿ ವೇಜ್ ಕೊಡುವುದಕ್ಕೆ ನಾನು ಹಾರ್ಟಿಕಲ್ಚರ್ ಇಲಾಖೆಗೆ 14–15 ಲಕ್ಷ ಖರ್ಚು ಮಾಡುತ್ತಿದ್ದೇನೆಂದು ಹೇಳುತ್ತಿದ್ದೀರಿ. It is an illegal act. ನಿಮಗೆ ಡೈಲಿ ವೇಜ್ ಮೇಲೆ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಅಧಿಕಾರವಿಲ್ಲ, ನೀವು ಡೈಲಿ ವೇಜ್ ಅನ್ನು ಹೇಗೆ ಕೊಡುತ್ತಿರೆಂದು ಪ್ರಶ್ನೆ ಮಾಡಬೇಕಾಗುತ್ತದೆ. ಏಕೆಂದರೆ ತಾವು ಇದನ್ನು ಇಲ್ಲಿ ಹೇಳಿದ್ದೀರಿ. ಆಮೇಲೆ ಇದಕ್ಕೆ ಒಂದು ಮಾಹಿತಿಯನ್ನು ತಾವು ಕೊಡಬೇಕು. ಹರದನಹಳ್ಳಿ ಗ್ರಾಮದ ಪಶುವೈದ್ಯಕೀಯ ಸಂಸ್ಥೆಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಹೆಚ್ಚುವರಿಯಾಗಿ 17.11 ಲಕ್ಷ ಕೊಡುತ್ತೇವೆಂದು ಹೇಳಿದಿರಿ. What is the actual estimate of

that building? ಒಂದು ರೂರಲ್ ವೆಟರ್‌ನರಿ ಹಾಸ್ಪಿಟಲ್ ಅನ್ನು ಎಷ್ಟು ಲೆಕ್ಕದಲ್ಲಿ ಕಟ್ಟಿಸುವುದಕ್ಕೆ ಹೊರಟಿದ್ದೀರಿ? ಹೆಚ್ಚುವರಿಯಾಗಿ 17 ಲಕ್ಷ ಕೊಡುತ್ತೇವೆಂದರೆ, ಹೆಚ್ಚುವರಿ ಮಾಹಿತಿ ಇದರಲ್ಲಿ ಎಲ್ಲಾದರೂ ಇದೆಯಾ ಎಂದು ಹುಡುಕಿದೆ. ತಾವು ವೆಟರ್‌ನರಿ ಮಿನಿಸ್ಟರ್ ಆಗಿದ್ದವರು, 17–18 ಲಕ್ಷಕ್ಕಿಂತ ದೊಡ್ಡದಾಗಿ ರೂರಲ್ ವೆಟರ್‌ನರಿ ಡಿಸ್ಪೆನ್ಸರಿಗೆ ಹೆಚ್ಚುವರಿಯಾಗಿ ಅಷ್ಟು ಕೊಡುತ್ತೇವೆಂದು ಹೇಳಲಾಗಿದೆ. ಇದರಲ್ಲಿ ಪ್ರಮುಖವಾಗಿ ನಾನು ತಮ್ಮನ್ನು ಕೇಳಬಯಸುತ್ತೇನೆ, ನಾನೊಂದು ಸಲ ಇಲ್ಲಿ ಈ ಬಗ್ಗೆ ಮಾತನಾಡಿದ್ದೇನೆ. ಈ ಫೈರ್ ಸ್ಟೇಷನ್ ಮಾಡುವುದಕ್ಕೆ ಜನರಲ್ ಇನ್ಸೂರೆನ್ಸ್ ಕಂಪನಿಯಿಂದ ನಿಮಗೆ 25 ಕೋಟಿ ರೂಪಾಯಿಗಳ ವಂತಿಕೆಯನ್ನು ಕೊಟ್ಟಿದ್ದರು ಅಥವಾ ನಿಮಗೆ ದಾನ ಕೊಟ್ಟಿದ್ದರೆಂದು ಇಟ್ಟುಕೊಳ್ಳಿ. ಇವತ್ತು ಆ 25 ಕೋಟಿ ರೂಪಾಯಿ ಎಲ್ಲಿ ಹೋಯಿತೋ ಗೊತ್ತಿಲ್ಲ. ಆ ಹಣವನ್ನು ಇವರು ಫೈರ್ ಸ್ಟೇಷನ್ ಮಾಡಲೇ ಇಲ್ಲ. ಆ ದುಡ್ಡನ್ನು ಏನು ಮಾಡಿದಿರಿ? ಆ ದುಡ್ಡನ್ನು ತೆಗೆದುಕೊಂಡು ಬಂದು ಈ ವರ್ಷವೇನಾದರು ನಮಗೆ ಹೆಚ್ಚಾಗಿ ಫೈರ್ ಸ್ಟೇಷನ್ ಕೊಡುತ್ತೀರಾ ಹೇಗೆ? ತಾವು ಉತ್ತರವನ್ನು ಹೇಳಬೇಕಾಗುತ್ತದೆ. ನಾನು ಕಳೆದ ವರ್ಷ ಇಲ್ಲಿ ಸ್ಪಷ್ಟವಾಗಿ ಕೇಳಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ :– ಬಿಜೆಪಿ ಎಂದರೆ ಫೈರ್ ಸ್ಟೇಷನ್ ಇದ್ದ ಹಾಗೆ ಮತ್ತೊಂದು ಫೈರ್ ಸ್ಟೇಷನ್ ಬೇಕಾ?

ಶ್ರೀ ಜೆ. ಸಿ. ಮಾಧುಸ್ವಾಮಿ :– ಯಾರೋ ಕೊಟ್ಟಂತಹ ದುಡ್ಡನ್ನು ಖರ್ಚು ಮಾಡಲಿಲ್ಲ, ಎಲ್ಲಿ ಹೊಯಿತೆಂದು ಹೇಳಲಿ ಎಂದು ಕೇಳಿದ್ದು, ಫೈರ್ ಸ್ಟೇಷನೊ, ಪೆಟ್ರೋಲ್ ಬಂಕೊ ನಾನು ಅದರ ಚರ್ಚೆಗೆ ಹೋಗುವುದಿಲ್ಲ. ನಾವು ಫೈರ್ ಸ್ಟೇಷನ್ ಕೇಳಿದ್ದು ಹಚ್ಚಿಕೊಂಡಿರುವ ಬೆಂಕಿಯನ್ನು ಆರಿಸುವುದಕ್ಕೆ ಏನಾದರು ಮಾಡುತ್ತೀರಾ ಎಂದು ಕೇಳಿದ್ದು. ಇನ್ನು ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಪೂರಕ ಅಂದಾಜಿನಲ್ಲಿ ಒಂದು ಇಲಾಖೆಗೆ ಎಷ್ಟು ದುಡ್ಡನ್ನು ಕೊಡಬಹುದು. ಅಧ್ಯಕ್ಷರು ಒಂದು ಸಲ ನೋಡಬೇಕು, ನಾವು ಏತಕ್ಕೆ ಇಷ್ಟೊಂದು ಮಾತನಾಡಬೇಕಾಗಿದೆ ಎಂದರೆ, ಎಷ್ಟು ಕೊಡುತ್ತಿದ್ದೇವೆಂದು ಅವರು ಮೊದಲನೇ ಪುಟಗಳಲ್ಲೇ ಕೊಟ್ಟುಬಿಟ್ಟಿದ್ದಾರೆ. ಗ್ರಾಮೀಣಾಭಿವೃದ್ಧಿ ಪಂಚಾಯತ್

ರಾಜ್ 200 ಕೋಟಿ, ಶಿಕ್ಷಣ 388 ಕೋಟಿ ವಾಣಿಜ್ಯ ಮತ್ತು ಕೈಗಾರಿಕೆ 646 ಕೋಟಿ, ನಗರಾಭಿವೃದ್ಧಿ 157 ಕೋಟಿ, ಲೋಕೋಪಯೋಗಿ 537 ಕೋಟಿ, ಜಲಸಂಪನ್ಮೂಲ 1043.13 ಕೋಟಿ, ಇಂಧನ 435 ಕೋಟಿ, ಇದು ಪೂರಕ emergency/exigency ಗೆ ಕೊಡುತ್ತಿರುವ ಹಣ.

ಶ್ರೀ ಅಮರೇಗೌಡ ಲಿಂಗನಗೌಡ ಬೈಯ್ಯಾಪುರ :– ಮಾಧುಸ್ವಾಮಿಯವರೇ 5–6 ವರ್ಷಗಳ ಹಿಂದಿನ ಬಜೆಟ್‌ಗಿಂತ ಎಷ್ಟು ಪರ್ಸೆಂಟ್ ಪೂರಕ ಅಂದಾಜು ಹೆಚ್ಚಾಗಿರಬಹುದು. ಉದಾಹರಣೆಗೆ 2001 ರಿಂದ ತೆಗೆದುಕೊಂಡರೆ ಇಲ್ಲಿಯವರೆಗೆ ಎಷ್ಟು ಪರ್ಸೆಂಟ್ ಹೆಚ್ಚಾಗಿರಬಹುದು?

ಶ್ರೀ ಜೆ. ಸಿ. ಮಾಧುಸ್ವಾಮಿ :– ಬೈಯ್ಯಾಪುರರವರೇ ಕನಿಷ್ಟ 20–15 ಪಟ್ಟು ಜಾಸ್ತಿಯಾಗಿರಬಹುದು 600 ಕೋಟಿ, 700 ಕೋಟಿ ಪೂರಕ ಬಜೆಟ್ ಅನ್ನು ನಾವು ಇಲ್ಲಿ ಕುಳಿತುಕೊಂಡು ಏನ್ರಿ 600 ಕೋಟಿ, 700 ಕೋಟಿ ತರುತ್ತಿದ್ದೀರೆಂದು ಬಹಳ ಟೀಕೆ ಮಾಡಿದ್ದೇವೆ. ಇವತ್ತು ನಾವು 6000 ಕೋಟಿ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಅಮರೇಗೌಡ ಲಿಂಗನಗೌಡ ಬೈಯ್ಯಾಪುರ :– ಈಗ ಕೋಟಿ ಎಂದರೆ, ಸಂಪನ್ಮೂಲ ಜಾಸ್ತಿ ಇದ್ದಾಗ ಜಾಸ್ತಿ ಇರಬಹುದು. ಸಂಪನ್ಮೂಲ ಜಾಸ್ತಿಯಾದಾಗ ಜಾಸ್ತಿ ಇರಬಹುದು. ನನಗೆ ತಿಳಿದ ಮಟ್ಟಿಗೆ ಮಾನ್ಯ ಎಸ್. ಎಂ. ಕೃಷ್ಣರವರು ಇದ್ದಾಗ 18 ರಿಂದ 20% ಪೂರಕ ಅಂದಾಜು ಇತ್ತು ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ :– ನೀವು original budget ನ inflation rate ತೆಗೆದುಕೊಂಡು, escalation calculation ಮಾಡಬೇಕಾಗಿರುವುದು. Supplementary demands ಅಲ್ಲ. ಇದು ಇರುವುದು emergency ಗೆ. ನಿಮ್ಮ ಊರಲ್ಲಿ ಏನೋ ಪ್ರವಾಹ ಆಯಿತು ಖರ್ಚು ಮಾಡಬೇಕಾಗಿತ್ತು, ಆ fund ನಿಂದ ಕೊಟ್ಟರು. ಇಲ್ಲಿ ಇಟ್ಟುಕೊಳ್ಳಬೇಕಾಗಿತ್ತು. ಈಗ ನಾವು ಕೇಳುತ್ತೇವೆ ಈ 6000 ಕೋಟಿ ರೂಪಾಯಿ ಬಜೆಟ್‌ನಲ್ಲಿ ಎಲ್ಲಿ ತೋರಿಸಿದ್ದೀರಿ, ಬಜೆಟ್‌ನಲ್ಲಿ ನಿಮ್ಮ ರೆವಿನ್ಯೂ ಎಲ್ಲಿ ಬರುತ್ತದೆ ಎಂದು ತೋರಿಸಬೇಕಾಗುತ್ತದೆ. ನಾವು ಇಲ್ಲಿ ಕೇಳುವುದಕ್ಕಾಗುತ್ತಾ? ಅಲ್ಲಿ ನೀವು ಅಷ್ಟೊಂದು ಹಣ ಇಟ್ಟವರು ಮತ್ತೇ ಬಂದು 6000 ಕೋಟಿ ಇಲ್ಲಿ ಪೂರಕ ಬಜೆಟ್‌ನಲ್ಲಿ ಬೇಡಿಕೆ ಇಡುತ್ತೀರಿ ಎಂದರೆ ದುಡ್ಡು ಎಲ್ಲಿಂದ ಹೊಂದಾಣಿಕೆ ಆಗುತ್ತದೆ ಎನ್ನುವುದು ಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ ಮಾತನಾಡಿದ ಎಲ್ಲ ಹಿರಿಯ ಸದಸ್ಯರು ಈ ಪೂರಕ ಅಂದಾಜು ಬಹಳ ದೊಡ್ಡದು ಇದೆ ಹೇಗಾಯಿತು ಎಂದು ಪ್ರಶ್ನೆ ಮಾಡುತ್ತಿದ್ದಾರೆ. ನಿಮಗೆ ಅಂಕಿ ಅಂಶ ಹೇಳುತ್ತೇನೆ. 2004–05 ಮತ್ತು 2005–06 ನೇ ಸಾಲಿನಲ್ಲಿ ಮೂರು ಪೂರಕ ಅಂದಾಜುಗಳನ್ನು ಮಂಡಿಸಲಾಗಿದೆ. ಈ ವರ್ಷ 2006–07 ರಲ್ಲಿ ಕೇವಲ ಎರಡು ಪೂರಕ ಅಂದಾಜುಗಳನ್ನು ನಾವು ಮಂಡಿಸುತ್ತಿದ್ದೇವೆ. 2002–03 ನೇ ಸಾಲಿನಲ್ಲಿ ಪೂರಕ ಅಂದಾಜು ಸಂಚಿತ ನಿಧಿ, ಶೇ 18.11, 2003–04 ನೇ ಸಾಲಿನಲ್ಲಿ ಶೇ 28.25, 2004–05 ನೇ ಸಾಲಿನಲ್ಲಿ ಶೇ 10.23, 2005–06 ನೇ ಸಾಲಿನಲ್ಲಿ 12.05 ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರಕ ಅಂದಾಜು ಸಂಚಿತ ನಿಧಿ ಶೇ 17.2 ರಷ್ಟು ಇದೆ. ಕಳೆದ ನಾಲ್ಕು ವರ್ಷಗಳಿಗೆ ಹೋಲಿಸಿದರೆ ಇದು ಅಂತಹ ಹೆಚ್ಚಳ ಅಲ್ಲ. ಈ ವರ್ಷ ಸುಮಾರು 4,000 ಕೋಟಿ ರೂಪಾಯಿಗಳು ಹೆಚ್ಚುವರಿ ಸಂಪನ್ಮೂಲ ಲಭ್ಯ ಇದೆ. ಹಿಂದಿನ ಯಾವುದೇ ಪೂರಕ ಅಂದಾಜುಗಳು ಮಂಡಿಸಿದ ಸಂದರ್ಭದಲ್ಲಿ ಇಂತಹ ಹೆಚ್ಚುವರಿ ಸಂಪನ್ಮೂಲದ ಲಭ್ಯತೆ ಇರಲಿಲ್ಲ. ಆದ್ದರಿಂದ ಕಳೆದ 4–5 ವರ್ಷಗಳಿಗೆ ನೀವು ಹೋಲಿಕೆ ಮಾಡಿದಾಗ ಇದು ಅಂತಹ ಹೆಚ್ಚಳ ಅಲ್ಲವೆಂದು ಸನ್ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ :– ಬಜೆಟ್ ಇಟ್ಟು ಬಹಳ ದಿವಸಗಳಾಗಿ ನಿಮಗೆ ಅನಿರೀಕ್ಷಿತವಾಗಿ ರೆವಿನ್ಯೂ ಜಾಸ್ತಿ ಕಂಡು ನಿಮಗೆ ಅನಿರೀಕ್ಷಿತವಾಗಿ ಕೇಂದ್ರಸರ್ಕಾರದ ಅನುದಾನಗಳು ಹೊಸ ಹೊಸ ಯೋಜನೆಗಳಲ್ಲಿ ಮ್ಯಾಚಿಂಗ್ ಗ್ರ್ಯಾಂಟ್ ಬರುವುದು ಕಂಡು ಅನಿರೀಕ್ಷಿತವಾಗಿ emergency ಬಂದು ಪ್ರಮಾಣವನ್ನು ಪೂರಕ ಅಂದಾಜಿನಲ್ಲಿ ಲೆಕ್ಕ ಹಾಕುವುದಕ್ಕಾಗುವುದಿಲ್ಲ, ಇಷ್ಟು ಪರ್ಸೆಂಟ್ ನೀವು original budget ಮೇಲೆ Supplementary demands ಇಟ್ಟುಕೊಳ್ಳಬಹುದು ಎಂದು ನಿಮ್ಮ ಅಧಿಕಾರಿಗಳು ಹೇಳಿದ ಹಾಗೆ ಇಡುವುದಕ್ಕಾಗಿ ಇಟ್ಟಿರುವ ಹೆಚ್ಚುವರಿ ಬಜೆಟ್ ಅಲ್ಲ. ಇದು. This is not an additional or excessive budget placed before the Assembly. ನಮ್ಮ ಗಮನಕ್ಕೆ ಬಾರದ ಹಾಗೆ ಬಜೆಟ್ ಮಾಡಬೇಕಾದರೆ, ನಮ್ಮ ಗಮನ ಮೀರಿ ಅಥವಾ ನಮ್ಮ ಕ್ಷೇತ್ರದ ವ್ಯಾಪ್ತಿ ಮೀರಿ

ಏನಾದರೂ ಖರ್ಚು ಆಗಿದ್ದರೆ ಅದನ್ನು ಪೂರಕ ಬಜೆಟ್‌ನಲ್ಲಿ ಕೇಳುವುದಕ್ಕೋಸ್ಕರ ತಾವು ಈ ಆಯುಧವನ್ನು ಇಟ್ಟುಕೊಂಡಿರುವುದು. ಯಾರ್‍ಯಾರು ಎಷ್ಟೆಷ್ಟನ್ನು ಕೇಳಿದರು, ಅವತ್ತಿನ ಪರಿಸ್ಥಿತಿ ಎಷ್ಟು ಇತ್ತು ಎಂಬುದರ ಬಗ್ಗೆ ನಾವು ಇಲ್ಲಿ ನಿಂತು ಇಂದು ವಿಶ್ಲೇಷಣೆ ಮಾಡುವುದಕ್ಕಾಗುವುದಿಲ್ಲ. inflation ಕೂಡ ಅಷ್ಟೆ. ನಿಮ್ಮ ಬಜೆಟ್ ಅಷ್ಟು ಕೋಟಿ ಇಷ್ಟು ಕೋಟಿ ಇಡುತ್ತೀರಿ, ತಾವು ಸ್ವಲ್ಪ ಮಟ್ಟಿಗೆ economics ಕೇಳಿ inflation ಆಗುವುದು ಬಿಟ್ಟರೆ, money value ಜಾಸ್ತಿಯಾಗುತ್ತಿಲ್ಲ. ನಿನ್ನೆ ದಿವಸ ನಿಮ್ಮ ಬಳಿ ಇದ್ದ 10 ರೂಪಾಯಿಗೆ ಇವತ್ತು 11 1/4 ರೂಪಾಯಿ ಬಡ್ಡಿ ಸೇರಿಸಿಕೊಂಡು money value 11 1/4 ರೂಪಾಯಿ, ಆದರೆ ನಾವು ಕರೆಯುವುದು 10 ರೂಪಾಯಿಯೇ. ನಾನು ಅನೇಕ ಸಲ ಹೇಳಿದ್ದೇನೆ, one who invests on his own ಅದು asset ಆಗುತ್ತದೆ. Who borrows and invests ಅದು liability ಆಗುತ್ತದೆ. We are borrowing and investing. Original budget ಮೇಲೆ ನಾನು ಮಾತನಾಡುವಾಗ ತಮಗೆ ಹೇಳುತ್ತೇನೆ. ತಾವು repayment ಕಡಿಮೆ ಮಾಡಿದ್ದರಿಂದ ಎಷ್ಟು ತೊಂದರೆಯಾಗುತ್ತಿದೆ, borrowings ಎಲ್ಲಿ ಹೆಚ್ಚಾಗಿದೆ, we are ready to discuss. ಅದಕ್ಕೇ ನಾನು ಮೊದಲೇ ಹೇಳಿದೆ. ಬಜೆಟ್ ಚರ್ಚೆಯಾಗದೇ ಇದನ್ನು ಮಾಡುವುದು ಕಷ್ಟವಾಗುತ್ತದೆ. ಎಂದು when you borrow and invest, it will be the liability of the State. We have no our funds to invest, It cannot be called as an investment on asset. ಇಲ್ಲಿ ನಮ್ಮ ಪ್ರಶ್ನೆ ಇರುವುದು ಏನೆಂದರೆ, ನಾವು ಈಗ emergency/exigency ಗೆ ಒಂದು ಇಲಾಖೆಗೆ ಎಷ್ಟು ಕೊಡಬಹುದು, 1800 ಕೋಟಿ ರೂಪಾಯಿಗಳಷ್ಟು ನೀರಾವರಿ ಇಲಾಖೆಗೆ emergency ಇತ್ತಾ?

ಶ್ರೀ ಬಿ.ಎಸ್. ಯಡಿಯೂರಪ್ಪ :- Borrowings ನಮ್ಮ ಇತಿ ಮಿತಿ ದಾಟಿಲ್ಲ. ಇತ್ತೀಚಿನ ವರ್ಷಗಳಲ್ಲಿ ನಮ್ಮಿಂದ Borrowings ಅತ್ಯಂತ ಕಡಿಮೆ ಆಗಿದೆ. savings ಆಗಿದೆ. income ಜಾಸ್ತಿಯಾಗಿದೆ. ವಿವರಗಳನ್ನು ಕೊಡುವ ಸಮಯದಲ್ಲಿ ನಾನು ಹೇಳುತ್ತೇನೆ. ಅಂಕಿ ಅಂಶಗಳ ದಾಖಲೆ ಇದೆ. ಅದಕ್ಕಾಗಿ ಹಣಕಾಸಿನ ನಿರ್ವಹಣೆ ಒಳ್ಳೆಯದು ಇದೆ ಎಂದು ಕೇಂದ್ರ ಸರ್ಕಾರದವರು ಒಪ್ಪಿ ನಮಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಿರುವಂಥದ್ದು.

ಶ್ರೀ ಜೆ. ಸಿ. ಮಾಧುಸ್ವಾಮಿ :- ನೀವು ವಿವರಗಳನ್ನು ಕೊಡಿ. ನಾವು ಬಜೆಟ್ ಮೇಲೆ ಮಾತನಾಡುತ್ತೇವೆ. ಹಣಕಾಸಿನ ನಿರ್ವಹಣೆಯೇ ಬೇರೆ. ಒಂದನ್ನು ನಾನು ನಿಮಗೆ ಸ್ಪಷ್ಟ ಮಾಡುತ್ತೇನೆ. We are against borrowings. ಯಾರೇ development oriented person ಇದ್ದರೆ borrow ಮಾಡಿ invest ಮಾಡಲೇಬೇಕು. Borrow ಮಾಡಿ development ಮಾಡಲೇಬೇಕು. ಶ್ರೀ ಕೃಷ್ಣರಾಜ ಒಡೆಯರ್‌ರವರೇ borrow ಮಾಡಿದ್ದರು. ಹೈದರಾಲಿ ಹತ್ತಿರ ಸಾಲ ತೆಗೆದುಕೊಂಡಿದ್ದರು. ಇಲ್ಲದಿದ್ದರೆ ಹಳೆಯ ಮೈಸೂರು ಉದ್ಧಾರವಾಗುತ್ತಿರಲಿಲ್ಲ. ಇವತ್ತು ನೀವು borrow ಮಾಡಿದ್ದರ value ನಾಳೆ ಗೊತ್ತಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾನು ನಂತರ reply ಮಾಡುತ್ತೇನೆ. ನೀರಾವರಿ ಯೋಜನೆಗಳಿಗೆ ಬೇರೆ ಕಡೆಯಿಂದ ಸಾಲ ತರುವುದನ್ನು ತಪ್ಪಿಸಿ, ನಮ್ಮ ಹತ್ತಿರವೇ ಹೆಚ್ಚಿನ ಸಂಪನ್ಮೂಲಗಳಿವೆ ಎಂದು ನಾವೇ ಕೊಟ್ಟಿದ್ದೇವೆ. ನೀವು detail ಚರ್ಚೆ ಮಾಡುವಂತಹ ಕಾಲದಲ್ಲಿ appreciate ಮಾಡಬೇಕು.

ಶ್ರೀ ಜೆ. ಸಿ. ಮಾಧುಸ್ವಾಮಿ :- ನಾನು detail ಚರ್ಚೆ ಮಾಡುವಾಗ ಹೇಳುತ್ತೇವೆ. ಇಲ್ಲಿ ಏನಾಗಿದೆ, ತಾವು ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು. ನಾನು ಕೇಳುತ್ತೇನೆ, ಅಭಿಯಾಚನೆ 20 public works ಬಗ್ಗೆ ಇರುವುದು ತಾವು ಓದಿಕೊಂಡು ಹೋಗಿ. ಶಿವಮೊಗ್ಗ ಜಿಲ್ಲೆ ಗ್ರಾಮೀಣ ರಸ್ತೆ ಅಭಿವೃದ್ಧಿಗಾಗಿ 3.26 ಲಕ್ಷ ರೂಪಾಯಿಗಳು, ಭಧ್ರಾವತಿ ತಾಲ್ಲೂಕಿನ ಹೊಳೆ ಹೊನ್ನೂರು ಕ್ಷೇತ್ರದ ರಸ್ತೆ ಅಭಿವೃದ್ಧಿಗಾಗಿ 10 ಲಕ್ಷ ರೂಪಾಯಿಗಳು, 336 ಲಕ್ಷ ರೂಪಾಯಿಗಳು, 320 ಲಕ್ಷ, ಇವು ಯಾವುವು? ನಿಮ್ಮ ತಾಲ್ಲೂಕಿನ ದೇವಸ್ಥಾನಕ್ಕೆ ಅರ್ಥ ಸಚಿವರು ಒಂದು ಚಿಲ್ಲರೆ ಕೋಟಿ ರೂಪಾಯಿ ಇಟ್ಟುಕೊಂಡು ರಾಜ್ಯದ ಹಿತಾಸಕ್ತಿ ಮರೆತು ಕುಳಿತು ಬಿಟ್ಟರೆ ನೀವು ಹೇಗೆ ಶಿಕಾರಿಪುರದಲ್ಲಿ ಶಿಥಿಲವಾಗಿರುವ ದೇವಸ್ಥಾನಗಳಿಗೆ ಇಷ್ಟು ಹಣ ರಿಲೀಸ್ ಮಾಡುತ್ತೇನೆಂದು ನೀವು Supplementary budget ನಲ್ಲಿ ತಂದರೆ, ನಮಗೆಲ್ಲಾ ಏನನ್ನಿಸುತ್ತದೆ ಎಂದು ತಾವೇ ಯೋಚನೆ ಮಾಡಿ. ಈ ಶಾಸನ ಸಭೆಯಲ್ಲಿ ಕುಳಿತಿರುವವರು ನಾವು ಏನು feel ಮಾಡಿಕೊಳ್ಳಬೇಕು? ಕಾರ್ಯಕ್ರಮಗಳನ್ನೂ ನೀವೇ ಮಾಡಿಕೊಳ್ಳುತ್ತೀರಿ. ನಾವು ದೇವರಲ್ಲಿ ಒಂದೇ ಒಂದು ಪ್ರಾರ್ಥಿಸುವುದು,

ನಾವು ಒಂದು ದಿನ ಅಲ್ಲಿ ಕುಳಿತು ಈ ಶಾಸನವನ್ನು ಹೇಳುವಂತಹ ಅಧಿಕಾರ ಕೊಟ್ಟರೆ, ನಮಗೆ ಓಟು ಹಾಕಿರುವ ಜನರ ಋಣವನ್ನೂ ತೀರಿಸಿ ಬಿಡುತ್ತೇವೆ ಅಷ್ಟೆ. Where are we landing ? ನೀವು supplementary demand ನಲ್ಲಿ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡುತ್ತೇವೆ ಎನ್ನುವ ಲೆವೆಲ್‌ಗೆ ಇಳಿದರೆ ಇದು ಒಂದು supplementary demand ಎನ್ನುತ್ತಾರೆ ಯಾರಾದರೂ? ಹಾಗಾದರೆ ನೀವು ಹಣ ಅದಕ್ಕಾಗಿ ಇಡಲಿಲ್ಲವಾ? ಆಗಬಾರದ್ದಾಗಿದ್ದಕ್ಕೆ , ನಡೆಯಬಾರದ್ದು ನಡೆದು ಹೋಗಿ ಖರ್ಚಾಗಿರುವುದಕ್ಕೆ ಇಲ್ಲಿ ಬಂದು approval ತೆಗೆದುಕೊಳ್ಳಲಿಕ್ಕೆ ಇರುವಂತಹ ಅಸ್ತ್ರಗಳನ್ನು ನೀವು ಹೀಗೆ ಬಳಸುತ್ತಾ ಹೋಗುತ್ತೀರಿ. KRDCL road ಗೆ ನಬಾರ್ಡ್ ರೋಡ್‌ಗಳಿಗೆ ನೀವು original budget ನಲ್ಲಿ ನೀವು ಏಕೆ ಅನುದಾನವನ್ನು ಇಡಲಿಲ್ಲ? Who prevented you? ಈ ಶಾಸನ ಸಭೆಯಲ್ಲಿ ನಿಮಗೆ ಹಣ ಇಡಬೇಡಿ ಎಂದು ಹೇಳಿದವರು ಯಾರು ? ಒತ್ತಡ ಬಿದ್ದ ತಕ್ಷಣ, ಅವರ reaction ಗಳು ಬೇರೆ ಆದ ತಕ್ಷಣ ಇಂಧನ ಇಲಾಖೆಗೆ PWD ಇಲಾಖೆಗೆ Irrigation demand ಗೆ money flow ಆಗುತ್ತದೆ ಎಂದರೆ, ಇದು ಪೂರಕ ಅಲ್ಲ. This is an additional grant, given on pressure.

ಶ್ರೀ ಮಲ್ಲಿಕಾರ್ಜಿನ ಖರ್ಗೆ :- ಮಾನ್ಯ ಯಡಿಯೂರಪ್ಪನವರ ಬಜೆಟ್ ಎಂದರೆ ಬಫೆ ಸಿಸ್ಟಮ್ ಇದ್ದ ಹಾಗೆ. ಯಾರಿಗೆ ಬೇಕು ಎಷ್ಟು ಬೇಕು ಅಷ್ಟು ಬಡಿಸಿಕೊಂಡು ತಿನ್ನುವುದು. ಹಾಗೆಯೇ ಇಲ್ಲಿಯೂ ಮಾಡಿದ್ದಾರೆ.

ಶ್ರೀ ಜಯಪ್ರಕಾಶ್ ಹೆಗ್ಡೆ :- ಬಫೆ ಸಿಸ್ಟಮ್ ಎಲ್ಲರಿಗೂ ಅಲ್ಲ. ಬಫೆ ಸಿಸ್ಟಮ್ ಎಲ್ಲರಿಗೂ ಒಂದೇ ಇರುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಕೆಲವರು ಮಾತ್ರ ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಯಾರ್‍ಯಾರಿಗೆ ಶಕ್ತಿ ಇತ್ತೋ ಅವರು ತೆಗೆದುಕೊಂಡು ಹೋಗಿದ್ದಾರೆ. ನಿಮಗೆ ಶಕ್ತಿ ಇಲ್ಲ, ಇಲ್ಲಿಯೇ ಕುಳಿತಿದ್ದೀರಿ. ಅಲ್ಲಿ PWD ಮತ್ತು electricity ಶಕ್ತಿ ಜಾಸ್ತಿ ಇದೆ. ಹೋದರು ಮೊದಲೇ ಬಡಿಸಿಕೊಂಡರು. ಕೊನೆಗೆ ಹೋದರೆ ಏನು ಮಾಡುತ್ತೀರಿ?

ಶ್ರೀ ಜಯಪ್ರಕಾಶ್ ಹೆಗ್ಡೆ :- ದೊಡ್ಡ ಔತಣದಲ್ಲಿ VIP ಗಳಿಗೆ separate arrange ಮಾಡುತ್ತಾರಲ್ಲಾ ಹಾಗಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಎಲ್ಲರನ್ನೂ ಕೂರಿಸಿ ಬಡಿಸಿದಾಗ ಸಮನಾಗಿ ಬರುತ್ತದೆ. ಬಫೆ ಸಿಸ್ಟಮ್ ಮಾಡಿದರೆ ಮೊದಲು ಯಾರು ಹೋದರು ಅವರು ತೆಗೆದುಕೊಂಡರು. Knowingly package system ಮಾಡಿದಾಗ ಅದು special concession. ಇದು special concession ಅಲ್ಲ. As and when you needed you have given.

ಶ್ರೀ ಸಿ.ಟಿ. ರವಿ :- ಮಾನ್ಯ ಖರ್ಗೆ ಸಾಹೇಬರೇ, ಯಡಿಯೂರಪ್ಪನವರು ಬಫೆ ಸಿಸ್ಟ್‌ಮ್, ಅವರು ಮಾಡಿದ್ದು ಬಕಾಸುರನ ಸಿಸ್ಟಮ್.

ಶ್ರೀ ಜೆ. ಸಿ. ಮಾಧುಸ್ವಾಮಿ :- ಬಫೆ ಸಿಸ್ಟಮ್ ಆದರೂ ಮಾಡಿ ಬಕಾಸುರನ ಸಿಸ್ಟಮ್ ಆದರೂ ಮಾಡಿ. ಶೃಂಗೇರಿಯಲ್ಲಿ ಆಚೆ ಕೂರಿಸಿ ಊಟ ಕೊಟ್ಟ ಹಾಗೆ ಕೊಡಬೇಡಿ ನಮಗೆ. ಅಷ್ಟೇ ನಾವು ಕೇಳುವುದು.

ಶ್ರೀ ಡಿ.ಎನ್. ಜೀವರಾಜ್ :- ಮಾಧುಸ್ವಾಮಿಯವರೇ ನೀವು ಬೇರೆ ಏನನ್ನಾದರೂ ಮಾತನಾಡಿ, ಆದರೆ ಅನಾವಶ್ಯಕವಾಗಿ ಶೃಂಗೇರಿ ಊಟದ ಬಗ್ಗೆ ಇಲ್ಲಿ ಚರ್ಚೆ ಬೇಡ.

ಶ್ರೀ ಜೆ.ಸಿ. ಮಾಧುಸ್ವಾಮಿ :- Yes, we have been treated as untouchables.

ಶ್ರೀ ಡಿ. ಎನ್. ಜೀವರಾಜ್ :- ನಾವೇನು ಮಾಡಿದ್ದೇವೆ ಶೃಂಗೇರಿಯವರು? ಶೃಂಗೇರಿಯವರ ಬಗ್ಗೆ ಮಾತನಾಡಬೇಡಿ. ಶೃಂಗೇರಿಯಲ್ಲಿ ಸಾರ್ವಜನಿಕ ಊಟ ಹಾಕುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ :- ನಾವೇನು ಮಾಡಿದ್ದೇವೆ ಈ ರಾಜ್ಯದಲ್ಲಿ? ನಾವು ಹಾಗಾದರೆ ಎಮ್ಎಲ್ಎ ಗಳಲ್ಲಾ? ಆಚೆ ಕೂರಿಸಿ ಊಟ ಹಾಕಬೇಡಿ ಎಂದು ಅಷ್ಟೇ ಹೇಳಿದ್ದು. ಊಟವನ್ನು ಎಲ್ಲರಿಗೂ ಹಂಚಿ. ನಮ್ಮನ್ನು ಅಲ್ಲಿ ಒಳಗೆ ಕರೆದು ಊಟಕ್ಕೆ ಹಾಕಿಲ್ಲ. ನಾನು ಹೇಳಿದ್ದೇನೆ.

ಶ್ರೀ ಡಿ. ಎನ್. ಜೀವರಾಜ್ :– ನೀವು ಶೃಂಗೇರಿಗೆ ಬಂದಿದ್ದರೆ ಗೊತ್ತಾಗುತ್ತಿತ್ತು. ಈ ರೀತಿ ವಾದ ಮಾಡುವುದು ಸರಿಯಲ್ಲ. ನೀವು ಏನನ್ನು ಬೇಕಾದರೂ ವಾದ ಮಾಡಿ. ವಾದ ಮಾಡುವ ಸಂದರ್ಭದಲ್ಲಿ ಇನ್ನೊಬ್ಬರ ಭಾವನೆಗಳಿಗೆ ಧಕ್ಕೆ ಬರುವ ರೀತಿಯಲ್ಲಿ ಮಾತನಾಡಬೇಡಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಇದು ವೈಯಕ್ತಿಕ ಟೀಕೆ ಅಲ್ಲ.......

(ಗೊಂದಲ)

ಅಧ್ಯಕ್ಷರು :– ಎಲ್ಲರೂ ಕುಳಿತುಕೊಳ್ಳಿ. ಇತ್ತೀಚೆಗೆ ಫೈನಾನ್ಶಿಯಲ್ ಇನ್‌ಡಿಸಿಪ್ಲಿನ್ ಕಾಮನ್ ಆಗಿಬಿಟ್ಟಿದೆ. ಅವರು ಆ ಕಡೆ ಇದ್ದಾಗ ಅವರು ಹೇಳುತ್ತಾರೆ, ಈ ಕಡೆ ಇದ್ದಾಗ ಇನ್ನೊಂದು ತರಹ ಹೇಳುತ್ತಾರೆ, ಅದೆಲ್ಲಾ ನಾವು ಕಂಡಿದ್ದೇವೆ, ಪತ್ರಿಕೆಗಳಲ್ಲಿ ಬರೆದಿದ್ದಾರೆ, ಜನರೂ ಕಂಡಿದ್ದಾರೆ. ಆದರೆ ಫೈನಾನ್ಶಿಯಲ್ ಇನ್‌ಡಿಸಿಪ್ಲಿನ್ ಈ ತರಹ ಆಗಬಾರದು. ಆದರೆ ಅವರಿಗೆ ಕಂಡಿದ್ದನ್ನು ಅವರು ಹೇಳುತ್ತಿದ್ದಾರೆ. ಯಡಿಯೂರಪ್ಪನವರೂ ಕೂಡ ತಮ್ಮ ಸಮರ್ಥನೆಯನ್ನು ಆ ತರಹ ನಿಮಗೆ ಗೊತ್ತಿದ್ದರೆ ನೀವು ಸರಿಯಾಗಿ ಹೇಳಿ.

ಶ್ರೀ ಚಿಕ್ಕನಗೌಡ ಈಶ್ವರಗೌಡ ಪಾಟೀಲ್ :– ಮಾನ್ಯ ಅಧ್ಯಕ್ಷರೇ ಅವರಿಗೆ ದೇವರು ಅಂದರೆ ಗುಡಿ ಅಂದರೆ ಯಾವುದೂ ಗೊತ್ತಿಲ್ಲ. ಇವರು ದುಡ್ಡನ್ನು ಕೊಟ್ಟಿದ್ದಾರೆ ಅದನ್ನು ಅವರಿಗೆ ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

ಅಧ್ಯಕ್ಷರು :– ಮಾಧುಸ್ವಾಮಿಯವರೇ ತಾವು ಮಾತನಾಡಿ.

ಶ್ರೀ ದಿನೇಶ್ ಗುಂಡೂರಾವ್ :– ಮಾನ್ಯ ಅಧ್ಯಕ್ಷರೆ, ಪ್ರತಿಯೊಂದಕ್ಕೂ ಕೂಡ ಅವರು ಹಿಂದೆ ಏನಾಯಿತು, ಹಿಂದೆ ಯಾರು ಏನು ಮಾಡಿದರು, ನೀವು ಹಿಂದೆ ಮಾಡಿಲ್ಲವೇ ಎಂದು ಇದನ್ನೇ ಆ ಕಡೆಯವರು ಹೇಳುತ್ತಿದ್ದಾರೆ. ಹೀಗಾದರೆ ಸರಿ ದಾರಿಯಲ್ಲಿ ನಾವು ಯಾವಾಗ ಹೋಗುವುದು ?

ಅಧ್ಯಕ್ಷರು :– ವಿಚಾರಕ್ಕೆ ಸೀಮಿತವಾಗಿ ಚರ್ಚೆಯಾದರೆ ಈ ರೀತಿ ಆಗುವುದಿಲ್ಲ. ಸುಮ್ಮನೇ ಏನೋ ಪ್ರಾಸಂಗಿಕವಾಗಿ ಎಲ್ಲರೂ ಒಟ್ಟಾಗಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು :– ಮಾಧುಸ್ವಾಮಿಯವರೇ, ಬೇರೆ ಬೇರೆ ವಿಷಯಗಳ ಕಡೆಗೆ ಮಾತನಾಡಲು ಅವಕಾಶ ಮಾಡುವುದು ಬೇಡ. ತಾವು ಮಾತನಾಡಿ.

ಶ್ರೀ ಸಿದ್ದು ಸವದಿ :– ಮಾನ್ಯ ಅಧ್ಯಕ್ಷರೇ ಒಂದು ನಿಮಿಷ. ಮಾಧುಸ್ವಾಮಿಯವರೇ ಒಂದು ನಿಮಿಷ.

ಅಧ್ಯಕ್ಷರು :– ಮೊದಲು ಮಾಧುಸ್ವಾಮಿಯವರು ಮಾತನಾಡಲಿ. ಆಮೇಲೆ ಅವಕಾಶ ಸಿಕ್ಕಿದಾಗ ನೀವೂ ಮಾತನಾಡಬಹುದು.

ಶ್ರೀ ಸಿದ್ದು ಸವದಿ :– ಮಾನ್ಯ ಅಧ್ಯಕ್ಷರೇ, ಒಂದೆ ಒಂದು ನಿಮಿಷ. ನಮಗೆ ರಸ್ತೆ ಕಾಮಗಾರಿಗೆಂದು 10 ಲಕ್ಷ ರೂಪಾಯಿಗಳನ್ನೂ ಕೂಡ ಹಿಂದೆ ಅವರು ಕೊಟ್ಟಿರಲಿಲ್ಲ. ಅವರ ಪಕ್ಷ ಇದ್ದಾಗ ಅವರ ಪಕ್ಷದವರಿಗೆ ಮೂರು ಮೂರು ಕೋಟಿ. ಆರು ಆರು ಕೋಟಿ ರೂಪಾಯಿಗಳನ್ನು ಕೊಟ್ಟಿರುವ ಉದಾಹರಣೆಯನ್ನು ನಾನು ತೋರಿಸುತ್ತೇನೆ. ಆಗ ಆ ರೀತಿ ಮಾಡಿದಾಗ ಏಕೆ ಕೇಳಲಿಲ್ಲ. ಈಗ ಮಾತ್ರ ಕೇಳುತ್ತಿದ್ದೀರಲ್ಲ.

(ಗೊಂದಲ)

ಅಧ್ಯಕ್ಷರು :– ನೀವು ಈಗ ಕುಳಿತುಕೊಳ್ಳಿ. ನಾನು ಜೆ.ಸಿ. ಮಾಧುಸ್ವಾಮಿಯವರನ್ನು ಮಾತನಾಡಲು ಕರೆದಿದ್ದೇನೆ. ಅವರು ಮಾತನಾಡುತ್ತಿದ್ದಾರೆ. ತಾವು ಕೂಡ ಮಾತನಾಡಲು ಅವಕಾಶ ತೆಗೆದುಕೊಂಡು ಮುಂದೆ ಹೇಳಿ. ಮಾಧುಸ್ವಾಮಿಯವರೆ, ನೀವೂ ಅವರಿಗೆ ಉತ್ತರ ಕೊಡುವುದಕ್ಕೆ ಹೋಗಬೇಡಿ. ಈ ಕಡೆ ತಿರುಗಿಕೊಂಡು ಮಾತನಾಡಿ. ಸದಸ್ಯರುಗಳೂ ಅಷ್ಟೆ, ಮಧ್ಯೆ ಮಧ್ಯೆ ಮಾತನಾಡಬೇಡಿ. ಆ ರೀತಿ ಮಧ್ಯೆ ಪ್ರವೇಶ ಮಾಡಿ ಮಾತನಾಡುವುದು ಸರಿಯಲ್ಲ.

ಅಗತ್ಯ ಬಿದ್ದರೆ ಸಂಬಂಧಪಟ್ಟ ಮಂತ್ರಿಗಳು ಏನಿದ್ದಾರೆ ಅವರು ಎದ್ದು ನಿಂತು ಸಮಂಜಸವಾಗಿ ಉತ್ತರ ಕೊಡುತ್ತಾರೆ. ಆದರೆ ನೀವೆಲ್ಲಾ ಮಧ್ಯೆ ಎದ್ದು ನಿಂತು ಅಡ್ಡ ಮಾತನಾಡಿ ಚರ್ಚೆಯ ದಾರಿಯನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುವುದು ಸರಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೇ, ನಾನು ಸನ್ಮಾನ್ಯ ಹಣಕಾಸಿನ ಸಚಿವರನ್ನು ಕೇಳಬಯಸುತ್ತೇನೆ. ಎನರ್ಜಿ ಕೆಳಗೆ ಅಭಿಯಾಚನೆ ಸಂಖ್ಯೆ 24 ಬಾಬ್ತು ಸಂಖ್ಯೆ 5, ಪುಟ ಸಂಖ್ಯೆ 257 " ವಿದ್ಯುತ್ ವಲಯ ಪುನರ್ ರಚನೆ ಪ್ರಕ್ರಿಯೆಯಲ್ಲಿ ಭಾಗವಾಗಿ ಕರ್ನಾಟಕ ವಿ.ವಿ.ನಿ. ನಿಯಮಿತಕ್ಕೆ ಬಂಡವಾಳ ಹೂಡಿಕೆ ಅವಶ್ಯವೆಂದು ಕಂಡುಬಂದಿದೆ. ಆದಕಾರಣ ಅಭಿಯಾಚನೆಯಲ್ಲಿ 300 ಕೋಟಿ ರೂಪಾಯಿಗಳನ್ನು ಸೇರಿಸಿದೆ." 300 ಕೋಟಿ ಸೇರಿಸಬೇಕಾದರೆ ಏನು ಸ್ವಾಮಿ, ಅಂಥ ಎಮರ್ಜೆನ್ಸಿ? ತಮಗೆ ಮೊದಲೇ ಬಜೆಟ್ ಮಾಡುವ ಮುಂಚೆಯೇ ಏಕೆ ಗೊತ್ತಿರಲಿಲ್ಲ? ಅಂಥ ಏನು ಎಮರ್ಜೆನ್ಸಿ? 300 ಕೋಟಿ ರೂಪಾಯಿಗಳ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್ ಮಾಡುವಂಥದ್ದು What is the emergency? Why it is brought in the supplementary demands? Why it is not taken in original demand? ಪ್ರಕ್ರಿಯೆಗಳು ಬಂದಮೇಲೆ, ಎಲ್ಲರು ನಾವು ಟಿ.ವಿ. ಮುಂದೆ ಹೇಳುವಾಗ, ಕೋರ್ ಏರಿಯಾಗಳಿಗೆ, ಇರಿಗೇಶನ್‌ಗೆ, ಪವರ್‌ಗೆ ಯಡಿಯೂರಪ್ಪನವರು ದುಡ್ಡಿಲ್ಲವೆಂದರೆ, ಅಲ್ಲಿ ಉತ್ತರ ಹೇಳುವುದಕ್ಕೆ ಮೊದಲೇ ಇಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್‌ನ್ನು ತಂದುಬಿಡುತ್ತೀರಿ ಇಲ್ಲಿ ನಮ್ಮ ಮುಂದೆ ಹೇಳುವುದಕ್ಕೆ? ಇಲ್ಲಾ, ಇಲ್ಲಾ, ಜಾಸ್ತಿ ಮಾಡಿಕೊಟ್ಟಿದ್ದೇನೆ, ಆದಕಾರಣ ಇಲ್ಲಿ ಆ ಚರ್ಚೆಗಳನ್ನು ಮಾಡಬೇಡಿ ಎಂದು ಡಿಮ್ಯಾಂಡನ್ನೇ ಮೊದಲು ಸ್ಟಾರ್ಟ್ ಮಾಡಿಸುತ್ತೀರಿ? Is it the custom? Is it the practice of the Assembly? 300 ಕೋಟಿ ರೂಪಾಯಿಗಳನ್ನು ಸೇರಿಸಿದ್ದೀರಿ. 2006–07 ನೇ ಸಾಲಿನಲ್ಲಿ 135 ಕೋಟಿ ರೂಪಾಯಿಗಳನ್ನು ಬಾಬ್ತು ಸಂಖ್ಯೆ 6 ರಲ್ಲಿ ಒದಗಿಸಿದ್ದೇನೆ. ಒಂದು ಇಲಾಖೆಯಲ್ಲಿ ಇಂಥ ಒಂದು ಎಮರ್ಜೆನ್ಸಿ ಅಥವಾ ಎಕ್ಸಿಜೆನ್ಸಿ ನೀವು ಬಜೆಟ್ ಇಟ್ಟಮೇಲೆ ಬಂದದ್ದು ಏನು? ನಾವು ಇದನ್ನು ಕೇಳಬೇಕೋ ಬೇಡವೋ ಸಾರ್ ? ನಿಮ್ಮ ಹತ್ತಿರ ರಿಸೋರ್ಸ್

ಇದ್ದರೆ ನೀವು ಬಜೆಟ್‌ನಲ್ಲಿ ಏಕೆ ಇಡಲಿಲ್ಲ? ನಿಮ್ಮ ಹತ್ತಿರ ರೆವಿನ್ಯೂ ಇದ್ದರೆ, why you have not included all these items in the budget proposal? ಇಲ್ಲಿ ತಾವು ಇಡಬೇಕಾದ್ದು, ಮ್ಯಾಚಿಂಗ್ ಇದ್ದರೆ, ನೀವು ಕಂಟಿನ್‌ಜೆನ್ಸಿ ಫಂಡ್‌ನಿಂದ ಕೊಟ್ಟಿದ್ದು ರಿ-ಎಂಬರ್ಸ್ ಆಗಬೇಕಾಗಿದ್ದರೆ, ಏನಾದರೂ ಎಮರ್ಜೆನ್ಸಿ ಆಗಿದ್ದರೆ, ಎಕ್ಸಿಜೆನ್ಸಿ ಆಗಿದ್ದರೆ, ಅಕಸ್ಮಾತ್ ಏನೋ ನಿಮಗೆ ಮುಂದಿನ ವರ್ಷ ಯಾರೋ ಚೀನಾದಲ್ಲಿ ಒಲಂಪಿಕ್ಸ್ ನಡೆಸುವುದಕ್ಕೆ ಆಗುವುದಿಲ್ಲ. ಒಲಂಪಿಕ್ಸ್‌ನ್ನು 2008 ನೇ ಇಸವಿಯಲ್ಲಿ ಕರ್ನಾಟಕದಲ್ಲಿ ನಡೆಸಿ ಎಂದು ಹೇಳಿದ್ದರೆ, ಆಗ ನೀವು ನಾನು ಅರ್ಜೆಂಟ್ ಆಗಿ ಒಲಂಪಿಕ್ಸ್ ಗೇಮ್ ಅನ್ನು ಆಡಿಸಬೇಕಾಗಿದೆ, ಇದು ಈ ದೇಶದ ಪ್ರತಿಷ್ಠೆಯ ಪ್ರಶ್ನೆ. ಆದಕಾರಣ 6 ಸಾವಿರ ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡನ್ನು ತಂದಿದ್ದೇನೆ ಎಂದರೆ ನಾವು ಅದನ್ನು ಒಪ್ಪಿಕೊಳ್ಳಬಹುದಾಗಿತ್ತು. ಏನು ಸಾರ್ ಇದು? ಬಜೆಟ್ ಇಟ್ಟು ಇನ್ನೂ ಎಂಟು ದಿವಸಗಳಾಗಿಲ್ಲ ಆಗಲೇ ಇನ್ನೂ 6 ಸಾವಿರ ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡ್ ಎಂದರೆ ಏನು ಫೈನಾನ್ಶಿಯಲ್ ಡಿಸಿಪ್ಲೆನ್ ಇರಬಹುದು? ಹಿಂದೆ ನಾವು ಕೇಳಿದೆವು. ಮೂರು ದಿವಸ ಶಾಸನಸಭೆಯಲ್ಲಿ ನಾವು ಕೇಳಿದ್ದೆವು. ಒಂದೈವತ್ತು ಅರವತ್ತು ಕೋಟಿ ರೂಪಾಯಿಗಳನ್ನು ರೈತರ ಸಾಲ ಮನ್ನಾ ಮಾಡುವುದಕ್ಕೆ ಜಾಸ್ತಿ ಇಡಿ, ಒಂದು ಲಕ್ಷದವರೆಗೆ ಬೆಳೆ ಸಾಲ ತೆಗೆದುಕೊಂಡವರಿಗಾಗಿ ಎಂದಾಗ ಯಡಿಯೂರಪ್ಪನವರು "ಇಲ್ಲಾ ಇಲ್ಲಾ ರಿಸೋರ್ಸ್ ನೋಡಿಕೊಂಡು ನಾವು ಹೇಳಬೇಕಾಗುತ್ತದೆ" ಎಂದರು. ಆದರೆ ಈಗ ಇದಕ್ಕೆಲ್ಲಾ 6 ಸಾವಿರ ಕೋಟಿ ಎಲ್ಲಿಂದ ಬರುತ್ತದೆ? ಇದು ಯಾವ ದುಡ್ಡು ಇವರಿಗೆ ಕೊಡುತ್ತಿರುವುದು? ನಮಗೆ ಇದರ ಬಗ್ಗೆ ನೀವು ಹೇಳಬೇಕಲ್ಲ. Where are you generating this amount ? ಟಂಕಸಾಲೆಯನ್ನು ತಾವು ಎಲ್ಲಿಟ್ಟಿದ್ದೀರಿ? ನಾವು ಕೇಳಿದ್ದಕ್ಕೆ ಟಂಕಸಾಲೆ ಇಲ್ಲವೆಂದು ಹೇಳಿದರು. ಈಗ ಟಂಕಸಾಲೆಯನ್ನು ಎಲ್ಲಿಟ್ಟಿದ್ದೀರಿ? ಏನು ಮೈಸೂರಿನಲ್ಲಿರುವ ಟಂಕಸಾಲೆಯನ್ನು ನೀವು ಡೆವಲಪ್ ಮಾಡಿದ್ದೀರಾ ಅಥವಾ ಶಿಕಾರಿಪುರದಲ್ಲಿ ಏನಾದರೂ ಒಂದು ಟಂಕಸಾಲೆಯನ್ನು ಆರಂಭ ಮಾಡಿದ್ದೀರಾ ಎಂಬ ಬಗ್ಗೆಯಾದರೂ ಹೇಳಬೇಕಲ್ಲ. ಟಂಕಸಾಲೆ ನನಗೆ ಗೊತ್ತಿರುವ ಹಾಗೆ ಮೈಸೂರಿನಲ್ಲಿರುವ ಚಾಮುಂಡಿ

ಬೆಟ್ಟದಿಂದ ಆ ಕಡೆ ಇದೆ. ಇನ್ನೊಂದು ಟಂಕಸಾಲೆ ಎಲ್ಲಿದೆ ಎಂದು ನಮಗೆ ಗೊತ್ತಾಗಬೇಕು. ಬಜೆಟ್ ಇಟ್ಟ ಒಂದು ವಾರದೊಳಗೆ 6 ಸಾವಿರ ಕೋಟಿ ರೂಪಾಯಿಗಳನ್ನು ಇನ್ನೊಂದು ಬಜೆಟ್‌ನ್ನು ತಾವು ಪ್ಲೇಸ್ ಮಾಡಿದ್ದೀರಿ. ಸಾರ್ ಇದು ನಿಜವಾಗಿ ಪಾಸ್ ಮಾಡುವುದಕ್ಕೆ ಯೋಗ್ಯವಾದ ಬಜೆಟ್ ಅಲ್ಲ. ಮತ್ತೊಂದನ್ನು ನಾವು ದುರ್ದೈವದಿಂದ ಹೇಳಬೇಕಾಗಿದೆ. ಪ್ರತಿಸಲ ಜ್ಯುಡಿಶಿಯವರಿಗೆ ನೀವು ಅವರು ಕೇಳಿದಷ್ಟು ಹಣವನ್ನು ಇಡುತ್ತೀರಿ. ಅದಾದ ನಂತರ ಮತ್ತೆ ಅವರಿಗೆ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಹಣವನ್ನು ಕೊಡುತ್ತೀರಿ. ಸಾರ್, ಎಲ್ಲರೂ ಕೂಡ ಮನುಷ್ಯರೇ ಒಂದು ಇತಿಮಿತಿಯೊಳಗೆ ಕೆಲಸವನ್ನು ಮಾಡಬೇಕು, ಅವರಿಗೆ ಬಜೆಟ್ ಕೊಟ್ಟಿರುತ್ತೀರಿ. ಅದರಲ್ಲಿ ಅವರು ಅವರ ಖರ್ಚುಗಳನ್ನು ಅವರು ನೋಡಿಕೊಳ್ಳಬೇಕು. ಒಂದು ಕಾಲ ಇತ್ತು, ಡೀಟೈಲ್ಡ್ ಎಸ್ಟಿಮೇಟ್‌ನ್ನು ಜ್ಯುಡಿಶಿಯರಿ ಎಕ್ಸ್‌ಪೆಂಡಿಚರ್‌ನ್ನು ಇಲ್ಲಿ ಪಾಸ್ ಮಾಡುತ್ತಿದ್ದೆವು. ಅದು ತಪ್ಪಿ ಹೋಯಿತು. ಅವರಿಗೇ ಅಟನಮಿ ಕೊಟ್ಟು ನೀವೇ ಪಾಸ್ ಮಾಡಿಕೊಳ್ಳಿ ಎಂದು ಬಿಟ್ಟುಬಿಟ್ಟರಿ. ಅವರು ಜಡ್ಜ್‌ಗಳಮನೆಗಳಿಗೆ ಕೇಸ್ ಫೈಲ್ ಬಾಕ್ಸ್ ತೆಗೆದುಕೊಂಡು ಹೋಗುವುದಕ್ಕೆ ನಾವು ದುಡ್ಡು ಇಟ್ಟುಕೊಡುತ್ತಿದ್ದೇವೆ. ಕಾರ್ ಕೊಂಡುಕೊಳ್ಳಿ, ಮೋಟಾರ್‌ಸೈಕಲ್ ಕೊಂಡುಕೊಳ್ಳಿ, ಸ್ಕೂಟರ್‌ಕೊಂಡುಕೊಳ್ಳಿ ಎಂದು. ಕೇಸ್ ಫೈಲ್ ತೆಗೆದುಕೊಂಡು ಹೋಗುವುದಕ್ಕೆ ಸ್ಟೇಟ್ ಬಜೆಟ್‌ನಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನಲ್ಲಿ ಇಟ್ಟು ನಾವು ದುಡ್ಡು ಕೊಡುವುದು. ಏಕೆ ನೀವು ಜ್ಯುಡಿಶಿಯರಿಗೆ ದುಡ್ಡು ಇಟ್ಟಿರುವುದಿಲ್ಲವೆ? ಏನು ಮಾಡುತ್ತಿದ್ದಾರೆ ಅವರು? ಅವರು ಈ ಬಗ್ಗೆ ಹೇಳಬೇಕಲ್ಲ. ಇಲ್ಲಿ ಪ್ರಿಂಟ್ ಆಗಬೇಕು. ಅವರಿಗೆ ಮನೆಗೆ ಕೇಸ್ ಫೈಲ್‌ಗಳನ್ನು ತೆಗೆದುಕೊಂಡು ಹೋಗುವ ಬಾಕ್ಸ್‌ಗೆ ನಾವು ಇಷ್ಟು ದುಡ್ಡನ್ನು ಕೊಟ್ಟಿದ್ದೇವೆ ಎಂದು ಪ್ರಿಂಟ್ ಆಗಬೇಕು. ಅಧ್ಯಕ್ಷರೇ ನನಗೆ ಗೊತ್ತಾಗಬೇಕು, ಈಗ ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷರ ಆಪ್ತ ಖಾತೆಗೆ ಜಾಸ್ತಿ ಮಾಡುತ್ತೇವೆಂದು ಹೇಳುತ್ತೀರಿ. Hon'ble Minister is the Chairman. ಅಲ್ಲೊಂದು ಖಾತೆ ನೀವು ಏಕೆ ತೆಗೆಯುತ್ತಿದ್ದೀರಿ? ಯಾರನ್ನು ಮಾಡಿದ್ದೀರಿ ಯೋಜನಾ ಮಂಡಳಿಗೆ? ಸನ್ಮಾನ್ಯ ರಾಮಚಂದ್ರಗೌಡರು ಎಕ್ಸ್-ಅಫಿಶಿಯೋ ಅಧ್ಯಕ್ಷರಾಗಿದ್ದಾರೆ ಇವತ್ತು ಅದಕ್ಕೆ . ಹೀಗಿರುವಾಗ ಇಲ್ಲಿ ಏಕೆ ಎಕ್ಸ್‌ಪೆಂಡಿಚರ್ ಜಾಸ್ತಿ ಆಯಿತು?

ನಾನು ಆಗಲೇ ಕೇಳಿದೆ, ಲಾಟರಿ ಡಿಪಾರ್ಟ್‌ಮೆಂಟ್‌ನ್ನು ಮುಚ್ಚಬೇಕಾಗಿರುವ ಕಡೆ 12 ಕೋಟಿ ಜಾಸ್ತಿ ಮಾಡುತ್ತೇವೆ ಎಂದು ಹೇಳುತ್ತೀರಿ. ನಾನು ಬಹಳ ಆಸೆ ಇಟ್ಟುಕೊಂಡಿದ್ದೆ, ಕನ್ನಡ ಕಲ್ಚರ್‌ಗೆ ಆ ಕಡೆ ಈ ಕಡೆ ನೋಡುತ್ತೀರೇನೋ, ಸುವರ್ಣ ರಾಜ್ಯೋತ್ಸವ ಮಾಡುತ್ತಾರಲ್ಲ ಎಂದು. ಆದರೆ ಇಲ್ಲಿ ಏನನ್ನೂ ಮಾಡಲಿಲ್ಲ. ಕನಿಷ್ಟ ನಮ್ಮ ಬಿ.ಎಂ. ಶ್ರೀಕಂಠಯ್ಯ ಎಂದು ಏನಿದ್ದರೋ ಯಡಿಯೂರಪ್ಪನವರೆ, ಅವರು ಪಂಪಮಹಾಕವಿ ಪ್ರಶಸ್ತಿ ತೆಗೆದುಕೊಂಡಿದ್ದರು, ತಾವು ದೊಡ್ಡವರು, ಹೋದ ಬಾರಿ ಅಸೆಂಬ್ಲಿಯಲ್ಲಿ ರೈಸ್ ಮಾಡಿದರೂ ಕೂಡ ಅವರಿಗೋಸ್ಕರ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ. ನಾವು ಅವರಿವರನ್ನು ಕೈ ಕಾಲು ಕಟ್ಟಿ ಶತಮಾನೋತ್ಸವವನ್ನು ಮಾಡಿದ್ದೇವೆ. ಏನಾದರೂ ಮಾಡಿ ಎಂದು ನಾವೆಲ್ಲಾ, ಚಿಕ್ಕನಾಯಕನಹಳ್ಳಿ ಜನರೆಲ್ಲಾ ಬೇಡಿದೆವಲ್ಲಾ ಸ್ವಾಮಿ. ಶಿಶುನಾಳ ಷರೀಫ್‌ರಿಗೋಸ್ಕರ ಏನಾದರೂ ಮಾಡಿ, ಸನ್ಮಾನ್ಯ ಬಿ. ಎಂ. ಶ್ರೀಕಂಠಯ್ಯನವರು ಭಾರತೀಯ ಕಾವ್ಯ ಮೀಮಾಂಸೆಯನ್ನು ಬರೆದು ಇವೊತ್ತಿಗೆ ಅಂಥ ಗಂಥ ಇಡೀ ದೇಶದಲ್ಲಿಯೇ ಇಲ್ಲವೆನ್ನುವ ಹೆಸರನ್ನು ತೆಗೆದುಕೊಂಡ ಬಂದ ಮನುಷ್ಯನ ಸೆಂಟಿನರಿ ಸೆಲಬ್ರೇಟ್ ಮಾಡುತ್ತಿದ್ದೇವೆ. ಇದಕ್ಕೆ ಕೇವಲ 5 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಲ್ಲ. ಬಿ.ಎಂ. ಶ್ರೀಕಂಠಯ್ಯನವರ ಸಮಾಧಿ ಮೇಲೆ ಫಸ್ಟ್‌ಕ್ಲಾಸ್ ಇಟಾಲಿಯನ್ ಮಾರ್ಬಲ್ ಹಾಕುವುದಕ್ಕೆ ಇದು ಸಾಲುವುದಿಲ್ಲ. ಕೇವಲ 5 ಲಕ್ಷ. ತುಮಕೂರು ಜಿಲ್ಲೆಯಲ್ಲಿ ಹುಟ್ಟಿದವರೆಲ್ಲಾ ಪಾಪ ಮಾಡಿದವರೇ ಎಂದಂತಾಯಿತು. ಇವರೆಲ್ಲಾ ಗ್ರಹಚಾರದವರು, ಇವರೆಲ್ಲರೂ ಶಿವಮೊಗ್ಗ ಜಿಲ್ಲೆಯಲ್ಲಿ ಏಕೆ ಹುಟ್ಟಲಿಲ್ಲ ಎಂದು ನಮ್ಮ ಚಿಂತೆ. ನಮ್ಮ ಕಡೆ ಹುಟ್ಟಿದವರು. ಆದರೆ ನಾವು ಏನೂ ಮಾಡುವ ರೀತಿಯಲ್ಲಿ ಇಲ್ಲ. ನಮ್ಮ ಕ್ಷೇತ್ರದ ಜನರು ನಮಗೆ ಅನ್ನುವುದನ್ನು ಬಿಡೋದಿಲ್ಲ. ನೀವೇನ್ರಿ ನೀವು ಇಲ್ಲಿ ಸೆಂಟಿನರಿ ಆಚರಣೆ ಮಾಡುತ್ತಿದ್ದೀರಿ, ನಿಮಗೆ ಏನೂ ಕೊಟ್ಟಿಲ್ಲ. ಯಡಿಯೂರಪ್ಪನವರು ನೋಡ್ರಿ ಹೇಗೆ ಕೊಟ್ಟಿದ್ದಾರೆ, ಅವರ ತಾಲ್ಲೂಕಿನಲ್ಲಿ ಇರುವ ದೇವಸ್ಥಾನದಿಂದ ಹಿಡಿದು ಅವರ ತಾಲ್ಲೂಕಿನ ಕವಿಗಳಿಗೆ ಏನೇನೋ ಬೇಕೋ ಅವೆಲ್ಲವನ್ನೂ ಮಾಡಿಕೊಳ್ಳುತ್ತಿದ್ದಾರೆ. ಆದರೆ ನೀವು ಮಾತ್ರ ಕುಳಿತುಕೊಂಡು ನೋಡುತ್ತಿದ್ದೀರಿ ಎಂದರೆ ನಾವು ಏನು ಹೇಳೋದು ಹೇಳಿ. ನಮಗೆ ಶಿವರುದ್ರಪ್ಪನವರ ಬಗ್ಗೆ ಗೌರವ ಇದೆ. ನೀವೆಷ್ಟಾದರೂ

ಮಾಡಿ. ಸ್ವಲ್ಪ ಪಕ್ಕದವರಿಗೂ ಮಾಡಿ. ಶಿವಮೊಗ್ಗದಲ್ಲಿ ಹುಟ್ಟಿದರೂ ಎನ್ನುವ ಒಂದೇ ಕಾರಣಕ್ಕಾಗಿ ಎಲ್ಲ ದುಡ್ಡು ಡೈವರ್ಟ್ ಮಾಡಬೇಡಿ. ಸಾಹಿತ್ಯಕ್ಕಾಗಿ ಸೇವೆ ಮಾಡಿದ್ದಾರೆ. ಅವರಿಗಾಗಿ ಖರ್ಚು ಮಾಡಲಿ. ಆದರೆ ಈ ಕಡೆಗೂ ಸ್ವಲ್ಪ ನೋಡಬೇಕಾಗಿತ್ತು. ಇದನ್ನು ಮಾಡಿಲ್ಲದಿರುವುದರಿಂದ ಸಾರ್ ಇದು ಯಾವುದೇ ವಿವೇಚನೆ ಇರುವಂಥ ಮನುಷ್ಯ ಈ ಮಟ್ಟದ ಪೂರಕ ಅಂದಾಜುಗಳನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನೀವೇನು ತಂದಿದ್ದೀರಿ ಇದು ವೈಯಕ್ತಿಕ ಹಿತಾಸಕ್ತಿಗೆ, ನಿಮ್ಮಲ್ಲಿರುವ ವ್ಯತ್ಯಾಸಗಳನ್ನು ತೃಪ್ತಿಪಡಿಸುವುದಕ್ಕಾಗಿ, ನಿಮ್ಮಲ್ಲಿ ಯಾರಾದರೂ ನಿಮ್ಮ ಸಚಿವ ಸಂಪುಟದ ಸದಸ್ಯರು, ಶಾಸಕರು ನಿಮ್ಮ ವಿರುದ್ಧ ಟೀಕೆ ಮಾಡುವವರನ್ನು ತೃಪ್ತಿಪಡಿಸುವುದಕ್ಕೆ ಈ ಪೂರಕ ಅಂದಾಜಿನಲ್ಲಿ ಪ್ರಾವಿಶನ್ ಮಾಡಿದ್ದೀರಿ. ಬಜೆಟ್ ಪಾಸ್ ಆಗುವವರೆಗಾದರೂ ನಾವು ನೆಮ್ಮದಿಯಾಗಿ ವಿಧಾನಸೌಧದಲ್ಲಿ ಕುಳಿತುಕೊಂಡು ಎದ್ದುಹೋಗೋಣ, ಮಧ್ಯೆ ಏನಾದರೂ ನಮ್ಮ ಮಂತ್ರಿಗಳು ಎದ್ದು ನಿಂತು ಮಾತನಾಡಿಬಿಟ್ಟಾರು ಎಂದು ರೇವಣ್ಣನವರೆ ಇಲ್ಲಿ ಇಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನೀವು ಇಷ್ಟು ಟೀಕೆ ಮಾಡಿದಮೇಲೆ ನಿಮಗೆ ಏನಾದರೂ ಸಿಗಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಒಂದೆರಡು ಲಕ್ಷ ಸಿಕ್ಕಬಹುದು. ತೀ. ನಂ. ಶ್ರೀಕಂಠಯ್ಯನವರ ಹೆಸರಿನಲ್ಲಿ ಎಂದು ಆಲೋಚನೆ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಅದೇನು ಸಿಗುತ್ತದೋ ಇಲ್ಲವೋ ಗೊತ್ತಿಲ್ಲ. ಸನ್ಮಾನ್ಯ ಯಡಿಯೂರಪ್ಪನವರು ಶಿಸ್ತನ್ನು ತರಬೇಕು. ನಾವೇನು ಅಂದುಕೊಂಡಿದ್ದೆವೆಂದರೆ, ಇಷ್ಟೊಂದು ಇದೆಯೆಂದರೆ, ಬಹುಶಃ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಸಂಬಂಧಪಟ್ಟಂತೆ ಪೇ ಕಮಿಶನ್‌ನವರು ಕೊಟ್ಟಿರುವ ರಿಪೋರ್ಟ್‌ನ್ನು ತಾವು ಒಪ್ಪಿಕೊಂಡಿದ್ದೀರಿ. ಅದನ್ನು ಬಜೆಟ್‌ನಲ್ಲಿ ಇಡುವಾಗ ಬಿಟ್ಟು ಬಿಟ್ಟಿದ್ದೀರಿ, ನಾನು ಅದೆಲ್ಲಾ ಇಲ್ಲಿ ಬರಬಹುದು ಎಂದುಕೊಂಡಿದ್ದೆ. ನನಗೆ ಅದೇನು ಕಾಣಲಿಲ್ಲ. Pay Commission revision ನಿಂದ ಇಷ್ಟು ಆಗುತ್ತಿದೆ, ಅವರ arrears ಗೆ ಎಷ್ಟು ಕೊಡಬೇಕು, ಅದೆಲ್ಲಾ figures ಆಗಿರಬಹುದು, ಇಷ್ಟೊಂದು amount crop up ಆಗುವುದಕ್ಕೆ ಎಂದುಕೊಂಡಿದ್ದೆ. ಅದು ಇನ್ನೊಂದು ಕಂತು ಬರಬಹಬುದು. ನಾವೇ ಹೇಳಿ

ಕೊಟ್ಟು ಬಿಟ್ಟಿದ್ದೇವೆ. ಇನ್ನೊಂದು ಕಂತನ್ನು ನಮ್ಮ ಮುಂದೆ ತೆಗೆದುಕೊಂಡು ಬನ್ನಿ ಎಂದು. Capital investment ಅನ್ನು ಕೂಡ ಇದರಲ್ಲಿ ತರುವಂತಹ ಸ್ಥಿತಿಯನ್ನು ಈ ರಾಜ್ಯಕ್ಕೆ ತರಬಾರದು. This shows Budgeting process ನಲ್ಲಿ ಎಷ್ಟು indiscipline ಇದೆ ಆ ಇಲಾಖೆ ಕೆಳಗಡೆ. ದಯಮಾಡಿ ಇಂತಹ ಪೂರಕ ಡಿಮ್ಯಾಂಡ್‌ಗಳನ್ನು ಅಸೆಂಬ್ಲಿ ಮುಂದೆ ಇಡುವುದನ್ನು ಕಡಿಮೆ ಮಾಡಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಮಾನ್ಯ ವಾಟಾಳ್ ನಾಗರಾಜ್‌ರವರೆ, ಇನ್ನು ನಿಯಮ 69 ಇದೆ, ಬಜೆಟ್ ಮೇಲೆ discussion ಆರಂಭ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾತನಾಡಲೇಬೇಕು. ಮಾತನಾಡದ ಹಾಗೆ ಹೋಗುವುದು ಸರಿಯಲ್ಲ.

ಅಧ್ಯಕ್ಷರು :– ಪೂರಕ ಅಂದಾಜಿನ ಮೇಲೆಯೇ ಇಷ್ಟೊಂದು ಮಾತನಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :– ಇದು ಒಂದು ರೂಪಾಯಿ ಅಥವಾ ಎರಡು ರೂಪಾಯಿಯ ವ್ಯವಹಾರವಾಗಿದ್ದರೆ, ಇದು ಆರು ಸಾವಿರ ಕೋಟಿ ರೂಪಾಯಿ ವ್ಯವಹಾರ.

ಅಧ್ಯಕ್ಷರು :– ಇದರ ಮೇಲೆ ಮಾತನಾಡಿದರೆ ಬೇರೆ ವಿಷಯಕ್ಕೆ ಸಮಯ ಬಹಳ ಕಡಿಮೆಯಾಗಿಬಿಡುತ್ತದೆ ಎಂದು. ಅವೆಲ್ಲಾ ಚರ್ಚೆಯಾಗದೇ ಉಳಿದುಬಿಡುತ್ತದೆ.

ಶ್ರೀ ವಾಟಾಳ್ ನಾಗರಾಜ್ :– ಇದು ಹಳೇ ಮೈಸೂರಿನ ಆಯವ್ಯಯ ಇದ್ದಹಾಗೆ ಇದೆ. ಹಳೇ ಮೈಸೂರಿನ ಕಾಲದಲ್ಲಿ ಹೀಗೆ ಇತ್ತು.

ಅಧ್ಯಕ್ಷರು :– ಹಿಂದೆ ನಾವು ನೋಡಿದ್ದೇವೆ. ಕೆಲವರು ಪ್ರಮುಖರು ನಿಂತು ಕೆಲವು ವಿಚಾರಗಳಲ್ಲಿ time ಅಥವಾ subject ಅನ್ನು ತೆಗೆದುಕೊಂಡು ಮಾತನಾಡುತ್ತಿದ್ದರು. ಈಗ ಎಲ್ಲರೂ ಇದರ ಬಗ್ಗೆ ಚರ್ಚೆ ಮಾಡಿದರೆ Budget ಮತ್ತು ನಿಯಮ 69 ರ ಮೇಲೆ ಚರ್ಚೆ ಇದೆ. ಅವುಗಳ ಗತಿ ಏನು ಅಂತ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಇದು ಬಜೆಟ್ ಅಲ್ವಾ?

ಅಧ್ಯಕ್ಷರು :– ಇದು ಬಜೆಟ್ ಸರಿ, ಆದರೆ ಎಲ್ಲಾ ಮಾತನಾಡಿದ್ದಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, Co- operative Banks ದು ಸ್ವಲ್ಪ ಸ್ವಲ್ಪ problem ಇದೆ. ಅದರ ಬಗ್ಗೆ ನಾವು ಒಂದು ನಿಮಿಷ mention ಮಾಡುತ್ತೇವೆ. ನಾವು ಬಹಳ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಮಗೆ ಅದಕ್ಕೆ ಅವಕಾಶ ಕೊಡಿ. DCC Bank ಮತ್ತು Apex Bank ದು ಸ್ವಲ್ಪ problem ಇದೆ. ಅದನ್ನು submit ಮಾಡುತ್ತೇವೆ. ಅದನ್ನು ಏನು ಮಾಡುತ್ತಾರೆ? ಏಕೆಂದರೆ Supplementary budget ಮುಗಿದಮೇಲೆ ಮತ್ತೆ ಅದರ ಮೇಲೆ demand ಇಲ್ಲವಲ್ಲ. ಈ main budget already ಮಾಡಿಮುಗಿಸಿದ್ದಾರೆ. At least ಹೇಳುವುದಕ್ಕೆ ಅವಕಾಶ ಕೊಡಿ. 200 ಕೋಟಿ Supplementary budget ಗೆ House ನಲ್ಲಿ ಎರಡೆರಡು ದಿವಸ discussion ಆಗಿದೆ.

ಅಧ್ಯಕ್ಷರು :– ಬೇಗ ಮುಗಿಸಿಬಿಡಿ ನಾಗರಾಜುರವರೇ

ಶ್ರೀ ವಾಟಾಳ್ ನಾಗರಾಜ್ :– ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರು ಬೇಗ ಮುಗಿಸಿ ಎಂದು ಹೇಳಿದರು, ನಾನು ಮುಗಿಸುತ್ತೇನೆ ಎಂದು ಹೇಳಿದೆ. ಇದು ಅಶಿಸ್ತು ಆಗುತ್ತದೆ. ಎಲ್ಲೋ ಒಂದು ಕಡೆ ಈ ರೀತಿ ಪೂರಕ ಅಂದಾಜನ್ನು ಮೂಲಭೂತವಾಗಿ ಸಂಪೂರ್ಣವಾಗಿ ಬಜೆಟ್ ಬಗ್ಗೆ ಸಮಗ್ರವಾಗಿ ಚರ್ಚೆಯಾಗಿ, ಅದು ಆದಮೇಲೆ ಬಂದಿದ್ದರೆ ಆಗ ಅದಕ್ಕೆ ನಿಜಕ್ಕೂ ಮಹತ್ತರ ಬೆಲೆ ಇತ್ತು. ಏಕೋ ಮಾನ್ಯ ಯಡಿಯೂರಪ್ಪನವರು ಬಂದಮೇಲೆ ಇದಕ್ಕೆ ಬೇರೆ ದಿಕ್ಕನ್ನೇ ತಲುಪಿಸಿಬಿಟ್ಟಿದ್ದಾರೆ. ಮಾನ್ಯ ಯಡಿಯೂರಪ್ಪನವರು ಆಯವ್ಯಯ ಮಂಡಿಸಿದರು ಎಂದರೆ ಇದಕ್ಕೆ ಏನೋ ಒಂದು ವಿಶೇಷ ಇರಬೇಕು. ಈ ಪೂರಕ ಅಂದಾಜನ್ನು ಮಂಡಿಸಿ, ಇದರ ಬಗ್ಗೆ ಚರ್ಚೆಯಾಗಬೇಕು ಎನ್ನುವುವು ನೋಡಿದರೆ ಏಕೆ ಅವರು ಈ ರೀತಿ ತೀರ್ಮಾನ ತೆಗೆದುಕೊಂಡರು ಗೊತ್ತಿಲ್ಲ. ಇದು ಸರಿಯಾದ ಕ್ರಮವಲ್ಲ. ಇದು ಅನಾಗರೀಕವಾದದ್ದು ಮತ್ತು ಆರೋಗ್ಯಕರವಲ್ಲ. ಮಾನ್ಯ ಮಾಧುಸ್ವಾಮಿಯವರು ಆಗಲೇ ಅದನ್ನೇ ವಾದ

ಮಾಡಿದರು, ಬಜೆಟ್ ಮೇಲೆ ಚರ್ಚೆಯಾಗುವುದಿಲ್ಲ ಎಂದು ನೀವು ತಿಳಿದುಕೊಂಡಿದ್ದರೆ, ಆ ನಷ್ಟ ನಿಮಗೆ ಆಗುತ್ತಿತ್ತು. ನಾನು ನಿಮಗೆ ಹೊರಗಡೆ ಹಾಗೂ ಒಳಗಡೆ ಕೂಡ ಹೇಳಿದೆ. ಆಯವ್ಯಯದ ಬಗ್ಗೆ ಉತ್ತರ ಕೊಡಲಿಲ್ಲವೆಂದರೆ ಮಾನ್ಯ ಹಣಕಾಸು ಸಚಿವರು ಆಗಿರುವಂತಹ ಉಪ ಮುಖ್ಯಮಂತ್ರಿಗಳು ಈ ನಷ್ಟ ಯಾರಿಗೆ ಜಾಸ್ತಿ ಆಗುತ್ತದೆ ಎಂದರೆ ನಿಮಗಾಗುತ್ತದೆ. ಏಕೆಂದರೆ ನಾವು ಚರ್ಚೆ ಮಾಡುತ್ತೇವೆ, ನೀವು ಇಡೀ ರಾಜ್ಯದ ಮುಂದಿನ ಭವಿಷ್ಯದ ಬಗ್ಗೆ ಮುಂದಿನ ಚಿಂತನೆ ಬಗ್ಗೆ ಈ ರಾಜ್ಯದಲ್ಲಿ ಏನೇನು ಮಾಡುತ್ತೇವೆ ಎನ್ನುವ ವಿಚಾರದಲ್ಲಿ ಅದರಲ್ಲೂ ಜಾಸ್ತಿ ಮಾನ್ಯ ಯಡಿಯೂರಪ್ಪನವರು ಎಂದರೆ ತಲೆಯಲ್ಲಿ ಏನೆಲ್ಲಾ ಹೇಳಬೇಕು ಎಂದು ಬಹಳ ತುಂಬಿಕೊಂಡಿದ್ದೀರಿ. ಇನ್ನೂ ನಿಮಗೆ ಸಮಾಧಾನವಾಗಿಲ್ಲ. ಮೊನ್ನೆ ಬಜೆಟ್ ಮಂಡಿಸಿದ್ದೀರಿ. ನಿಮಗೆ ಸಮಾಧಾನವಾಗಿಲ್ಲ ಇನ್ನೂ ಸಮಾಧಾನವಾಗಿಲ್ಲ. ನನಗೆ ಅನಿಸುತ್ತದೆ ನಿಮಗೆ ಏನೋ ಇದೆ. ನಿಮಗೆ ಒಂದು ತಲೆ ಸಾಕಾಗುವುದಿಲ್ಲ. ರಾವಣನ ತರಹ ಮಾನ್ಯ ಯಡಿಯೂರಪ್ಪನವರಿಗೆ ಹತ್ತು ತಲೆ ಇದ್ದರೆ ಸಾಕಾಗುತ್ತಿತ್ತು ಏನೋ. ಒಂದು ತಲೆ ಸಾಕಾಗುವುದಿಲ್ಲ. ಈ ಕಡೆ ಐದು, ಇಲ್ಲಿ ಒಂದು ಈ ಕಡೆ ನಾಲ್ಕು ಹತ್ತು ಕೈಗಳು ಇದ್ದರೆ ಸಾಕಾಗುತ್ತಿತ್ತು ಎಂದು ನನಗೆ ಅನಿಸುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಕಳೆದ ಒಂದು ವರ್ಷದಲ್ಲಿ ಇಡೀ ಅಧಿವೇಶನದಲ್ಲಿ ಎಂದರೆ 14 ತಿಂಗಳಲ್ಲಿ ನಾನು ಸುಮಾರು ಒಂದೂವರೆ ಗಂಟೆ ಕೂಡ ಮಾತನಾಡಿಲ್ಲ. ಈ ಶಾಸನಸಭೆಯಲ್ಲಿ Ruling party ನಲ್ಲಿ ಕುಳಿತು ಅತ್ಯಂತ ಕಡಿಮೆ ಮಾತನಡಿರುವವನು ನಾನು.

ಶ್ರೀ ಜೆ.ಸಿ.ಮಾಧುಸ್ವಾಮಿ :- ನೀವು ಇಲ್ಲಿ ಕುಳಿತುಕೊಂಡಿರುವುದು ಅಧಿಕಾರ ಮಾಡುವುದಕ್ಕೆ. ನಾವು ಇಲ್ಲಿ ಕುಳಿತುಕೊಂಡಿರುವುದು ಮಾತನಾಡುವುದಕ್ಕೆ. ನೀವು ಮಾತನಾಡುತ್ತಾ ನಿಂತರೆ ನಮಗೆ ಕಷ್ಟ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನನ್ನ ತಲೆಯಲ್ಲಿ ತುಂಬಿಕೊಂಡಿರುವುದೆಲ್ಲಾವನ್ನು ನಾನು ಬಜೆಟ್‌ನಲ್ಲಿ ಹೇಳಿಬಿಟ್ಟಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವು ಎರಡು ದಿವಸ ಮಾತನಾಡಿದ್ದಕ್ಕೆ, ಉತ್ತರ ಎರಡೇ ಲೈನ್ ನಲ್ಲಿ ಹೇಳಬೇಕು ಸರ್.

ಶ್ರೀ ಬಿ.ಎಸ್. ಯಡಿಯೂರಪ್ಪ :- ನನಗೆ ನನ್ನದೇ ಆದಂತಹ ಕಲ್ಪನೆ ಏನಿತ್ತು, Ruling Party ಯಲ್ಲಿ ಇದ್ದಾಗ ಮಾತನಾಡುವ ಅಗತ್ಯ ಇಲ್ಲ. ಅದನ್ನು ಕೃತಿಯಲ್ಲಿ ಆಯವ್ಯಯದ ಮೂಲಕ ಜನರಿಗೆ ತಲುಪುವ ರೀತಿಯಲ್ಲಿ ಮಾಡಿದ್ದೇನೆ ಎನ್ನುವ ಸಂತೃಪ್ತಿ, ಸಮಾಧಾನ ನನಗೆ ಇದೆ.

ಶ್ರೀ ವಾಟಾಳ್ ನಾಗರಾಜ್ :- ನೀವು ಆಯವ್ಯಯವನ್ನು ಮೂರು ಗಂಟೆ ಓದಿದ್ದೀರಿ. 12 ಗಂಟೆಗೆ ನೀವು ಶಾಸ್ತ್ರ, ಸೂತ್ರ, ಮಾಟ, ಮಂತ್ರ, ಎಲ್ಲಾ ಕೇಳಿಕೊಂಡು ಆಮೇಲೆ ಹೂವು, ಕುಂಕುಮ, ವೀಳ್ಯದೆಲೆ ಕಟ್ಟಿಸಿಕೊಂಡು ಬಂದು correct ಆಗಿ ಇಲ್ಲಿಗೆ ಬರುವಷ್ಟು ಹೊತ್ತಿಗೆ 12 ಗಂಟೆಯಾಯಿತು. ನೀವು ಆರಂಭ ಮಾಡಿದ ಮೇಲೆ ನಮ್ಮ ಭಾಷಣ ಕೇಳಬೇಕು ಎನ್ನುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಹೊಟ್ಟೆ ಹಸಿವು, ನೀವು ಹೇಳುವುದನ್ನೆಲ್ಲಾ ಕೇಳುವುದಕ್ಕೆ ಶಕ್ತಿ ಬೇಕಲ್ಲ. ಎಲ್ಲಾ ಹೇಳಿಬಿಟ್ಟಿದ್ದೀರಿ ಬಿಡಿ. ಹೆಚ್ಚು ಕಡಿಮೆ ಇನ್ನು ಮೂರ್ನಾಲ್ಕು ಜನ ಅರ್ಥಸಚಿವರು ಬಂದರೆ ಏನು ಹೇಳಬೇಕು ಅದನ್ನೆಲ್ಲಾ ಹೇಳಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ತಮ್ಮ ಕೊಠಡಿಯಲ್ಲಿ ನಾನು ಏನೇ ಮಾಡಬೇಕಾದರೂ ಕೂಡ ವಾಟಾಳ್ ನಾಗರಾಜ್‌ರವರನ್ನು ಕೇಳಿಯೇ ಮಾಡುವುದು ಎಂದು ಹೇಳಿದರು. ಅದಕ್ಕಾಗಿ ಇದನ್ನು ನಿಮ್ಮನ್ನು ಕೇಳಿಯೇ ಮಂಡಿಸಿದ್ದಾರೆ. ಆದುದರಿಂದ ನೀವು ಮಾತನಾಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೆ.

ಶ್ರೀ ವಾಟಾಳ್ ನಾಗರಾಜ್ :- ನೀವು ಇದುವರೆಗೂ ಕೇಳುತ್ತಿದ್ದಿರಿ, ನನ್ನನ್ನು ಏಕೆ ಕೇಳಲಿಲ್ಲವೆಂದು ಅವರನ್ನು ಕೇಳಿದಾಗ, ಅವರು ಈ ಸಲ ಮಾನ್ಯ ಖರ್ಗೆಯವರನ್ನು ಕೇಳಿದ್ದೇವೆ. ಆದ್ದರಿಂದ ನಿಮ್ಮನ್ನು ಕೇಳುವುದು ಬೇಕಾಗಿಲ್ಲವೆಂದು ಹೇಳಿದರು. ಆದ್ದರಿಂದ ನಿಮಗೂ ಅವರಿಗೂ ಒಳಗೊಳಗೆ ಏನೇನು ಇದೆಯೋ ನನಗಂತೂ ಗೊತ್ತಿಲ್ಲ. ಅವರನ್ನು ಕೇಳಿ ನೀವು. ಅವರು ಹೇಳಿದ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೀವು ಬಿಜೆಪಿ, ಆರ್‌ಎಸ್‌ಎಸ್‌ದು ವಾಸನೆಯಾದರೂ ತೆಗೆದುಕೊಳ್ಳುತ್ತೀರಿ, ನಮಗೆ ವಾಸನೆ ಕೂಡ ಗೊತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ವಾಸನೆ ಏಕೆ ? ಊಟವೇ ನಿಮಗೆ ಸಿಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ವಾಸನೆ ಏಕೆ ಸ್ವಾಮಿ? ನಿಮಗೆ ಊಟವೇ ಸಿಗುತ್ತದೆ. ನಾವು ಬರೀ ವಾಸನೆ ಕುಡಿಯುವವರು. ನಾವಿಲ್ಲಿದ್ದೇವೆ ನೋಡಿ ಐದು ಜನ, ನಾವು ಬರೀ ವಾಸನೆ ಕುಡಿದು ಬದುಕಿರುವವರು. ನೀವು ಮೃಷ್ಟಾನ್ನ ಭೋಜನ ಊಟ ಮಾಡಿರುವವರು. ನಾವು ವಾಸನೆ ಜನ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸದ್ಯಕ್ಕೆ ಸ್ವಲ್ಪ ದೋಸ್ತಿ ಇದೆ. ಅದನ್ನು ನೀವು ಒಪ್ಪಿಕೊಳ್ಳಿ. ಅದನ್ನು ನೀವು ಸುಮ್ಮನೆ ಏಕೆ ಹೇಳುತ್ತೀರಿ? ಸದ್ಯಕ್ಕೆ ಇದೆ.

ಶ್ರೀ ವಾಟಾಳ್ ನಾಗರಾಜ್ :- ಸದ್ಯಕ್ಕೆ ಇದೆ ಎನ್ನುತ್ತೀರಾ? ಇಲ್ಲಿ ಏನಾಗಿದೆ ಎಂದರೆ ಆಯವ್ಯಯ ಮಂಡನೆ ಮಾಡುವಾಗ ಹೇಳುವಂಥದ್ದು ಒಂದು. ಮತ್ತೆ ಇಲ್ಲಿ ಅದಕ್ಕೆ 5.50 ಯಿಂದ 6 ಸಾವಿರ ಕೋಟಿ ರೂಪಾಯಿ ಅದಕ್ಕೆ ಸೇರಿಸುವಂಥದ್ದು ಇನ್ನೊಂದು. ಇದು ಏನಾಗುತ್ತದೆ ಎಂದರೆ ಆಯವ್ಯಯ ಎನ್ನುವ ಒಂದು ಅರ್ಥವನ್ನು ಕಳೆದುಕೊಳ್ಳುತ್ತದೆ. ಈ ಅರ್ಥ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತದೆ. ನಿಜಕ್ಕೂ ಇದು ಒಳ್ಳೆಯದಲ್ಲ. ನೀವು ಅನೇಕ ವಿಚಾರದಲ್ಲಿ ಹೇಳಿರತಕ್ಕಂಥಾದ್ದು ಎಂದರೆ, ಒಂದು ವೀರಪ್ಪನ್ ಕಾರ್ಯಾಚಾರಣೆಗೆ ನೇಮಿಸಲಾಗಿದ್ದ ಜಂಟಿ STF ನಿಂದ ನೊಂದವರಿಗೆ, ಮೃತಪಟ್ಟವರಿಗೆ, ಸಮೀಪದ ಬಂಧುಗಳಿಗೆ ಮತ್ತು ಅದರ ಜೊತೆಗೆ ನ್ಯಾಯಮೂರ್ತಿ ಶ್ರೀ ಎ.ಜಿ. ಸದಾಶಿವ ಆಯೋಗದ ವರದಿ ಆಧಾರದ ಮೇಲೆ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದಿಂದ ಶಿಫಾರಸ್ಸು ಮಾಡಿರುವ ಪ್ರಕಾರ 89 ಮಂದಿಗೆ ಪರಿಹಾರ ನೀಡುವುದಕ್ಕೆ 248 ಲಕ್ಷ ರೂಪಾಯಿಗಳನ್ನು ಇನ್ನು ಹೆಚ್ಚುವರಿಯಾಗಿ ನೀವು ಕೇಳಿದ್ದೀರಿ. ನನಗೆ ಅನಿಸುತ್ತದೆ, ತಾವು ನಾಗಪ್ಪನವರ ಬಗ್ಗೆ ಕೇಳಿರಬೇಕು. ನಾಗಪ್ಪನವರನ್ನು ಮರೆತು ಬಿಟ್ಟಿರೇನೋ ಏನೋ ಗೊತ್ತಿಲ್ಲ. ನಮ್ಮ ಕೊಳ್ಳೆಗಾಲದ ಹನೂರು ಶಾಸಕರಾಗ ನಾಗಪ್ಪನವರನ್ನು ಮರೆತು ಬಿಟ್ಟಿರೇನೋ ಗೊತ್ತಿಲ್ಲ. ಆದ್ದರಿಂದ ಅವರನ್ನು ನೀವು ಮರೆತಿರಾ? ಅವರದ್ದು ಯಾವ ರೀತಿ

ಅಪಹರಣವಾಯಿತು? ಅವರ ಅಂತ್ಯ ಯಾವ ರೀತಿಯಾಯಿತು? ಅದಾದಮೇಲೆ ಅದರ ತನಿಖೆಗೆ ಶ್ರೀ ವೈದ್ಯನಾಥನ್ ನೇಮಕವಾಯಿತು. ಅದರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆ ವರದಿಯನ್ನು ಸಲ್ಲಿಸಿ ಎಷ್ಟು ವರ್ಷವಾಯಿತು? ಅದರ ವರದಿಯನ್ನು ಸಲ್ಲಿಸಿ ಆರರಿಂದ ಏಳು ತಿಂಗಳಾಗಿದೆ. ಈ ವರದಿಯನ್ನು ಸದನದ ಮುಂದೆ ಏಕೆ ಮಂಡಿಸಲಿಲ್ಲ? ಕಾರಣವೇನು? ಆ ವರದಿಯನ್ನು ಸದನದ ಮುಂದೆ ಮಂಡಿಸಿ, ಅವರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಮಾನ್ಯ ಗೃಹಸಚಿವರು ಬಂದಿದ್ದಾರೆ. ಆ ವರದಿ ಏನಾಯಿತು? ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇಲೆ ತಾವು ಅದನ್ನು ಸದನದ ಮುಂದೆ ಮಂಡಿಸಬೇಕಾಗಿತ್ತು ಮತ್ತು ಚರ್ಚೆಗೆ ಅವಕಾಶ ಕೊಡಬೇಕಾಗಿತ್ತು. ನಾವು ನಾಗಪ್ಪನವರ ಅಪಹರಣವನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವುದಲ್ಲ. ಅದರ ಬಗ್ಗೆ ಏನು ವರದಿ ಕೊಟ್ಟಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲ. ಅದನ್ನು ಗೌಪ್ಯವಾಗಿ ಇಟ್ಟಿದ್ದೀರಿ. ಆ ವರದಿಯನ್ನು ಗೌಪ್ಯವಾಗಿ ಇಡುವಂತಹ ಕಾರಣವೇನು? ಆದ್ದರಿಂದ ನಾನು ಈಗಲೂ ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ, ಆ ವರದಿಯನ್ನು ಸಂಪೂರ್ಣವಾಗಿ ಬಹಿರಂಗಪಡಿಸಬೇಕು, ಜೊತೆಗೆ ಅವರ ಕುಟುಂಬಕ್ಕೆ ಎರಡು ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಬೇಕು. ನಾನು ಬಹಳ ಸಲ ಹೇಳಿದ್ದೇನೆ. ನೀವು ಎಲ್ಲರಿಗೂ ಕೊಟ್ಟಿದ್ದೀರಿ, ಕಾರ್ಯಾಚರಣೆ ನಡೆಸಿದಂತಹ ಎಸ್‌ಟಿಎಫ್ ಪೊಲೀಸ್ ಅಧಿಕಾರಿಗಳಿಗೆ, ನಿವೃತ್ತ ಅಧಿಕಾರಿಗಳಿಗೆ ಅನೇಕರಿಗೆ ಕೊಟ್ಟಿದ್ದೀರಿ. ನೀವು ಬಹಳ ಪ್ರಾಮುಖ್ಯವಾಗಿ ಕೊಡಬೇಕಾಗಿರುವುದು ಒಂದು ನಾಗಪ್ಪನವರ ಸಂಸಾರಕ್ಕೆ ಕನಿಷ್ಟ ಎರಡು ಕೋಟಿ ರೂಪಾಯಿಯನ್ನು ಕೊಡಬೇಕು. ಮಾನ್ಯ ನಾಗಪ್ಪನವರ ಸಂಸಾರಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಡಬೇಕು. ಅವರು ಈ ಸದನದ ಶಾಸಕರಾಗಿದ್ದವರು, ಮಂತ್ರಿಯಾಗಿದ್ದವರು, ರಾಜ್ಯದಲ್ಲಿ 30 ವರ್ಷಗಳ ಕಾಲ ರಾಜಕಾರಣವನ್ನು ಮಾಡಿದಂಥವರು. ಅವರು ಅಪಹರಣಕ್ಕೊಳಗಾಗಿ ಅಂತಿಮ ಯಾವ ಒಂದು ಕೆಟ್ಟ ರೀತಿಯಲ್ಲಿ ಮರಣವನ್ನು ಹೊಂದಿದ್ದಾರೆ, ಆದುದರಿಂದ ಅವರ ಸಂಸಾರಕ್ಕೆ ಹಣವನ್ನು ಕೊಡಬೇಕಾಗುತ್ತದೆ. ಇದು ಅತ್ಯಂತ ಗಂಭೀರವಾದುದು. ಇನ್ನು ಅಬ್ದುಲ್ ಕರೀಂ ಎಂದು ಇವರು ಮೈಸೂರಿನಲ್ಲಿದ್ದು ಶಕೀಲ್ ಎನ್ನುವವರು ಅವರ ಮಗ ಸಬ್ ಇನ್‌ಸ್ಪೆಕ್ಟರ್ ಆಗಿದ್ದು ಇವರು ಕಾಡುಗಳ್ಳನಿಂದ ಸತ್ತಂಥ ಶಕೀಲ್‌ರವರ ತಂದೆ ಕರೀಂರವರು ಸರ್ವೋಚ್ಚ

ನ್ಯಾಯಾಲಯದವರೆಗೂ ಹೋರಾಟ ಮಾಡಿದ್ದಾರೆ. ಸರ್ಕಾರ–ಕನಿಷ್ಠ ಸೌಜನ್ಯಕ್ಕಾದರೂ ಅವರನ್ನು "ನೀವೇನು ಮಾಡಿದ್ದೀರಿ, ಏನು ನಡೆಸುತ್ತಿದ್ದೀರಿ? ನಿಮ್ಮ ಪರಿಸ್ಥಿತಿ ಏನು? ನಿಮ್ಮ ಹಣಕಾಸಿನ ಪರಿಸ್ಥಿತಿ ಏನು? ಎಂದು ಇದುವರೆಗೂ ಕೇಳಲಿಲ್ಲ". ಮಾನ್ಯ ಎಂ.ಪಿ.ಪ್ರಕಾಶ್‌ರವರೇ, ಸರ್ವೋಚ್ಚ ನ್ಯಾಯಾಲಯ ಕರೀಂರವರಿಗೆ ಹೇಳಿತು, "ಈ ದೇಶ ಉಳಿಸುವಂತಹ ಮಹೋನ್ನತವಾದ ಕೆಲಸವನ್ನು ನೀವು ಮಾಡಿದ್ದೀರಿ" ಎಂದು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೇ ಬಹಿರಂಗವಾಗಿ ಇಡೀ ನ್ಯಾಯಾಲಯದಲ್ಲಿ ಅವರಿಗೆ ಗೌರವವನ್ನು ಸೂಚಿಸುತ್ತಾರೆ. ನನಗನ್ನಿಸುವೇನೆಂದರೆ ಈ ಸರ್ಕಾರ ಅವರನ್ನು ಕೇಳಿ, ಏನು ಮಾಡಬೇಕೆಂಬ ಚಿಂತನೆಯನ್ನು ಸರ್ಕಾರದವರು ಮಾಡಲಿಲ್ಲ. "ಇನ್ನು ವಿಧಾನಸೌಧ, ಶಾಸಕರ ಭವನ, ಉಚ್ಚನ್ಯಾಯಾಲಯ, ಹಾಗೂ ಮತ್ತಿತರ ಕಟ್ಟಡಗಳ ಸೂಕ್ತ ಭದ್ರತೆಗಾಗಿ ಆಯವ್ಯಯದಲ್ಲಿ ಹಣವನ್ನು ಒದಗಿಸಲಾಗಿರಲಿಲ್ಲವಾದ್ದರಿಂದ ಇನ್ನೂರು ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ಒದಗಿಸಿದ್ದೇವೆ." ಅಂದರೆ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇಲ್ಲಿ ನನಗನಿಸುವುದೇನೆಂದರೆ, ಈ ಭದ್ರತೆಯನ್ನು ಮಾಡತಕ್ಕಂಥವರು ಪೋಲೀಸ್ ಇಲಾಖೆಯವರು, ತಮಗೂ ಗೊತ್ತಿದೆ. ಇತ್ತೀಚಿನ ದಿವಸಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಭಯೋತ್ಪಾದನೆ ಜಾಸ್ತಿಯಾಗುತ್ತಿದೆ. ಒಂದು ಕಡೆ ನಕ್ಸಲ್ ಅವರದ್ದೇ ಬೇರೆ, ಅವರ ತತ್ವ, ಸಿದ್ಧಾಂತದ ಬಗ್ಗೆ ಅವರದೇ ಆದಂತಹ ಹೋರಾಟ ಮಾಡಿದ್ದಾರೆ. ಅವರ ಬಗ್ಗೆ ಸರ್ಕಾರ ಇದುವರೆಗೂ ಅವರ ಜೊತೆಗೆ ಮಾತನಾಡುತ್ತೇವೆಂದು ಹೇಳಲಿಲ್ಲ. ಅವರನ್ನು ಮಾತನಾಡುವುದಕ್ಕೆ ಕರೆಯುತ್ತೇವೆಂದು ಹೇಳಲಿಲ್ಲ, ಅವರ ಬೇಡಿಕೆ ಏನು ಎಂದು ಕೇಳಲಿಲ್ಲ. ಆದರೆ ಆ ಪ್ರದೇಶದಲ್ಲಿ ಅನೇಕ ದುರಂತಗಳು ನಡೆದಿದೆ. ಆ ದುರಂತದ ಬಗ್ಗೆ ಕೂಡ ಸರ್ಕಾರ ಮೌನವಾಗಿದೆ. ಈ ದೃಷ್ಟಿಯಲ್ಲಿ ನೋಡಿದರೆ ಒಂದು ಕಡೆ ನಕ್ಸಲರ ಬಗ್ಗೆ ಸರ್ಕಾರದ ನಿಲುವು ಏನು? ಸರ್ಕಾರದ ಚಿಂತನೆ ಏನು? ಇದು ಕರ್ನಾಟಕದಲ್ಲಿ ಒಂದು ಕಡೆ ಭಯೋತ್ಪಾದನೆ ಇನ್ನೊಂದು ಕಡೆ ನಕ್ಸಲರು, ಈ ರೀತಿಯಾದರೆ ಶಾಂತಿಯುತವಾದಂಥ ಕರ್ನಾಟಕ ಅಶಾಂತ ವಾತಾವರಣಕ್ಕೆ ತಿರುಗಿ ಭಯೋತ್ಪಾದನೆ ಬೇರೆ ಕಡೆಗಳಂತೆ ಕರ್ನಾಟಕದಲ್ಲೂ ಅದೇ ಪರಿಸ್ಥಿತಿಗೆ ಹೋಗುತ್ತದೆಂದು ಆದರೆ, ನಾನು ತಮ್ಮಲ್ಲಿ

ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ತಾವು ಉಪ ಮುಖ್ಯಮಂತ್ರಿಗಳಾಗಿದ್ದೀರಿ, ಇಲ್ಲಿ ಮಾನ್ಯ ಗೃಹ ಸಚಿವರು ಇದ್ದಾರೆ. ತಾವೆಲ್ಲರೂ ಚಿಂತನೆ ಮಾಡಿ ಈ ರಾಜ್ಯದಲ್ಲಿ ಯಾವ ರೀತಿಯಾಗಿ ಈ ಒಂದು ಪಿಡುಗನ್ನು ತಪ್ಪಿಸಬೇಕೆಂಬ ಬಗ್ಗೆ ಸಮಗ್ರವಾದ ಚಿಂತನೆಯಾಗಬೇಕೆಂಬ ಬಗ್ಗೆ, ತಮ್ಮಿಂದ ಪ್ರಾಮಾಣಿಕವಾದ ಕೆಲಸವಾಗಿಲ್ಲವೆಂದು ನನಗೆ ನೋವಾಗಿದೆ. ಮಾನ್ಯ ಗೃಹಮಂತ್ರಿಯವರು ಅನೇಕ ಸಾರಿ ಹೇಳಿದರು. ನಕ್ಸಲರ ಬಗ್ಗೆ ಅವರ ತತ್ವ ಸಿದ್ಧಾಂತಗಳೇನು? ಸರ್ಕಾರದ್ದು ಏನು? ಹೊರಗಡೆ ಏನು? ಇದರ ಬಗ್ಗೆ ಅವರು ಏನೂ ಸ್ಪಷ್ಟಪಡಿಸಿಲ್ಲ. ಇದು ಹೀಗೆ ಬೆಳೆಯುತ್ತಾ ಹೋಗುತ್ತಿದ್ದರೆ, ಯಾರಾದರೂ ಒಂದು ಕಡೆ ಅವರ ಸಮಸ್ಯೆಗಳು ಏನೆಂದು ಕೇಳಿ, ಏನು ಮಾಡಬೇಕೆಂಬ ಬಗ್ಗೆ ಒಂದು ಚಿಂತನೆಯನ್ನು ಮಾಡುವಂಥಾದ್ದು ಕರ್ತವ್ಯವಾಗಿದೆ, ಅದರ ಬಗ್ಗೆ ಚಿಂತನೆ ಮಾಡಬೇಕು. ಇನ್ನು ಇಡೀ ಪೊಲೀಸ್ ಇಲಾಖೆಯಲ್ಲಿ ಅಸಮಾಧಾನವಿದೆಯೆಂಬ ವಿಚಾರವನ್ನು ಮಾನ್ಯ ಗೃಹಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ತಾವು ಈ ಅಸಮಾಧಾನವನ್ನು ಸರಿಪಡಿಸುವುದಕ್ಕೆ ಕನಿಷ್ಟ ನಿಮ್ಮ ಕಾಲದಲ್ಲಿಯಾದರೂ ಆಗಬೇಕು. ನಾನು ಅನೇಕ ಗೃಹಮಂತ್ರಿಗಳನ್ನು ಇಲ್ಲಿ ನೋಡಿದ್ದೇನೆ. ತಾವು ಈಗ ಆ ಸ್ಥಾನದಲ್ಲಿ ಕುಳಿತಿದ್ದೀರಿ. **ಶ್ರೀ ಎಂ.ವಿ.ರಾಮರಾವ್‌ರವರು ಇದ್ದದ್ದನ್ನು ನೋಡಿದ್ದೇನೆ, ಶ್ರೀ ಹೆಚ್.ಎಂ.ಚನ್ನಬಸಪ್ಪನವರನ್ನು, ಶ್ರೀ ಸಿದ್ಧವೀರಪ್ಪನವರನ್ನು, ಶ್ರೀ ಬಸವಲಿಂಗಪ್ಪನವರನ್ನು,** ಆ ಸ್ಥಾನದಲ್ಲಿ ನೋಡಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಗೃಹಮಂತ್ರಿಯವರಿಗೆ ಅಸಮಾಧಾನವಿರಬೇಕು. ಅವರಿಗೆ ಇವತ್ತು ಒಂದೇ ಒಂದು ಹೊಸ ಪೊಲೀಸ್ ಸ್ಟೇಷನ್ ಅನ್ನು ಮಂಜೂರು ಮಾಡುವುದಕ್ಕೆ ಅಧಿಕಾರವಿಲ್ಲ, ಹಣವಿಲ್ಲ. ನೀವು ಇಲಾಖೆಯ ಅಸಮಾಧಾನವನ್ನು ಪರಿಹರಿಸಿಯೆಂದು ಅವರಿಗೆ ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ :- ನಿಜ, ಅವರ ಪರಿಸ್ಥಿತಿ ನನಗೆ ಗೊತ್ತಿದೆ. ಆದರೂ ಗೃಹಮಂತ್ರಿಗಳಾಗಿದ್ದಾರೆ, ಅವರ ಪರಿಸ್ಥಿತಿ ನನಗೆ ಗೊತ್ತು. ಆದರೂ ಅವರು ಗೃಹಮಂತ್ರಿಗಳಾಗಿದ್ದಾರೆ. ಅವರು ಆ ಹೊಣೆಯನ್ನು ಹೊರಬೇಕಲ್ಲಾ....

ಶ್ರೀ ಜೆ.ಸಿ. ಮಾಧುಸ್ವಾಮಿ :– ಆದರೂ, ಎನ್ನುವ ಪದಕ್ಕೆ ಬಹಳ ಮಹತ್ವವಿದೆ, ಆದರೂ ಎನ್ನುವ ಪದವನ್ನು ಯಾರೂ ಇದುವರೆಗೂ ಅರ್ಥೈಸುವುದಕ್ಕೆ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಆದರೂ, ಎನ್ನುವ ಪದವನ್ನು ಈಗ ವಿಶ್ಲೇಷಿಸುವುದಕ್ಕೆ ಇದು ಸಮಯವಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಆದರೂ ಆಗಿದ್ದೀರಿ, ಪಾಪ ಎನ್ನುವ ಮಾತದು. ಆದರೂ ಎನ್ನುವಂಥಾದ್ದು ನನಗೂ ತಿಳಿಯುತ್ತದೆ. ಆದುದರಿಂದ ನೀವು ಆ ಬಗ್ಗೆ ಯೋಚನೆ ಮಾಡಬೇಕಾಗಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನೀವು ನೊಂದುಕೊಳ್ಳಬಾರದು.

ಶ್ರೀ ವಾಟಾಳ್ ನಾಗರಾಜ್ :– ತಾವು ನನ್ನ ಮಾತಿನಿಂದ ನೋವು ಪಡಬಾರದು, ನೊಂದುಕೊಳ್ಳಬಾರದು, ನಾನು ವಸ್ತುಸ್ಥಿತಿಯನ್ನು ಹೇಳುತ್ತಿದ್ದೇನೆ. ನೀವು ಬಹಿರಂಗವಾಗಿ ಒಪ್ಪಿಕೊಳ್ಳದೇ ಇರಬಹುದು, ಅಂತರಂಗವಾಗಿಯಾದರೂ ಒಪ್ಪಿಕೊಳ್ಳುತ್ತೀರಿ. ಅದು ನನಗೆ ಗೊತ್ತಿದೆ. ಆದರೆ ಇದನ್ನು ಚರ್ಚೆ ವಸ್ತುವಾಗಿ ಮಾಡುವುದು ಬೇಕಾಗಿಲ್ಲ. ನಿಮಗೆ ನಾನು ಹೇಳುವುದೇನೆಂದರೆ ಒಂದು ಸವಾಲಾಗಿ ಸ್ವೀಕರಿಸಿ, ಸಮಾಜವಾದಿ ಹಿನ್ನೆಲೆ ಇದೆ, ಅನೇಕ ಚಳುವಳಿಗಳ ಹಿನ್ನೆಲೆ ಇದೆ, ತಾವು ಎಲ್ಲರ ಜೊತೆಯಲ್ಲಿ ಸೇರಿದ್ದೀರಿ. ಇವೆಲ್ಲದರ ಹಿನ್ನೆಲೆಗಳಿಂದ, ನಾನು ನಿಮಗೆ ಏನು ಹೇಳುತ್ತೇನೆಂದರೆ, ತಮಗೆ ಕಳಕಳಿ ಇದೆ, ಅದನ್ನು ನಾನು ಒಪ್ಪುತ್ತೇನೆ. ಆದರೆ ನಿಮಗೆ ಸಿಕ್ಕಿರುವ ಇಲಾಖೆ ಗೃಹ ಇಲಾಖೆ, ಈ ಇಲಾಖೆಯಲ್ಲಿ ಎಲ್ಲೊ ಕಡೆ ತೀವ್ರ ಅಸಮಾಧಾನ ಇದೆ. ತಮಗೆ ಈ ಬಗ್ಗೆ ಹೇಳುತ್ತೇನೆ. ಅನೇಕ ಸಂದರ್ಭದಲ್ಲಿ ಪೊಲೀಸ್‌ನವರಿಗೆ ಯಾವ ಕಾಲದಲ್ಲೂ ಯಾವ ಸರ್ಕಾರವೂ ಪ್ರಾಮಾಣಿಕವಾಗಿ ಅವರಿಗೆ ಸಹಾಯವನ್ನು ಮಾಡಲಿಲ್ಲ. ನಾನು ಒಂದು ವಿಚಾರವನ್ನು ನೇರವಾಗಿ ಕೇಳುತ್ತೇನೆ. ಅವರಿಗೆ ಪ್ರತಿ ದಿವಸ ಬೇರೆ ಸರ್ಕಾರಿ ನೌಕರರಂತೆ ಬೆಳಿಗ್ಗೆ 11.00 ಗಂಟೆಗೆ ಬಂದು ಸಂಜೆ 5.30 ಗಂಟೆಗೆ ಹೋಗುವುದಕ್ಕೆ ಎಲ್ಲಿ ಇದೆ? ಅವರು 24 ಗಂಟೆಗಳ ಕಾಲ ಅವರು ಸರ್ಕಾರಿ ಕೆಲಸದಲ್ಲಿ ಇರಲೇ ಬೇಕು. ಅವರಿಗೆ ನಿದ್ರೆ ಇಲ್ಲ, ವ್ಯವಸ್ಥೆ ಇಲ್ಲ, ಅವರಿಗೆ ಏನಾದರೂ ವಿಶೇಷ ಭತ್ಯೆಯನ್ನು ಕೊಡುವುದಾಗಲಿ,

ವಿಶೇಷ ಸವಲತ್ತುಗಳನ್ನು ಕೊಡುವುದಾಗಲಿ, ಎಲ್ಲಾದರೂ ನೀವು ನೋಡಿದ್ದೀರಾ? ಖಂಡಿತ ಇಲ್ಲ. ಇದರಿಂದ ಏನಾಗುತ್ತದೆಂದರೆ, ಅಸಮಾಧಾನವೆನ್ನುವ ಹೊಗೆ ಜಾಸ್ತಿಯಾದಾಗ ಇದು ಎಲ್ಲಿಗೆ ತಲುಪಬಹುದು? ಮನುಷ್ಯತ್ವದಿಂದ ನಾವು ಎಲ್ಲೋ ಒಂದು ಕಡೆ ಸಮಾಧಾನ ಪಟ್ಟರೆ ಸಂತೋಷ, ಸಮಾಧಾನ ಆಗಲಿಲ್ಲವೆಂದರೆ, ಅವರು ಬೀದಿಗೆ ಬರುವಂಥ ಕಾಲ ಸನ್ನಿಹಿತವಾಗುತ್ತದೆ. ಅದು ಆಗಬಾರದು, ಅದು ಒಳ್ಳೆಯ ಸೂಚನೆಯಲ್ಲ. ನಾನು ಎರಡು, ಮೂರು ವಿಚಾರಗಳನ್ನು ತಮಗೆ ತಿಳಿಸುತ್ತೇನೆ. ಪೊಲೀಸರ ಗಂಡಾಂತರ ಭತ್ಯೆ ಎಂದು ಇದೆ, ಅಂದರೆ risk allowance ಇದೆ. ಅದನ್ನು ಇದುವರೆಗೂ ಕೊಟ್ಟಿಲ್ಲ. ಇದರ ಬಗ್ಗೆ ಏನು ಮಾಡಿದ್ದೀರಿ? ಕೊಟ್ಟಿದೀರಾ? ಕೊಟ್ಟಿಲ್ಲ. ಕನಿಷ್ಟ ಇವರಿಗೆ ಸಮವಸ್ತ್ರವನ್ನು ಕೊಟ್ಟು ಎಷ್ಟು ದಿವಸಗಳು ಆಯಿತು? ಅದು ವರ್ಷಗಟ್ಟಲೆ ಆಗಿ ಹೋಗಿದೆ. ವೈದ್ಯಕೀಯ ಭತ್ಯೆಯನ್ನು ಕೊಟ್ಟಿದ್ದೀರಾ? ಕೊಟ್ಟಿಲ್ಲ. ಇನ್ನು ಅಂಗರಕ್ಷಕರಿಗೆ ಸಫಾರಿ ಬಟ್ಟೆಯನ್ನು ಕೊಟ್ಟಿದ್ದೀರಾ? ಕೊಟ್ಟಿಲ್ಲ. ನಾನು ಇದನ್ನು ಪಟ್ಟಿ ಮಾಡಿ ಹೇಳುತ್ತಿದ್ದೇನೆ. ಕನಿಷ್ಟ ಸೊಂಟಕ್ಕೆ ಕಟ್ಟುವಂಥ ಬೆಲ್ಟ್ ಕೊಟ್ಟು ಎಷ್ಟು ವರ್ಷಗಳಾಗಿರಬಹುದು? ಮೂರು ವರ್ಷ, ನಾಲ್ಕು ವರ್ಷಗಳು ಕನಿಷ್ಟವೆಂದು ಹೇಳಬಹುದು, ಇನ್ನು ಬೂಟ್ 3,4 ವರ್ಷಗಳಾಗಿರಬಹುದು.

ಶ್ರೀ ಅಂಜನಮೂರ್ತಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಪೊಲೀಸ್‌ನವರ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಕನ್ನಡ ಚಳುವಳಿ ಮಾಡಿದಾಗ ಇನ್ನಿತರ ಸನ್ನಿವೇಶಗಳಲ್ಲಿ ಪೊಲೀಸ್‌ನವರಿಂದಲೇ ಅವರಿಗೆ ಹಿಂಸೆಯಾಗಿರುವುದು. ಇವತ್ತು ಅವರ ಬಗ್ಗೆಯೇ ಒತ್ತು ಕೊಟ್ಟು ಹೇಳುತ್ತಿದ್ದಾರೆ. ಅವರ ಬೂಟ್‌ಗಳ ಬಗ್ಗೆ, ಬಟ್ಟೆಯ ಬಗ್ಗೆ ಕೇಳುತ್ತಿದ್ದಾರೆ. ಏನೆಂಬುದು ಗೊತ್ತಾಗುತ್ತಿಲ್ಲ. ತಾವು ಚಳುವಳಿ ಮಾಡಿದಾಗ ಪೊಲೀಸರ ಅತಿಥಿಯಾಗಿದ್ದೀರಿ. ಅವರ ಬಗ್ಗೆ ಹೆಚ್ಚಿನ ಕಳಕಳಿಯನ್ನು ತೋರಿಸುತ್ತಿದ್ದೀರಿ.

(ಈ ಹಂತದಲ್ಲಿ ಅಧ್ಯಕ್ಷ ಪೀಠವನ್ನು ಉಪಾಧ್ಯಕ್ಷರು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ :- ಅವರು ನಮಗೆ ತೊಂದರೆ ಕೊಡುವ ವಿಚಾರ ಬೇರೆ, ಅವರನ್ನು ಮನುಷ್ಯರಾಗಿ ನೋಡಿಕೊಳ್ಳಬೇಕಲ್ಲಾ, ಅವರು ಕಾನೂನನ್ನು

ಪಾಲನೆ ಮಾಡಲೇಬೇಕು. ಇನ್ನು ಸಂಚಾರಿ ಪೊಲೀಸ್‌ನವರ ಬಗ್ಗೆಯೂ ಒಂದು ಸ್ಪಷ್ಟ ನಿಲುವಿಲ್ಲ. ನಾನು ಅನೇಕ ಸಾರಿ ಹೇಳಿದ್ದೇನೆ. ಅವರಿಗೆ ಸುಮಾರು 40 ವರ್ಷಗಳಿಗೆ ಕಿವಿ ಕಿವುಡಾಗುತ್ತದೆ. ಕಂಟ್ರೋಲ್ ರೂಮ್‌ನವರಿಗೂ ಕಿವಿ ಕೇಳಿ ಕೇಳಿ, ಎಷ್ಟೋ ಜನರಿಗೆ ಕಿವಿ ಕಿವುಡಾಗಿದೆ. ಇನ್ನು ಗುಪ್ತದಳದವರನ್ನು ಕೇಳುವವರೇ ಗತಿ ಇಲ್ಲ. ಅವರನ್ನು ನಾವೆಲ್ಲಾ ಸುಮ್ಮನೆ ಉಪಯೋಗಿಸಿಕೊಳ್ಳುತ್ತೇವೆ. ಅವರನ್ನು ಯಾರು ಕೇಳುವವರೇ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನೀವು ಹೇಗೆ ಗುಪ್ತದಳವರನ್ನು ಉಪಯೋಗಿಸಿಕೊಳ್ಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್ :- ನಾವು ಎಂದರೆ ಸರ್ಕಾರ. ನಾವೆಲ್ಲಾ ಟ್ರಸ್ಟಿಗಳೇ, ಆದುದರಿಂದ ತಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಮತ್ತೊಂದು ಧರ್ಮವೀರ ಸಮಿತಿ ವರದಿ. ಅದು ಎಲ್ಲೋ ಒಂದು ಕಡೆ ಮೂಲೆ ಗುಂಪಾಗಿ ಬಿದ್ದಿದೆ. ಆ ವರದಿ ಬಗ್ಗೆ ನಿಮ್ಮ ಕಾಲದಲ್ಲಾದರೂ ಪ್ರಾಮಾಣಿಕವಾಗಿ ಆ ವರದಿ ಏನಾಯಿತು? ಯಾವ ರೀತಿ ಆಯಿತು? ಎಲ್ಲಿಗೆ ಬಂತು? ಎಂದು ಹೇಳಬೇಕಲ್ಲವೇ? ಇದು ಬಹಳ ಪ್ರಾಮುಖ್ಯವಾಗಿದೆ. ಇದರ ಬಗ್ಗೆ ತಾವು ಸ್ಪಷ್ಟವಾದಂಥ ನಿಲುವನ್ನು ತೆಗೆದುಕೊಳ್ಳಬೇಕು. ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟಂತೆ 'ಇಂದಿರಾನಗರ ಸಂಗೀತ ಸಭಾಭವನ ಪುರಂದರಭವನ ನಿರ್ಮಾಣಕ್ಕೆ ಕರ್ನಾಟಕ ಅಕಾಡೆಮಿ ವತಿಯಿಂದ ಆಗಿರುವ ರಂಗಮಲ್ಲಿಗೆ ರಾಮೋತ್ಸವಕ್ಕೆ' ಹೀಗೆ ಅನೇಕ ವಿಚಾರಗಳಿಗೆ ನೀವು ಸದನದ ಅಂಗೀಕಾರವನ್ನು ಕೇಳಿದ್ದೀರಿ. ಇಲ್ಲಿ ಶ್ರೀ ಮಹದೇವ ಪ್ರಸಾದ್‌ರವರು ಮಂತ್ರಿಯಾದ ಮೇಲೆ ಏನಾಯಿತೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಮಂತ್ರಿಯಾಗಿ ಇತ್ತೀಚೆಗೆ ಅಂದರೆ ಬಹುಶಃ 3 ತಿಂಗಳು ಆಗಿರಬಹುದು. ನಾನು ಅದನ್ನು ಕೇಳುವುದಕ್ಕೆ ಹೋಗುವುದಿಲ್ಲ. ಸುವರ್ಣ ಕರ್ನಾಟಕದ ಬಗ್ಗೆ ಮಾನ್ಯ ಪ್ರಕಾಶ್‌ರವರಿಗೆ ಮತ್ತು ಅವರ ಹಿಂದಿನವರು, ಅವರ ತಂದೆಯವರಿಗೆ ಗೊತ್ತಿದೆ ಹಾಗೂ ಯಡಿಯೂರಪ್ಪನವರಿಗೂ ಗೊತ್ತಿದೆ. 50 ವರ್ಷಗಳ ಕಾಲ ಈ ಕರ್ನಾಟಕ ಕಂಡಿದ್ದು ಸಂತೋಷ. ಸುವರ್ಣ ಕರ್ನಾಟಕವೆಂದರೇನು? ಸುವರ್ಣ ಕರ್ನಾಟಕವೆಂದರೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ

ಪಟಾಕಿ ಹೊಡೆಯುವುದೇ? ಸುರುಸುರು ಬತ್ತಿ ಹಚ್ಚುವುದೇ? ದೀಪಗಳನ್ನು ಬೆಳಗಿ ಬಿಡುವುದೇ? ಇದು ಸುವರ್ಣ ಕರ್ನಾಟಕವೇ? ಸುವರ್ಣ ಕರ್ನಾಟಕ ಎನ್ನುವ ಕಲ್ಪನೆ ಏನು? ಸುವರ್ಣ ಕರ್ನಾಟಕದಲ್ಲಿ 50 ವರ್ಷ ಎಂದರೆ 1956 ರಿಂದ ಇಲ್ಲಿಯವರೆಗೆ 50 ವರ್ಷಗಳು ಏನು ಮಾಡಿದ್ದೇವೆ? ಕರ್ನಾಟಕ ಏಕೀಕರಣ ಯಾವ ಉದ್ದೇಶಕ್ಕಾಯಿತೋ ಆ ಉದ್ದೇಶ ಈಡೇರಲಿಲ್ಲ. ಭಾಷಾವಾರು ಪ್ರಾಂತ್ಯ ಯಾವುದಕ್ಕಾಯಿತು? ಆ ಉದ್ದೇಶ ಈಡೇರಲಿಲ್ಲ. ಉತ್ತರ ಕರ್ನಾಟಕ, ಹೈದರಾಬಾದ್-ಕರ್ನಾಟಕ ಮತ್ತು ಕೊಡಗು ಈ ರೀತಿ ಇನ್ನೂ ನಮ್ಮಲ್ಲಿ ನಾವು ಭಾವನಾತ್ಮಕವಾಗಿ ಒಂದಾಗಿಲ್ಲ. ಈ ಸುವರ್ಣ ಕರ್ನಾಟಕದ ಮಾಡಬೇಕಾಗಿದ್ದ ಕರ್ತವ್ಯವೇನೆಂದರೆ ಭಾವೈಕ್ಯತೆಯನ್ನು ತರಬೇಕಾಗಿತ್ತು. ಉತ್ತರ ಕರ್ನಾಟಕ ಜನತೆ, ಹೈದರಾಬಾದ್ ಕರ್ನಾಟಕದ ಜನತೆ, ಕೊಡಗಿನ ಜನತೆ ಕಣ್ಣೀರಿಡುತ್ತಿದ್ದಾರೆ. ಈ ರೀತಿ ಗಡಿನಾಡನೆಲ್ಲವನ್ನೂ ಸೇರಿಸಿ 50ನೇ ವರ್ಷದ ಸುವರ್ಣ ಕರ್ನಾಟಕ ಎನ್ನುವುದಕ್ಕೆ ಅನ್ವರ್ಥನಾಮವಾಗಿ ಆಚರಣೆಯಾಗಲಿಲ್ಲ. ಕರ್ನಾಟಕ ಏಕೀಕರಣ ಎಲ್ಲಿ ಆಯಿತೆಂದು ಸರ್ಕಾರಕ್ಕೆ ಗೊತ್ತೇ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ. ಗೊತ್ತಿದ್ದರೆ, ನೀವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಮಾರಂಭ ಮಾಡುತ್ತಿರಲಿಲ್ಲ. 1956 ರಲ್ಲಿ ರಾಜೇಂದ್ರ ಪ್ರಸಾದ್‌ರವರಿಂದ Central College ನ Cricket ಮೈದಾನದಲ್ಲಿ ಕರ್ನಾಟಕ ಏಕೀಕರಣದ ಉದ್ಘಾಟನೆಯಾಯಿತು. ದಿವಂಗತ ಜಯಚಾಮರಾಜೇಂದ್ರ ಒಡೆಯರ್, ದಿವಂಗತ ಕೆಂಗಲ್ ಹನುಮಂತಯ್ಯ ಮತ್ತು ದಿವಂಗತ ನಿಜಲಿಂಗಪ್ಪನವರು, ದಿವಂಗತ ಪಿ.ಕಾಳಿಂಗರಾಯರು – 'ಉದಯವಾಯಿತು ಚೆಲುವ ಕನ್ನಡ ನಾಡು' ಎಂದು ಹಾಡಿರುವುದು ತಮಗೆಲ್ಲ ಗೊತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಆ ಸಮಯದಲ್ಲಿ ಅಲ್ಲಿ ನಾವೆಲ್ಲ volunteers ಆಗಿ ಕೆಲಸ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :– ಖಂಡಿತ. ನಾನು ಅದನ್ನೇ ಹೇಳಿದೆ. ನೀವು ಮತ್ತು ನಿಮ್ಮ ತಂದೆಯವರನ್ನು ನಾನೇಕೆ ನೆನೆದೆ ಎಂದರೆ, ಕರ್ನಾಟಕ ಏಕೀಕರಣಕ್ಕೆ ನಿಮ್ಮ ಕೊಡುಗೆ ಮತ್ತು ಬಳ್ಳಾರಿಯವರ ಕೊಡುಗೆ ಇದೆ ಎಂದು ನಾನು ಅತ್ಯಂತ ಗಂಭೀರವಾಗಿ ಈ ಮಾತು ಹೇಳುತ್ತಿದ್ದೇನೆ. ಸುವರ್ಣ ಕರ್ನಾಟಕ

ಎಂದರೆ ನಾಲ್ಕೂ ಕಡೆ ಬಾಜಾ ಭಜಂತ್ರಿ ಬಂತು, ಅಂದರೆ ಅಲ್ಲಿ ಜಾನಪದದವರು ತಾಳ ಮೇಳದ ಜೊತೆ ಬೆಂಗಳೂರಿಗೆ ಬಂದರು. ನಾನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬೆಳಿಗ್ಗೆ ಹೊತ್ತು ನೋಡಿದೆ. ಇಡೀ ಸುವರ್ಣ ಕರ್ನಾಟಕ ಕಾರ್ಯಕ್ರಮವನ್ನು ಒಬ್ಬ IAS ಅಧಿಕಾರಿ ಕೈಗೆ ಕೊಟ್ಟಿದ್ದೀರಿ. ಸುವರ್ಣ ಕರ್ನಾಟಕಕ್ಕೆ ರಾಜ್ಯ ಮಟ್ಟದ ಸಮಿತಿ, ಜಿಲ್ಲಾ ಮಟ್ಟದ ಸಮಿತಿ, ತಾಲ್ಲೂಕು ಮಟ್ಟದ ಸಮಿತಿ, ಕರ್ನಾಟಕ ಏಕೀಕರಣಕ್ಕೆ ದುಡಿದವರು, ಹೋರಾಟ ಮಾಡಿದವರು, ಗಡಿನಾಡು, ಹೊರನಾಡು, ಸೊಲ್ಲಾಪುರ, ಅಕ್ಕಲಕೋಟೆ, ತಾಳವಾಡಿ, ಹೊಸೂರು, ಕಾಸರಗೋಡು, ಎಲ್ಲಾ ಕಡೆಯಿಂದ ಒಂದು ಹೊಸ ಹುರುಪನ್ನು ತಂದು, ಆವತ್ತು ಒಂದು ವಿಶೇಷವಾದಂಥ package ಯೋಜನೆ ಉತ್ತರ ಕರ್ನಾಟಕಕ್ಕೆ ಈ ರೀತಿ ಮಾಡಿದ್ದೇವೆ, ರಾಯಚೂರಿಗೆ ಈ ತರಹ, ಗುಲ್ಬರ್ಗಾಕ್ಕೆ ಈ ತರಹ ಬಿಜಾಪುರಕ್ಕೆ ಈ ತರಹ, ಬೆಳಗಾಂಗೆ ಈ ತರಹ, ಬೀದರ್‌ಗೆ ಈ ತರಹ, ಎಲ್ಲ ಮಾಡಿದ್ದೇವೆ, ನೀವೆಲ್ಲ ಬರಬೇಕು, ಎಲ್ಲ ಶಾಸಕರು ಒಟ್ಟಾಗಿ ಬರಬೇಕು, ಮಾಜಿ ಶಾಸಕರುಗಳು, ಹಾಲಿ ಶಾಸಕರುಗಳು, ಎಲ್ಲರೂ ಸೇರಿದಂತೆ 50 ವರ್ಷಗಳ ಕಾಲ ಬದುಕಿರತಕ್ಕಂಥ ಎಲ್ಲ ಜನರನ್ನು ನೀವು ಕರೆಯಬೇಕಾಗಿತ್ತು. ಅದು ಸುವರ್ಣ ಕರ್ನಾಟಕವಾಗುತ್ತದೆ. ಅದು ಬಿಟ್ಟು ಸುವರ್ಣ ಕರ್ನಾಟಕವೆಂದರೆ ದೀಪಾವಳಿ ಹಬ್ಬವಲ್ಲ. ಪಟಾಕಿ ಹೊಡೆಯುವ ಹಬ್ಬವಲ್ಲ. ಸುವರ್ಣ ಕರ್ನಾಟಕಕ್ಕೆ ಒಂದು ಇತಿಹಾಸವಿದೆ. ನೀವು ನಿಜಲಿಂಗಪ್ಪನವರನ್ನು ಎಲ್ಲಿ ನೆನಪಿಸಿಕೊಂಡಿರಿ?

ಶ್ರೀ ಅಮರೇಗೌಡ ಬಯ್ಯಾಪುರ :- ಮಾನ್ಯ ಅಧ್ಯಕ್ಷರೇ, ಯಾವ ವಿಷಯದ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಿದ್ದಾರೆಂದು ನಮಗೆ ಗೊತ್ತಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ನಾನು ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿಯೇ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನನಗನ್ನಿಸುವೇನೆಂದರೆ, ಒಂದು ಸುವರ್ಣ ಕರ್ನಾಟಕ ಸಮಾರಂಭದಲ್ಲಿ ನಿಜಲಿಂಗಪ್ಪನವರ ಚಿತ್ರ ಒಂದೂ ಸಹ ಇಲ್ಲ. ಕೆಂಗಲ್ ಹನುಮಂತಯ್ಯನವರ ಚಿತ್ರ ಒಂದೂ ಸಹ ಇಲ್ಲ. ದೇವರಾಜ ಅರಸ್‌ರವರ ಚಿತ್ರ ಒಂದೂ ಸಹ ಇಲ್ಲ. ವಾಲಿ ಚೆನ್ನಪ್ಪನವರದು ಸಹ ಒಂದೂ ಚಿತ್ರ ಇಲ್ಲ. ಹಳ್ಳಿಕೇರಿಯವರ ಚಿತ್ರ

ಒಂದೂ ಸಹ ಇಲ್ಲ. ಹಾಗಾದರೆ, ಸುವರ್ಣ ಕರ್ನಾಟಕವೆಂದರೇನು? ನಿಮ್ಮ ಉದ್ದೇಶವೇನು? ಸುವರ್ಣ ಕರ್ನಾಟಕ ಕಾರ್ಯಕ್ರಮಕ್ಕೆಂದು ಏಕೆ ಹಣ ಖರ್ಚು ಮಾಡಿದಿರಿ, ಇಷ್ಟು ಹಣ ಖರ್ಚು ಮಾಡುವುದರ ಉದ್ದೇಶವೇನು? ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇದನ್ನೆಲ್ಲ ನೋಡಿದಾಗ ನಮ್ಮ ರಾಜ್ಯದಲ್ಲಿ ನಡೆದಂಥ ಸುವರ್ಣ ಕರ್ನಾಟಕ ಸಂಪೂರ್ಣವಾಗಿ ವಿಫಲವಾಗಿದೆ. ಆದ್ದರಿಂದ, ಕನಿಷ್ಟ ಈ ವರ್ಷದ ಕೊನೆಯ ದಿನಗಳಲ್ಲಾದರೂ ಸುವರ್ಣ ಕರ್ನಾಟಕದ ಬಗ್ಗೆ ಒಂದು ಚಿಂತನೆ, ಒಂದು ಕಲ್ಪನೆ ಇಟ್ಟುಕೊಂಡು ಕೆಲಸ ಮಾಡಬೇಕು. ಪ್ರಪ್ರಥಮ ಮೈಸೂರಿನ ಮುಖ್ಯಮಂತ್ರಿ ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿಯವರನ್ನು ನಾವು ನೆನೆಯುತ್ತಿಲ್ಲ. ಯಾವ ರೀತಿ ನಡೆಯಿತು, ಹೇಗಾಯಿತು ಎನ್ನುವುದು ಬಳ್ಳಾರಿ ಹನುಮಂತಯ್ಯನವರ ಬಗ್ಗೆ ನಿಮಗೆ ಗೊತ್ತಿದೆ. ಇವರನ್ನೆಲ್ಲ ನಾವು ನೆನೆದುಕೊಳ್ಳಬೇಕಾಗಿತ್ತು. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ, ಇದು ಅತ್ಯಂತ ಗಂಭೀರವಾದ ಪರಿಸ್ಥಿತಿ. ಇನ್ನು ವಿಶ್ವಕನ್ನಡ ಸಮ್ಮೇಳನವನ್ನು ತಾವು ಈಗಾಗಲೇ ಮುಂದಕ್ಕೆ ಹಾಕಿದ್ದೀರಿ. ವಿಶ್ವಕನ್ನಡ ಸಮ್ಮೇಳನದ ಮಂಟಪಕ್ಕೆ ಶ್ರೀಮಾನ್ ನಿಜಲಿಂಗಪ್ಪನವರ ಹೆಸರನ್ನಿಡಬೇಕು. ನಾನು ಅತ್ಯಂತ ಗಂಭೀರವಾಗಿ ಈ ಮಾತನ್ನು ಹೇಳುತ್ತೇನೆ. ದೇವರಾಜು ಅರಸು ಕರ್ನಾಟಕ ನಾಮಕರಣಕ್ಕೆ ದುಡಿದಂಥವರು ಮತ್ತು ಹನುಮಂತಯ್ಯನವರು ಕರ್ನಾಟಕದಲ್ಲಿ ಅಧಿಕಾರ ಕಳೆದುಕೊಂಡಂಥವರು. ಈ ದೃಷ್ಟಿಯಿಂದ ಇವೆಲ್ಲವನ್ನು ಯೋಚನೆ ಮಾಡಿ ನೀವು ಇದನ್ನು ಮಾಡಲಿಲ್ಲವೆಂದರೆ ಇದಕ್ಕೆ ನಿಜಕ್ಕೂ ಅರ್ಥ ಬರುವುದಿಲ್ಲವೆನ್ನುವ ಮಾತನ್ನು ನಾನು ಕಳಕಳಿಯಿಂದ ಹೇಳುತ್ತಿದ್ದೇನೆ. ನವದೆಹಲಿಯಲ್ಲಿ ಕರ್ನಾಟಕ ಭವನ ಇದೆ. ಯಾರ್ಯಾರು ಮಂತ್ರಿಗಳು ಬಂದರೆ, ಮುಖ್ಯಮಂತ್ರಿಗಳು ಬಂದರೆ ಅಲ್ಲಿ ಅವರ ಹಿಂದೆಮುಂದೆ ಓಡಾಡುತ್ತರೆಯೇ ಹೊರತು, ಯಾರೇ ಶಾಸಕರುಗಳು ಹೋದರೆ ನೀವು ಯಾವ ಊರಿನ ಸಂತೆ ಎಂದು ಕರ್ನಾಟಕ ಭವನದಲ್ಲಿ ಕೇಳುವುದಿಲ್ಲ. ಕರ್ನಾಟಕ ಭವನ ಅದು ಕನ್ನಡ ಭವನ ಅಲ್ಲ. ಕರ್ನಾಟಕ ಭವನ ಬೇರೆ ಭಾಷೆಯ ಭವನ. ಅಲ್ಲಿ ಕರ್ನಾಟಕ ಭವನವನ್ನು ತಾವು ನಿರ್ಮಾಣ ಮಾಡಿರುವುದು ಕೇವಲ ಮಂತ್ರಿಗಳು, ಮುಖ್ಯಮಂತ್ರಿಗಳು ಇವರಿಗೆ ಮಾತ್ರ ಅಲ್ಲ. ನಮ್ಮ ಶಾಸಕರು ಯಾವುದೇ ಪಕ್ಷದವರು ಇರಲಿ, ಈ ಶಾಸಕರುಗಳು ಹೋದಾಗಲೂ ಅಲ್ಲಿ ನೋಡಿಕೊಳ್ಳುವ ಬಗ್ಗೆ ಚಿಂತನೆ ಇಲ್ಲವೇ

ಇಲ್ಲ. ಆದ್ದರಿಂದ, ನೀವು ಸುಮ್ಮನೆ ಅಲ್ಲಿ ಹಣವನ್ನು ವಿಪರೀತವಾಗಿ ಖರ್ಚು ಮಾಡುತ್ತಿದ್ದೀರಿ. ಅದರ ಬಗ್ಗೆ ನೀವು ತೀವ್ರವಾಗಿ ಚಿಂತನೆ ಮಾಡಬೇಕು. ಇನ್ನು ಸರ್ಕಾರದ ಅಭಿವೃದ್ಧಿ ಕಾಮಗಾರಿಗಳ ಜಾಹೀರಾತು, ಪ್ರಚಾರ ಆಂದೋಲನಕ್ಕಾಗಿ 750 ಲಕ್ಷ ರೂ.ಗಳು ಬೇಕೆಂದು ಸರ್ಕಾರದ ಕಡೆಯಿಂದ ತಾವು ಈಗ ಹೊಸದಾಗಿ ಕೇಳಿದ್ದೀರಿ. ನೀವು ಯಾವ ಪತ್ರಿಕೆಗಳಲ್ಲಿ ಕೊಡುತ್ತಿದ್ದೀರಿ? ಕರ್ನಾಟಕದ ಕನ್ನಡ ಪತ್ರಿಕೆಗಳಿಗೆಷ್ಟು ? English ಪತ್ರಿಕೆಗಳಿಗೆಷ್ಟು ? ದೆಹಲಿ ಪತ್ರಿಕೆಗಳಿಗೆ ಎಷ್ಟು ಕೊಡುತ್ತಿದ್ದೀರಿ? ದೆಹಲಿಯಲ್ಲಿ ಹಗಲು ರಾತ್ರಿ ಕಷ್ಟಪಡತಕ್ಕಂಥ ಒಂದು ಪತ್ರಿಕೆ ತಮಗೆ ದೆಹಲಿ ವಾರ್ತೆ ಎಂದು ಮೊದಲು ನಾವು ಬೆಳಿಗ್ಗೆ ಎದ್ದು ಹಲ್ಲು ಉಜ್ಜಿ ಮುಖ ತೊಳೆದ ತಕ್ಷಣ ಮೊದಲು ನೋಡತಕ್ಕಂಥ ಪತ್ರಿಕೆ ಇಡೀ ರಾಜ್ಯದ ಕನ್ನಡ ಪತ್ರಿಕೆ ಅಲ್ಲಿ ಇದೆ. ದೆಹಲಿ ಪತ್ರಿಕೆ ಬಗ್ಗೆ ಕನಿಷ್ಟ ಸೌಜನ್ಯ ನಮಗಿಲ್ಲ. ಸಣ್ಣ ಪತ್ರಿಕೆಗಳ ಬಗ್ಗೆ ನೀವೇನು ಗಮನ ಹರಿಸಿದ್ದೀರಿ? ಯುಗಾದಿ ಹಬ್ಬಕ್ಕೆ ಒಂದು, ವರ್ಷಕ್ಕೊಂದು, ಈ ರಾಜ್ಯದಲ್ಲಿ ಜಿಲ್ಲಾ ಪತ್ರಿಕೆಗಳು ಮತ್ತು ರಾಜ್ಯ ಪತ್ರಿಕೆಗಳಷ್ಟೇ ಸಮಾನಾಗಿ ಸಣ್ಣ ಪತ್ರಿಕೆಗಳು ಇವೆ. ಈ ಸಣ್ಣ ಪತ್ರಿಕೆಗಳ ಬಗ್ಗೆ ಕನಿಷ್ಟ ನೀವು ಪ್ರತಿ ತಿಂಗಳು 2 ಬಾರಿ 15 ದಿವಸಗಳಿಗೊಂದು ಸಾರಿ ಜಾಹೀರಾತನ್ನು ನೀಡತಕ್ಕಂಥ ವ್ಯವಸ್ಥೆ ಸಮಗ್ರವಾಗಿ ಆಗಬೇಕಾಗಿದೆ. ಇಲ್ಲದಿದ್ದರೆ ಅದು ಸರಿಯಾಗಿ ಕಾಣತಕ್ಕಂಥದ್ದಲ್ಲ. ನಮಗೆ ಇಚ್ಚೆ ಬಂದ ಹಾಗೆ ಯಾವ್ಯಾವುದೋ ದೇಶದ ಪತ್ರಿಕೆಗಳಿಗೆ ಕೊಡುವ ಬದಲು ನಮ್ಮ ರಾಜ್ಯದ ಕನ್ನಡ ಪತ್ರಿಕೆಗಳು, ನಮ್ಮ ರಾಜ್ಯದ ಪತ್ರಿಕೆಗಳ ಬೆಳವಣಿಗೆಗೆ ಸಮಗ್ರವಾಗಿ ಚಿಂತನೆ ಆಗಬೇಕಾದದ್ದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ತಮಗೆ 2–3 ಮಾತುಗಳನ್ನು ತಿಳಿಸಿ ಈ ಸಮಗ್ರ ಸುವರ್ಣ ಕರ್ನಾಟಕದ್ದು ಅನೇಕ ಕಡತಗಳಿವೆ. ಅದರ ಬಗ್ಗೆ ಆಯವ್ಯಯ ಮಂಡಿಸುವಾಗ ಅಂಕಿಅಂಶಗಳನ್ನು ಕೊಡುತ್ತೇನೆ. ಏನೇನು ಆಗಿದೆ ಎಂಬುದನ್ನು ತಮಗೆ ತಿಳಿಸುತ್ತೇನೆ. ತಾವು ಮುಂದೆ ಯಾವ ರೀತಿ ಮಾಡುತ್ತೀರಿ, ಅದನ್ನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :– ಈಗ ಪೂರಕ ಅಂದಾಜುಗಳನ್ನು ಮಂಡಿಸಿದ್ದಾರೆ. ನಾನು ನಿಜ ಹೇಳಬೇಕಾದರೆ ಇದನ್ನು ಪೂರ್ತಿಯಾಗಿ ಓದಿಲ್ಲ. ಓದಲಿಕ್ಕೆ ಅವಕಾಶ ಕೊಟ್ಟಿಲ್ಲ. ಈಗ ಮಾತ್ರವೇ ಒದಗಿಸಿದ್ದಾರೆ. ಮತ್ತೆ, ನಾನು

ಬಹಳ ಕಳಕಳಿಯಿಂದ ಉಪಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ, ಬೇಸರ ಮಾಡಿಕೊಳ್ಳಬೇಡಿ, ಅರ್ಥ ಶಾಸ್ತ್ರದ ಕನಿಷ್ಟ ನೀತಿ-ನಿಯಮಗಳು, ಆಯವ್ಯಯದ ನೀತಿ-ನಿಯಮಗಳೇನಾದರೂ ಈ ಸರ್ಕಾರ ಪಾಲನೆ ಮಾಡಬೇಕೆಂದು ಇದ್ದಿದ್ದರೆ, ಈ ಸರ್ಕಾರಕ್ಕೆ ಗೊತ್ತಿದ್ದರೆ, ಈ ಸಂದರ್ಭದಲ್ಲಿ ಈ supplementary budget ಅನ್ನು ಮಂಡಿಸಲಿಕ್ಕೆ ಹೋಗುತ್ತಿರಲಿಲ್ಲ. ಏಕೆಂದು ಈಗಾಗಲೇ ಮಾಧುಸ್ವಾಮಿಯವರು ಹೇಳಿದ್ದಾರೆ. ನಾನೂ ಅದನ್ನೇ ಒತ್ತಿ ಹೇಳಬೇಕಾಗುತ್ತದೆ. ಇನ್ನೂ ನಾವು ಮೂಲ ಬಜೆಟ್ ಬಗ್ಗೆ ಚರ್ಚೆಯನ್ನೇ ಪ್ರಾರಂಭ ಮಾಡಿಲ್ಲ. ಆ ಬಜೆಟ್ ಅನ್ನು ಅಂಗೀಕಾರ ಮಾಡಿಲ್ಲ. ಏಕೆಂದರೆ, ಆ ಬಜೆಟ್‌ನಲ್ಲಿರತಕ್ಕಂಥ ಎಲ್ಲಾ ಅಂಶಗಳನ್ನೂ ಈ ಮನೆ ಒಪ್ಪುತ್ತೆ ಎಂದು guarantee ಇಲ್ಲ ಅಥವಾ ತಿರಸ್ಕಾರ ಮಾಡುತ್ತದೆ ಅಂತಲೂ guarantee ಇಲ್ಲ. ನೀವು ಮಂಡಿಸಿದ್ದೀರಿ, ಅದು ಸದನದ ಮುಂದೆ ಇದೆ ಅಷ್ಟೇ. ಅದನ್ನು ನಾಳೆ reject ಮಾಡಬಹುದು ಅಥವಾ ಒಪ್ಪಬಹುದು ಅದು ಬೇರೆ ವಿಚಾರ. ಏನೂ ತೀರ್ಮಾನವಾಗಿಲ್ಲ. ಅಂದರೆ, ನೀವೇನು ಮೂಲ ಬಜೆಟ್ ಮಂಡಿಸಿದ್ದೀರಿ, ಅದರ ಬಗ್ಗೆ ಚರ್ಚೆಯಾಗಲಿಲ್ಲ, ಅದನ್ನು ಸದನ ಒಪ್ಪಿಲ್ಲ ಅಥವಾ ಒಪ್ಪಿಗೆಯನ್ನು ಕೊಡುತ್ತದೆಯೋ, ಇಲ್ಲವೋ ಗೊತ್ತಿಲ್ಲ. ಆಗಲೇ ನೀವು supplementary budget ಮಂಡಿಸಿದ್ದೀರಿ ಎಂದರೆ, ಇದನ್ನು ಮಂಡಿಸುತ್ತಿರುವ ವಿಧಾನ, ಅನೈತಿಕವಾದಂಥ ಅರ್ಥ ನೀತಿ. ಇದಕ್ಕೆ ಯಾವುದೇ ರೀತಿಯಾದಂಥ ಅರ್ಥ ನೀತಿಯ ಲವಲೇಶ ಅಂಶವೂ ಕೂಡ ಈ ಸರ್ಕಾರಕ್ಕೆ ಗೊತ್ತಿಲ್ಲವೆಂಬುವ ದಾರಿ ಸ್ಪಷ್ಟ. ಇದನ್ನು ಭಾರೀ ನೋವಿನಿಂದ ನಾನು ಹೇಳಬೇಕಾಗುತ್ತದೆ. 6 ಸಾವಿರ ಕೋಟಿ ರೂಪಾಯಿಗಳಿಗೆ ನೀವು supplementary budget ಕೇಳುತ್ತಿದ್ದೀರಿ, ಅಲ್ಲಿ 45 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದ್ದೀರಿ, ಇದು ಯಾವ ರೀತಿ ನಿಯಮವೆಂದು ನನಗರ್ಥವಾಗುತ್ತಿಲ್ಲ. ನಮಗೆಂಥ ದುಸ್ಥಿತಿ ಬಂದಿದೆ ಎಂದರೆ, ಮಾಜಿ ಅರ್ಥ ಮಂತ್ರಿಗಳಾದ ಸಿದ್ಧರಾಮಯ್ಯನವರು ಇಲ್ಲಿ ಕುಳಿತಿದ್ದಾರೆ, main budget ಬಗ್ಗೆ ಚರ್ಚೆ ಮಾಡದೇ supplementary budget ಬಗ್ಗೆ ಚರ್ಚೆ ಮಾಡುವಂಥ ದುಸ್ಥಿತಿ ನಮ್ಮ ಸದನಕ್ಕೆ ಬಂದಿದೆ. ಇದು ಮೊದಲನೆಯದಾಗಿ ನಾನು ಹೇಳುತ್ತಿರತಕ್ಕ ಅಂಶ. ಮತ್ತೆ, ನೀವು 6 ಸಾವಿರ ಕೋಟಿ ರೂಪಾಯಿಗಳಿಗೆ supplementary budget ನಲ್ಲೇನು ಬೇಡಿಕೆ ಇಟ್ಟಿದ್ದೀರಿ, ಇದಕ್ಕೆ ನಿಮಗೆ ಯಾವ

ರೀತಿಯಾದಂಥ ಸಮರ್ಥನೆ ಇದೆ? ಸರ್ಕಾರ ಇದರ ಬಗ್ಗೆ ಹೇಳಬೇಕು. ಇಂಧನ ಇಲಾಖೆಗೆ ನೀವು 300 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಸಂತೋಷ. ಇನ್ನೂ 300 ಕೋಟಿ ರೂಪಾಯಿ ಕೊಡಿ. ಅವಶ್ಯಕತೆ ಇದೆ. ನಾನೇನೂ ಬೇಡವೆಂದು ಹೇಳುವುದಿಲ್ಲ. ಆದರೆ, ನೀವು ಎಲ್ಲಿ ಕೊಟ್ಟಿದ್ದೀರಿ? supplementary budget ನಲ್ಲಿ ಕೊಡುತ್ತೀರಾ? ಇಂಧನ ಇಲಾಖೆ ಎಂದರೆ ಏನು ಬೇಕಾಬಿಟ್ಟಿಯೇ? ಅದು ಭಾರೀ ಪ್ರಮುಖವಾದಂಥ ಮೂಲಸೌಲಭ್ಯಗಳನ್ನು ರಾಜ್ಯಕ್ಕೆ ಒದಗಿಸುವಂಥ, ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕಾಗಿರುವಂಥ ಇಲಾಖೆ. ಅದಕ್ಕೆ 300 ಕೋಟಿ ರೂಪಾಯಿಗಳಲ್ಲ, 600 ಕೋಟಿ ರೂಪಾಯಿ ಕೊಟ್ಟರೂ ಏನೂ ತೊಂದರೆಯಿಲ್ಲ. ಕೊಡಬೇಕು. ಆದರೆ, ಯೋಜನೆ ಎಲ್ಲಿ ಬರಬೇಕು? ಮೂಲ ಬಜೆಟ್‌ನಲ್ಲಿ ಬರಬೇಕು. ಏಕೆ ಬರಲಿಲ್ಲ? ಇಲ್ಲೇಕೆ ತಂದಿರಿ ಎಂದರೆ, ನಿಮಗೆ ಆ ಬಜೆಟ್ ಅನ್ನು ಮಂಡಿಸುವಾಗ ಇಂಧನ ಇಲಾಖೆಯ ಬಗ್ಗೆ ಪಕ್ಷಪಾತ ಧೋರಣೆಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹೊಂದಿದ್ದಾರೆ ಎಂದು ಹೇಳಬೇಕಾಗುತ್ತದೆ, ಇದು ಎರಡೇ ಅಂಶಗಳು. ಇಲ್ಲದಿದ್ದರೆ, ಮೂಲ ಬಜೆಟ್‌ನಲ್ಲಿ ಸೇರಿಸಬೇಕಾಗಿರುವಂಥದ್ದನ್ನು supplementary budget ನಲ್ಲಿ ತರುತ್ತಿದ್ದೀರೆಂದರೆ, ಏಕೆಂದು ನೀವು ಹೇಳಬೇಕು. ಏಕೆಂದರೆ, ಬಜೆಟ್ ಮಂಡನೆ ಮಾಡಿದ ಮೇಲೆ ನಿಮಗೆ ಗೊತ್ತಾಯಿತು, ವ್ಯತ್ಯಾಸವಾಗಿದೆ ಎಂದು ಹೇಳಿ ಸಂಬಂಧಪಟ್ಟಂಥ ಇಲಾಖಾ ಸಚಿವರು, ಬೇರೆ ಬೇರೆಯವರೆಲ್ಲ ಟೀಕೆ ಮಾಡಲಿಕ್ಕೆ ಪ್ರಾರಂಭ ಮಾಡಿದರು, ಇದನ್ನು ತಪ್ಪಿಸಿಕೊಳ್ಳಲಿಕ್ಕೋಸ್ಕರ ನೀವು ಇದನ್ನು ತಂದಿದ್ದೀರಿ. ಎರಡನೆಯದಾಗಿ, ನಿಮಗೆ ಅರಣ್ಯ ಇಲಾಖೆ ಏನು ಪಾಪ ಮಾಡಿದೆ? ಇವತ್ತು ಇಡೀ ಜಗತ್ತು ಆತಂಕದಲ್ಲಿದೆ. ಪರಿಸರ ಹಾಳಾಗಿದೆ. ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. Ecological imbalance ಆಗುತ್ತಿದೆ. ಜಗತ್ತಿನಲ್ಲಿ ಉಷ್ಣಾಂಶ ಹೆಚ್ಚಾಗುತ್ತಾ ಹೋಗುತ್ತಿದೆ. ಇವತ್ತು ಇಡೀ ಜಗತ್ತಿನ ಜನ ಆತಂಕಕ್ಕೊಳಗಾಗಿದ್ದಾರೆ. ಅದಕ್ಕೆ ಒಂದೇ ಒಂದು ಮದ್ದು ಇರತಕ್ಕಂಥದ್ದು, ಕಾಡನ್ನು ಬೆಳೆಸಬೇಕು, ಪರಿಸರವನ್ನು ರಕ್ಷಣೆ ಮಾಡಬೇಕು. ಇದೊಂದೆ ದಾರಿ ಇರತಕ್ಕಂಥದ್ದು, ಇವತ್ತು ಬೇರೆ ಏನೂ ದಾರಿ ಇಲ್ಲ. ಆದರೆ, ಕರ್ನಾಟಕದಲ್ಲಿ ನೀವೇನು ಮಾಡಿದ್ದೀರಿ? ಮೂಲ ಬಜೆಟ್‌ನಲ್ಲಿ ನಾನು ಓದಿದೆ, ಹಿಂದಿನ ವರ್ಷ ಕೊಟ್ಟಿದ್ದ ಬಜೆಟ್‌ಗಿಂತ 60 ಕೋಟಿ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದೀರಿ. ಹೋಗಲಿ, ಇದನ್ನು

supplementary budget ನಲ್ಲಾದರೂ ತಂದಿದ್ದೀರಾ ಎಂದು ಆಲೋಚನೆ ಮಾಡಿದರೆ, ಈ supplementary budget ನಲ್ಲಿ ಒಂದು ಪೈಸೆ ಹಣವನ್ನು ಸಹ ನೀವು ಅದಕ್ಕೆ ಕೊಟ್ಟಿಲ್ಲ. ಇಲಾಖೆಯ ಯಾವುದೋ building renovation ಗೆ ಕೊಟ್ಟಿದ್ದೀರಿ. ಮತ್ತೆ, ನೀವೆಲ್ಲ ಮಾತನಾಡುತ್ತೀರಿ, ದಿನ ಬೆಳಗಾದರೆ ಪರಿಸರ ದಿನಾಚರಣೆ ಮಾಡತಕ್ಕಂಥ ಸಂದರ್ಭದಲ್ಲಿ ಉದ್ದುದ್ದವಾದಂಥ ಭಾಷಣ ಮಾಡುತ್ತೀರಿ. ಅರಣ್ಯ ಇಲಾಖೆಯವರು ಕಾಡು ಬೆಳೆಸಬೇಕು, park ಗಳನ್ನು ನಿರ್ಮಾಣ ಮಾಡಬೇಕು, ಅದಕ್ಕೆ ನೀರಿನ ವ್ಯವಸ್ಥೆಯಾಗಬೇಕು, ಕೋಟ್ಯಾಂತರ ಸಸಿ ನೆಡಬೇಕು, ಅದಕ್ಕೆ ಹಣ ಬೇಕಾಗಿದೆ. ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ 15% forest ಕೂಡ ಬೆಳೆಸಲಿಲ್ಲ. ಆದರೆ, ಕಳೆದ ವರ್ಷ ಕೊಟ್ಟಂಥ ಹಣಕ್ಕಿಂತ 60 ಕೋಟಿ ರೂಪಾಯಿಗಳನ್ನು ಮೂಲ ಬಜೆಟ್‌ನಲ್ಲಿ ಕಡಿಮೆ ಮಾಡಿದ್ದೀರಿ, ಈಗ ಇದರಲ್ಲೇನಾದರೂ ಕೊಟ್ಟಿದ್ದೀರಾ ಎಂದರೆ, ಇದರಲ್ಲಿಯೂ ಕೊಟ್ಟಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- Mining area ಗಳಲ್ಲಿ RFO ಗಳಿಗೆ ಕನಿಷ್ಠ ಒಂದು Jeep ಕೊಟ್ಟಿಲ್ಲ, ಒಂದು weapon ಇಲ್ಲ. ಇವತ್ತು ಹಳ್ಳಿ ಹಳ್ಳಿಗಳಲ್ಲಿ RFO ಗಳು ಹೋದರೆ mines ಮಾಡುವ ಹುಡುಗರು ಒದೆಯುತ್ತಾರೆ. ನಾವು ಹೇಗೆ face ಮಾಡಬೇಕು? Do you know? They are not provided with vehicle. RFO ಗಳಿಗೆ ಒಂದು Jeep ಇಲ್ಲ, ಒಂದು weapon ಇಲ್ಲ. ನೀವೇನೋ western ghat ನಲ್ಲಿ ಕೊಟ್ಟಿದ್ದೀರಿ ಅಥವಾ wild life ನಲ್ಲೇನೋ ಕೊಟ್ಟಿದ್ದೀರಿ ಎನ್ನುವುದು ಬಿಟ್ಟರೆ ಬೇರೆ ಎಲ್ಲಿ ಕೊಟ್ಟಿದ್ದೀರಿ? ಬಳ್ಳಾರಿಯಲ್ಲಿ ನಿಮಗೆ ಗೊತ್ತಿಲ್ಲವೇ? Do you know? Forest Officer ಹತ್ತಿರ Jeep ಇಲ್ಲ, ರಾತ್ರಿ ಯಾವುದಾದರೂ mining ಆಗುತ್ತಿದೆಯೆಂದರೆ RFO ಹೋಗುವುದಕ್ಕಾಗುವುದಿಲ್ಲ. ಆ ತರಹ ಪರಿಸ್ಥಿತಿ ನಿರ್ಮಾಣ ಮಾಡಿದ್ದೀರಿ. ಇದೇನು ಉದ್ದೇಶಪೂರ್ವಕವೇ? ಇಲ್ಲಿಯಾದರೂ ಯಡಿಯೂರಪ್ಪನವರೇ ಸ್ವಲ್ಪ ಹಣವನ್ನು ಕೊಟ್ಟು, RFO ಗಳಿಗೆ ಒಂದು Jeep ಕೊಡಿಸಿ ಸಾರ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಕರ್ನಾಟಕ ರಾಜ್ಯದಲ್ಲಿ 15% forest ಇಲ್ಲ. forest ಬೆಳೆಸಲಿಕ್ಕೆ ಜಾಗವಿಲ್ಲವೇ? ಜಾಗವಿದೆ. ಹೋಗಲಿ, ಅದನ್ನೇನಾದರೂ

ಕೃಷಿಗೆ ಬಳಸಿಕೊಂಡಿದ್ದೀರಾ? ಅದೂ ಇಲ್ಲ. Forest ಬೆಳೆಸಲಿಲ್ಲ, ಕೃಷಿಗೂ ಬಳಸಿಕೊಳ್ಳಲಿಲ್ಲ. Forest ಅನ್ನು ಅಭಿವೃದ್ಧಿ ಮಾಡತಕ್ಕಂಥದ್ದಕ್ಕೆ ಹಣವನ್ನೂ ಕೊಡುವುದಿಲ್ಲ. ಹಾಗಾದರೆ, ನಿಮ್ಮ ಉದ್ದೇಶವೇನು? ನೀವು forest ಅನ್ನು ಬೆಳೆಸದೇ ಕರ್ನಾಟಕ ರಾಜ್ಯವನ್ನು ಕೇವಲ ಮರಳುಗಾಡು ಮಾಡಲಿಕ್ಕೆ ಹೊರಟಿದ್ದೀರಾ? Forest ಅನ್ನು ಬೆಳೆಸಲಿಕ್ಕೆ ಬೇಕಾಗಿರತಕ್ಕಂಥದ್ದಕ್ಕೆ ನೀವು ಹಣ ಕೊಟ್ಟಿಲ್ಲ. RFO ಗಳಿಗೆ Jeep ಇಲ್ಲ ಎಂದು ಮಾಧುಸ್ವಾಮಿಯವರು ಹೇಳಿದ್ದಾರೆ. ಕಾಡಿನಲ್ಲಿ ಓಡಾಡತಕ್ಕಂಥ ಜನರಿಗೆ Jeep, Bike ಇಲ್ಲ. ನಮ್ಮಲ್ಲಿ RFO ಇದ್ದಾರೆ. ಎಲ್ಲಿ ಹೋಗಿದ್ದಿರಿ ಎಂದರೆ, ನಾನು ಎಲ್ಲಿಯೂ ಹೋಗಲಿಕ್ಕಾಗುವುದಿಲ್ಲ ಸಾರ್, ನನ್ನ ಹತ್ತಿರ vehicle ಇಲ್ಲವೆಂದು ಹೇಳುತ್ತಾರೆ. ಬೆಳೆಸಿರುವ forest ಅನ್ನು ಉಳಿಸುವುದು ಹೇಗೆ? ಹೊಸ forest ಅನ್ನು ಬೆಳೆಸುವುದು ಹೇಗೆ? ಇಡೀ ಕಾಡನ್ನು ಬೆಳೆಸಲಿಕ್ಕೆ ಅವರು ಹೋಗಿ ಜಾಗಗಳನ್ನು ನೋಡಬೇಕಾದರೆ, ಯಾವ ವಿಧಾನದಲ್ಲಿ ಹೋಗಬೇಕು? ಅವರು ಹೇಗೆ ಹೋಗಬೇಕು? ಯಾವ ರೀತಿ? ನಿಮಗೆ ಅವಶ್ಯಕತೆ ಇಲ್ಲ. ನಮಗಿಂತ ಹೆಚ್ಚಿಗೆ ಶಿವಮೊಗ್ಗದಲ್ಲಿ RFO ಗಳಿಗೆಲ್ಲ Jeep ಗಳು ಬೇಕು. ನಿಮಗೆ ಕಡ್ಡಾಯವಾಗಿ ಬೇಕೇ ಬೇಕು. Mines ಇರುವ ಕಡೆ ಬೇಕು. ಇಲ್ಲವೆಂದರೆ, ಅವರು ಹೋಗುವಷ್ಟು ಹೊತ್ತಿಗೆ ಗಣಿಯಲ್ಲೆಲ್ಲ ಕಳ್ಳತನ ಮಾಡಿಕೊಂಡು ಹೋಗಿಬಿಟ್ಟಿರುತ್ತಾರೆ. ಅದಕ್ಕೇನೂ ವ್ಯವಸ್ಥೆಯಿಲ್ಲ. ಯಡಿಯೂರಪ್ಪನವರೇ ನೀವು ಸಹಕಾರ ರಂಗದಕ್ಕೆ supplementary budget ನಲ್ಲಿ ಕೇಳಿದ್ದೀರಿ? ಯಾವುದಕ್ಕೆ ಕೇಳಿದ್ದೀರಿ? ನಾನು ಒಂದೇ ಒಂದು ಉದಾಹರಣೆಯನ್ನು ಯಡಿಯೂರಪ್ಪನವರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಈಗ ನೀವು ಸಾಲ ಮನ್ನಾ ಮಾಡಿದ್ದೀರಿ. ಬಡ್ಡಿ ಮನ್ನಾ ಮಾಡಿದ್ದೀರಿ. 25 ಸಾವಿರ ರೂಪಾಯಿ ಎಂದು ಘೋಷಣೆ ಮಾಡಿದ್ದೀರಿ. ನಾವು ಕೋಲಾರ ಜಿಲ್ಲೆಯವರು. ನಿಮ್ಮ ಸಾಲ, ಬಡ್ಡಿ ಮನ್ನಾದಿಂದ ಕೋಲಾರ ಜಿಲ್ಲೆಗೆ ಒಂದೇ ಒಂದು ನಯಾಪೈಸೆ benefit ಇಲ್ಲ. ಏಕೆಂದರೆ, ಕಳೆದ ವರ್ಷ ನಮ್ಮ ಕೋಲಾರ ಜಿಲ್ಲೆಯಲ್ಲಿರತಕ್ಕಂಥ ಯಾವುದೇ Society, DCC Bank ಗೆ re-financing capacity ಇರಲಿಲ್ಲ. ಹಾಗಾಗಿ, ಒಂದೇ ಒಂದು ನಯಾಪೈಸೆ ಕೂಡ ಅವರು ಸಾಲ ಕೊಟ್ಟಿಲ್ಲ. ನಮ್ಮ ರೈತರು ಸಾಲ ತೆಗೆದುಕೊಂಡಿಲ್ಲ. ನಿಮ್ಮ ಬಡ್ಡಿ, ಸಾಲ ಮನ್ನಾ ಕೋಲಾರ ಜಿಲ್ಲೆಯವರಿಗೇನು ಪ್ರಯೋಜನವಾಗುತ್ತದೆ?

ಅದಕ್ಕೋಸ್ಕರ, ಏನಾದರೂ supplementary budget ನಲ್ಲಿ ತೆಗೆದಿಟ್ಟಿದ್ದೀರಾ? ಬಜೆಟ್‌ನಲ್ಲಿ ತೆಗೆದಿಟ್ಟಿಲ್ಲ, ನಮ್ಮನ್ನು ಮರೆತು ಹೋಗಿಬಿಟ್ಟಿದ್ದೀರಿ. At least, ನಮಗೆ re-financing ಕೊಡಿ. ಸಹಕಾರ ರಂಗದಲ್ಲಿ ನಮ್ಮ ಕೋಲಾರ ಜಿಲ್ಲೆಯ ಸಹಕಾರ ಸಂಘಗಳು, DCC Bank re-financing capacity ಕಳೆದುಕೊಂಡು ಕಳೆದ ವರ್ಷ ಒಂದು ರೂಪಾಯಿ ಸಾಲವನ್ನೂ ನಮ್ಮ ರೈತರಿಗೆ ಕೊಡಲಿಲ್ಲ. ಧಾರವಾಡಕ್ಕೆ ಕೊಟ್ಟಿದ್ದೀರಿ. ನಿಮಗೆ ನಮ್ಮ ಕೋಲಾರ ಜಿಲ್ಲೆ ಏನು ಪಾಪ ಮಾಡಿತ್ತು? ನಿಮಗೆ ಚಿನ್ನ ಕೊಟ್ಟೆವಲ್ಲಾ ಸ್ವಾಮಿ, ಜಗತ್ತಿನಲ್ಲಿ ಅತ್ಯುನ್ನತವಾದಂಥ ಚಿನ್ನವನ್ನು ಕೊಟ್ಟೆವು. ನಿಮಗೆ ಸಾವಿರಾರು ಕೋಟಿ ರೂಪಾಯಿಗಳ ಆದಾಯ ಮಾಡಿಕೊಟ್ಟೆವು. ನಮಗೇನು ಕೊಟ್ಟಿದ್ದೀರಿ? ಕನಿಷ್ಟ ನಮ್ಮ society ಗಳ re-financing ಗೆ ನಿಮಗೆ ಹಣ ಕೊಡಲಿಕ್ಕಾಗಲಿಲ್ಲವೇ? ಧಾರವಾಡ ಜಿಲ್ಲೆಗೆ ಕೊಟ್ಟಿರಿ, ಕೋಲಾರ ಜಿಲ್ಲೆಯವರು ನಿಮಗೇನು ಪಾಪ ಮಾಡಿದ್ದಾರೆ? supplementary budget ನಲ್ಲಿ ಏನಾದರೂ ಅದಕ್ಕೆ ಹಣ ತೆಗೆದು ಇಟ್ಟಿದ್ದೀರಾ? ನಾವು ಕೋಲಾರ ಜಿಲ್ಲೆಯ ರೈತರಿಗೆ ಏನು ಉತ್ತರ ಹೇಳಬೇಕು? ನಾವು ಇಲ್ಲಿ 12 ಜನ ಸದಸ್ಯರು ಇದ್ದೇವೆ, ನಾಳೆ ನಮ್ಮ ರೈತರು ಕೇಳುತ್ತಾರೆ. ಸಾಲ ಮನ್ನಾ ಮಾಡಿ ಬಡ್ಡಿ ಮನ್ನಾ ಮಾಡಿ ಎಂದು ನೀವು ಎಲ್ಲರೂ ಧರಣಿ ಮಾಡಿದಿರಿ, ಆದರೆ ನಮ್ಮ ಜಿಲ್ಲೆಗೆ ಅದರಿಂದ ಒಂದು ಪೈಸೆಯ ಪ್ರಯೋಜನವಾಗಿದೆಯೇ ಎಂದು ಕೇಳಿದರೆ, ನಾವು 12 ಜನ ಶಾಸಕರು ಏನು ಉತ್ತರ ಕೊಡಬೇಕು? ಇದಕ್ಕೆ ನೀವು ಏನಾದರೂ ಒಂದು ಪರಿಹಾರವನ್ನು ಹುಡುಕಬೇಕು. ಅಥವಾ ನಮಗೆ special package ಮಾಡಿ society ಗಳನ್ನು re-financing ಮಾಡಲಿಕ್ಕೆ, ಹಣವಾದರೂ ಕೊಡಿ. ಇಲ್ಲಾಂದ್ರೆ ಸುಸ್ತಿ ಬಡ್ಡಿ ಮನ್ನಾ ಮಾಡಿ ಎಲ್ಲಾ ರೈತರಿಗೂ 25 ಸಾವಿರ ಮಾಡಿ, ಆಗ ನಾವು ಉಳಿದುಕೊಳ್ಳುತ್ತೇವೆ. ಇಲ್ಲಾಂದ್ರೆ ಕೋಲಾರ ಜಿಲ್ಲೆಯ ರೈತರು ಉಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನೀವು ಉತ್ತರ ಕೊಡುವಾಗ ಇದನ್ನು ಪ್ರಕಟಿಸದಿದ್ದರೆ ಆ ಸಮಯದಲ್ಲಿ ಕೋಲಾರ ಜಿಲ್ಲೆಯ ಎಲ್ಲಾ ಶಾಸಕರು ಧರಣಿ ಮಾಡಬೇಕಾಗುತ್ತದೆ. ಸಚಿವರ ವಿಚಾರ ಅವರಿಗೆ ಬಿಟ್ಟಿದ್ದು. ಧರಣಿಗೆ ಬಂದರೂ ಬರಬಹುದು, ಬಿಟ್ಟರೆ ಬಿಡಬಹುದು. ಮಂತ್ರಿಗಳು ಕೋಲಾರ ಜಿಲ್ಲೆಯವರು, ಅವರು ಧರಣಿಗೆ ಬಂದರೆ ಸ್ವಾಗತ. ಬರಲಿಲ್ಲವೆಂದರೆ ಅವರ ಹಣೆಬರಹ. ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ?

ಹಾಗೆಯೇ ಕಾರ್ಮಿಕ ಇಲಾಖೆಗೆ supplementary budget ಕೇಳಿದಿರಿ. ಈ ಇಲಾಖೆಯಲ್ಲಿ ಏಕೆ ಸ್ವಾಮಿ ನೀವು ಕೇಳಿರುವುದು? ಯಾವ ಉದ್ದೇಶಕ್ಕಾಗಿ ಈ ಇಲಾಖೆಗೆ supplementary budget ನಲ್ಲಿ ಹಣ ಕೇಳಿದಿರಿ? ಕಾರ್ಮಿಕರ ಕಲ್ಯಾಣ ನಿಧಿ ಏನಾಯಿತು? ಅವರ ESI ಆಸ್ಪತ್ರೆಗಳು ಏನಾಯಿತು? ಆ ಆಸ್ಪತ್ರೆಯಲ್ಲಿ ಔಷಧಿ ಇದೆಯೆ? ಎಷ್ಟು ಔಷಧಿ ಕೊಡುತ್ತಿದ್ದೀರಿ? ಕೈ–ಕಾಲು ಮುರಿದಂಥ ಯಾವ ಕಾರ್ಮಿಕರಿಗೆ ಹಣ ಕೊಟ್ಟಿದ್ದೀರಿ? ಇಂಥವರಿಗೆ ನೀವು ಏನು treatment ಕೊಟ್ಟಿದ್ದೀರಿ? ರಾಜಾಜಿನಗರದಲ್ಲಿ ಒಂದು ESI ಆಸ್ಪತ್ರೆ ಇದೆ. ದಯಮಾಡಿ ತಾವು ಅಲ್ಲಿಗೆ ಬನ್ನಿ. ಅದರ ಸ್ಥಿತಿಗತಿಗಳನ್ನು ನೋಡಿ. ಮಾನ್ಯ ಉಪ ಮುಖ್ಯಮಂತ್ರಿಗಳು ಹೋಗಿ ನೋಡಿದರೆ, ಬಹುಶಃ ಏನಾದರೂ ಸಹಾಯ ಮಾಡಬಹುದು ಎಂದು ಅನ್ನಿಸುತ್ತದೆ. supplementary budget ನಲ್ಲಿ ಅದಕ್ಕೆ ಏನಾದರೂ ಹಣವನ್ನು ಒದಗಿಸಿದ್ದೀರಾ? ಹಾಗಾದರೆ supplementary budget ನ ಉದ್ದೇಶ ಏನು? ನಮಗೂ ನಿಮಗೂ supplementary budget ನ ಉದ್ದೇಶ ಚೆನ್ನಾಗಿ ಗೊತ್ತಿದೆ. ಏನಾದರೂ emergency ಆದಂಥ ಸಂದರ್ಭದಲ್ಲಿ ನಾವು budget ನಲ್ಲಿ provision ಮಾಡದೇ ಹೋದರೆ ಅಂಥದ್ದಕ್ಕೆ ನಾವು ಹಣ ಕೊಡಬೇಕು. ಕೊಡಬೇಕಾದಂಥ ಪರಿಸ್ಥಿತಿ ಬರುತ್ತದೆ. ಆ ರೀತಿ ಇದ್ದರೆ ನಾವು ಮತ್ತು ನೀವು supplementary budget ಅನ್ನು ಒಪ್ಪಬೇಕಾಗುತ್ತದೆ. 100 ಕೋಟಿನೋ ಅಥವಾ ಸಾವಿರ ಕೋಟಿಯ ಒಳಗಡೆ ಇದ್ದರೆ emergency, exigency ಬಂದಂಥ ಸಂದರ್ಭದಲ್ಲಿ, drought ಬಂತು flood ಬಂತು ಅಥವಾ ಇನ್ನೇನಾದರೂ ಆಯಿತು, epidemic break down ಆಯಿತು. ಅಂಥದ್ದಕ್ಕೆ ನಾವು supplementary budget ಅನ್ನು ಮಂಡಿಸುವುದು ಬಿಟ್ಟು ಪೂರಕ budget ನಲ್ಲಿ ಮಂಡಿಸಿ ಅದು ಇನ್ನು ಅಂಗೀಕಾರ ಆಗದೇ ನೀವು supplementary budget ಇಟ್ಟಿದ್ದೀರಲ್ಲ, ಇದು ಯಾವ ಅರ್ಥಶಾಸ್ತ್ರ? ಇದು ಯಾವ ಆಯವ್ಯಯದ ನಿಯಮ? ಇದಕ್ಕೇನು ಒಂದು ರೀತಿ, ನೀತಿ, ನಿಯಮ, ಪದ್ಧತಿ ಏನೂ ಇಲ್ಲವೇ? ಈ ಸದನ ಮತ್ತು ಈ ಆಯವ್ಯಯಕ್ಕಿರತಕ್ಕಂಥ ಪಾವಿತ್ರ್ಯತೆಯನ್ನು ನಾವು ಕಳೆಯಬೇಕಾ? ಈ ಸದನಕ್ಕಿರತಕ್ಕಂಥ ಪಾವಿತ್ರ್ಯತೆಯನ್ನು ಕಳೆಯತಕ್ಕಂಥ ಸ್ಥಿತಿಗೆ ಬಂದು ಬಿಟ್ಟಿದ್ದೇವೆ. Budget ನ

ಪಾವಿತ್ರ್ಯತೆಯನ್ನು ಕಳೆದು ಬಿಟ್ಟಿದ್ದೇವೆ. ಏಕೆಂದರೆ, budget ಮಂಡಿಸುವುದಕ್ಕೆ ಮೊದಲೇ ಎಲ್ಲಾ ವಿಚಾರಗಳು ಪತ್ರಿಕೆಯಲ್ಲಿ ಬಂದು ಬಿಟ್ಟಿತು. ನಾವು ಇದನ್ನು ಹೇಳಬೇಕಾಗುತ್ತದೆ. ಅಲ್ಲೂ ಪಾವಿತ್ರ್ಯತೆಯನ್ನು ಕಳೆದಿರಿ. ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲೂ ಅದರ sanctity ಯನ್ನೇ ನೀವು ಹಾಳು ಮಾಡಿಬಿಟ್ಟಿರಿ. supplementary budget ಅನ್ನು ಮಂಡಿಸಿ ಹಾಗಾದರೆ ನಾನು ಒಂದು ಮಾತು ಕೇಳುತ್ತೇನೆ. ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆ ಇವೆರಡು ಏನು ಕೆಲಸ ಮಾಡುತ್ತಿವೆಂದು ಪ್ರಶ್ನೆಮಾಡಬೇಕಾಗುತ್ತದೆ. ನೀವು budget ಅನ್ನು ಮಂಡಿಸಬೇಕಾದರೆ, ಪ್ರಧಾನ ಪಾತ್ರವನ್ನು ವಹಿಸತಕ್ಕಂಥದ್ದು ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆ. ಯೋಜನಾ ಇಲಾಖೆಯವರು ಕಾರ್ಯಕ್ರಮಗಳನ್ನು ತಯಾರಿಸುತ್ತಾರೆ, ಅದಕ್ಕೆ ಹಣ ಒದಗಿಸತಕ್ಕಂಥ ಕೆಲಸ ಆರ್ಥಿಕ ಇಲಾಖೆಯವರು ಮಾಡುತ್ತಾರೆ. ಒಂದು ವರ್ಷದಲ್ಲಿ ನಾವು ಹೇಗೆ ಈ ರಾಜ್ಯವನ್ನು ಅಭಿವೃದ್ಧಿಪಡಿಸಬೇಕು? ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕು? ಯಾವ ದಿಕ್ಕಿನಲ್ಲಿ ಹೇಗೆ ಅಭಿವೃದ್ಧಿಪಡಿಸಬೇಕಾದರೆ ನಮಗೆ ಎಷ್ಟು ಹಣ ಬೇಕಾಗುತ್ತದೆ? ಯಾವ್ಯಾವ ಇಲಾಖೆಯಲ್ಲಿ ಎಷ್ಟು ಇರಬೇಕು? ಜೊತೆಗೆ ಅದರಲ್ಲಿ priority sector ಬರುತ್ತದೆ. ಆ priority sector ನಲ್ಲಿ ನಾವು ಎಷ್ಟು ಹಣವನ್ನು ಇದಕ್ಕೆ ತೆಗಿದಿಡಬೇಕು ಎನ್ನತಕ್ಕಂಥ ಅಂಶ ಬರುತ್ತದೆ. ನಿಮ್ಮ ಸರ್ಕಾರಕ್ಕೆ ಮತ್ತು ನಿಮ್ಮ ಇಲಾಖೆಗಳಿಗೆ ಆ ಯೋಜನೆಯನ್ನು ಮಾಡಲಿಕ್ಕೆ ಆಗಲಿಲ್ಲವೇ? ಏನು ಮಾಡುತ್ತಿದ್ದೀರಿ? ಆ ಯೋಜನೆಗಳನ್ನು ನೀವು ಸರಿಯಾಗಿ ವೈಜ್ಞಾನಿಕವಾದ ರೀತಿಯಲ್ಲಿ ಮಾಡಿದ್ದರೆ ಈ ಆರು ಸಾವಿರ ಕೋಟಿಯ supplementary budget ಬರತಕ್ಕಂಥ ಅವಶ್ಯಕತೆ ಇರಲಿಲ್ಲ. ಅಂದರೆ ಈ ರಾಜ್ಯವನ್ನು ಹೇಗೆ ನಡೆಸಿಕೊಂಡು ಹೋಗಬೇಕು ಹೇಗೆ ಅಭಿವೃದ್ಧಿಪಡಿಸಬೇಕು ಎನ್ನುವುದಕ್ಕೆ ನಿಮ್ಮ ಹತ್ತಿರ ಸ್ಪಷ್ಟವಾದಂಥ ಕಾರ್ಯಕ್ರಮವಿಲ್ಲ, ಗೊತ್ತು- ಗುರಿಯಿಲ್ಲ. ನೀವು ಬೇಕಾಬಿಟ್ಟಿಯಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗಲಿಕ್ಕೆ ಹೊರಟಿದ್ದೀರಾ? ರಾಜ್ಯದ ಅಭಿವೃದ್ಧಿಯ ಮೂಲಮಂತ್ರ ಏನು? ಒಂದು ರಾಜ್ಯವನ್ನು ಹೇಗೆ ನಡೆಸಿಕೊಂಡು ಹೋಗಬೇಕೆನ್ನುವ ನಿರ್ದಿಷ್ಟವಾದ ಒಂದು ಗುರಿ ಇರಬೇಕು. ಆ vision ನಿಮಗೆ ಇದೆಯೆ? ಬೂಕನಕರೆಗೆ ಒಂದು

ಕೋಟಿ, ಅದು ಯಾವುದೋ ಮಠಕ್ಕೆ ಒಂದು ಕೋಟಿ, ಇದು ರಾಜ್ಯದ ಅಭಿವೃದ್ಧಿಯೇ? ನೀವು ಉದ್ಯೋಗಾವಕಾಶಗಳು ಹೆಚ್ಚಿಸಲಿಕ್ಕೆ ಏನು ಕಾರ್ಯಕ್ರಮ ಹಾಕಿದ್ದೀರಿ? ಯಾವುದೇ ಗೊತ್ತು – ಗುರಿಯಿಲ್ಲದ budget ಅನ್ನು ತಯಾರಿಸಿ, ಈಗ supplementary budget ನಲ್ಲಿ ಆರು ಸಾವಿರ ಕೋಟಿ ರೂಪಾಯಿ ಬೇಡಿಕೆ ತಂದು ಪುನಃ ಈಗ Vote on account ತೆಗೆದುಕೊಳ್ಳುತ್ತಿದ್ದೀರಿ. ಮತ್ತೆ ಜೂನ್‌ನಲ್ಲಿ full budget ತರುವಾಗ ಮತ್ತೆ ಇನ್ನೊಂದು supplementary budget ತರುತ್ತೀರಿ. ಇದು ಈಗ ಬಂದಿರತಕ್ಕಂಥ supplementary budget. June ತಿಂಗಳಿನಲ್ಲಿ ಮತ್ತೆ ಇನ್ನೊಂದು supplementary budget ಅನ್ನು ನೀವು ತರುತ್ತೀರಿ. ಅಂದರೆ ಅರ್ಥ ಏನು? You have no plans and programmes and you are running the Government. What is this? ನಾಳೆ ಈ ರಾಜ್ಯ ಏನಾಗುತ್ತದೆ? ಯಾರೋ ಮಾಡಿದ ಪುಣ್ಯಕ್ಕೆ ಹಣ ನಿಮ್ಮ ಹತ್ತಿರ ಇದೆ. ಯಾರೋ ಮಾಡಿದ ಶ್ರಮದಿಂದ ನಿಮಗೆ ಹಣ ಹರಿದು ಬರುತ್ತದೆ. ನಿಮಗೆ ಇಷ್ಟ ಬಂದಾಗ ಹಣ ಖರ್ಚು ಮಾಡುವುದು. ಮನಸ್ಸಿಗೆ ಹೇಗೆ ಬರುತ್ತದೋ ಹಾಗೆ ಹಣ ಖರ್ಚು ಮಾಡುವುದು. ಇದು ಯಾರ ದುಡಿಮೆ? ನಾನು ಬಹಳ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಬಾರಿ ವಿನಯದಿಂದ ಹೇಳುತ್ತಿದ್ದೇನೆ, ಈ ರಾಜ್ಯದಲ್ಲಿ ಬರತಕ್ಕಂಥ ಪ್ರತಿಯೊಂದು ಪೈಸೆ ಯಾರಪ್ಪನ ಸೊತ್ತು ಅಲ್ಲ, ಇದು ಈ ರಾಜ್ಯದ ಜನತೆಯ ಸೊತ್ತು. ಇದು ಅವರಿಗೆ ಸೇರಬೇಕು. ಸೇರತಕ್ಕಂಥ ಸಂದರ್ಭದಲ್ಲಿ ನಮ್ಮ ನಿಮ್ಮನ್ನು ಕಳುಹಿಸಿರುವ ಜನರ ಹಣಕ್ಕೆ we are watch-dogs of their money. It is our duty to protect their interest and money. ಅದನ್ನು ಬಿಟ್ಟು ಅವರಿಗೋಸ್ಕರವಾಗಿ ನಾವು ಖರ್ಚು ಮಾಡತಕ್ಕಂಥ ಹಣವನ್ನು ದುಂದುವೆಚ್ಚ ಮಾಡಿಕೊಂಡು, ಬೇಕಾಬಿಟ್ಟಿಯಾಗಿ ಪೋಲು ಮಾಡಿಕೊಂಡು, ಇವತ್ತು ಆರು ಸಾವಿರ ಕೋಟಿ ರೂಪಾಯಿ supplementary budget ನಲ್ಲಿ ತಂದು ನಮ್ಮ ಮುಂದೆ ಇಟ್ಟು, ದೇವಸ್ಥಾನದ ಜೀರ್ಣೋದ್ಧಾರ ಮಠಗಳ ಜೀರ್ಣೋದ್ಧಾರ ಇದು ಏನು ಸ್ವಾಮಿ? ಒಂದು ಕೋಟಿ ರಸ್ತೆಗೆ ನೀವು budget ನಲ್ಲಿ ಇಡಬೇಕಾ? ಐವತ್ತು ಲಕ್ಷ ಸಮುದಾಯ ಭವನಕ್ಕೆ ನೀವು budget ನಲ್ಲಿ ಸೇರಿಸಬೇಕಾ? ನೀವು ಹೇಳಿ ಸೇರಿಸಬೇಕಾ? ಇದಾ budget ಇದಕ್ಕೆ ಏನಾದರೊಂದು ಘನತೆ, ಗೌರವ, ಪಾವಿತ್ರ್ಯತೆ

ಇದೆಯೆ? ಇದನ್ನು ನಾವು ಒಪ್ಪಬೇಕಾ? ಆದುದರಿಂದ ಇದನ್ನು ಖಂಡಿತವಾಗಿ ಯಾವುದೇ ಕಾರಣದಿಂದ ಒಪ್ಪಲಿಕ್ಕಾಗುವುದಿಲ್ಲ, ಇದು ಅನೈತಿಕವಾದಂಥ, ಅನಿಯಮವಾದಂಥ, ಯಾವುದೇ ಆರ್ಥಿಕವಾದಂಥ ಕನಿಷ್ಟ ನೀತಿ–ನಿಯಮ ಇಲ್ಲದೇ ಇರತಕ್ಕಂಥ ಈ supplementary budget ಅನ್ನು ಒಪ್ಪಲಿಕ್ಕೆ ಆಗುವುದಿಲ್ಲವೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) :– ಮಾನ್ಯ ಉಪಾಧ್ಯಕ್ಷರೇ ನಾನು ಎರಡೇ ನಿಮಿಷ ಮಾತನಾಡುತ್ತೇನೆ. ಈ budget ನಲ್ಲಿ ಮಾತನಾಡುವುದಕ್ಕೆ ಏನು ಇದೆ? ಇದು Karnataka budget ಅಲ್ಲ. Politician budget. Politician ಮಾಡುವುದು budget. ಅದು ಹೇಗೆಂದರೆ, ಒಂದು Politician ಕೆಟ್ಟು ಹೋಗಿರುವ ಹಲ್ಲು ತೆಗೆಯುವುದಕ್ಕೆ plan ಮಾಡಿದರು. ಅವರ ಮನೆಗೆ doctor ಹಲ್ಲು ತೆಗೆಯಬೇಕೆಂದು ಬಂದಿದ್ದಾರೆ. ಅಂಥ ಹಲ್ಲು ತೆಗೆಯುವ ಸಂದರ್ಭದಲ್ಲಿ ಹೊರಗಡೆ ದೇಶದಿಂದ ಇನ್ನೊಬ್ಬ Politician ಇವರನ್ನು ನೋಡುವುದಕ್ಕೆ ಬಂದಿದ್ದಾರೆ. ಈ ವಿಷಯ ಗೊತ್ತಾದ ಮೇಲೆ ಈ Politician ಏನು ಮಾಡಿದರು ಎಂದರೆ, " doctor ನಮ್ಮ anti-chamber ನಲ್ಲಿರಿ, ನಾನು ಕರೆಯುವ time ಗೆ ಬಂದರೆ ಸಾಕು, ಆಗ ಬಂದು ನೀವು ಹಲ್ಲು ತೆಗೆದುಬಿಡಿ" ಎಂದು ಹೇಳಿದರು. ಹೊರಗಡೆಯಿಂದ ಬಂದಿರತಕ್ಕಂಥವರ ಜೊತೆಯಲ್ಲಿ tea ಕುಡಿದು ಮಾತನಾಡುತ್ತಾ ಕುಳಿತುಕೊಂಡಿದ್ದರು. "ನಾವು ನಮ್ಮ ದೇಶದಲ್ಲಿ ಅಪಾರ ಭಕ್ತಿಯನ್ನಿಟ್ಟುಕೊಂಡಿರತಕ್ಕಂಥ politician, ನಮ್ಮ ದೇಶಕ್ಕಾಗಿ ನಾವು ಏನೇನು ಮಾಡುತ್ತೇವೆ, ನಮ್ಮ ದೇಶ ಮತ್ತು ನಮ್ಮ ರೈತರಿಗಾಗಿ ನಾವು ಯಾವುದೇ ಕಾರಣಕ್ಕಾಗಿ ನಾವು ನಿಜವಾಗಲೂ ತ್ಯಾಗವನ್ನೇ ಮಾಡುತ್ತೇವೆ. ಬೇಕಾದರೆ ಈಗ ನೋಡಿ ನಮ್ಮ ದೇಶದ ಜನರ ಮೇಲಿರುವ ಪ್ರೀತಿಗೋಸ್ಕರ ನನ್ನ ಒಂದು ಹಲ್ಲನ್ನೇ ತೆಗೆದುಬಿಡುತ್ತೇನೆ, ನಿಮ್ಮ ದೇಶದಲ್ಲಿ ಈ ರೀತಿ ಇದ್ದೀರಾ ನೀವು ಹೇಳಿ" ಎಂದು ಹೇಳಿದರು. ಆಗ ಅವರು ಆ doctor ಅನ್ನು ಕರೆದರು, ನಮ್ಮ politician ತಮ್ಮ ಹಲ್ಲು ತೆಗೆಯುವುದಕ್ಕೆ ಒಳ್ಳೆಯ plan ಮಾಡಿದ್ದಾರೆಂದು doctor ಹುಷಾರಾಗಿದ್ದರು. doctor ಬಂದ ತಕ್ಷಣ ಇವರು ಹೇಳಿದ ಪ್ರಕಾರ ಅವರು ಕೆಟ್ಟು ಹೋಗಿರುವ ಹಲ್ಲನ್ನು ತೆಗೆದರು.

"ನೋಡಿದಿರಾ ನಾನು ಹೇಳಿದ ಮಾತಿಗೆ ಬೆಲೆ ಕೊಟ್ಟು ಹಲ್ಲು ತೆಗೆದುಬಿಟ್ಟೆ ಆ ರೀತಿ ನಿಮ್ಮ ದೇಶ ಭಕ್ತಿ ನಿಮಗಿದ್ದರೆ ನೀವು ಈ ರೀತಿ ಮಾಡುವುದಕ್ಕಾಗುತ್ತದೆಯೆ? ನೋಡಿ, ನಾನು ಇಷ್ಟು ನೋವು ಇಟ್ಟುಕೊಂಡು ಈ ಹಲ್ಲು ಕಿತ್ತಿಸಿಕೊಂಡೆ" ಎಂದು ಹೇಳಿದರು. foreign ನಿಂದ ಬಂದವರು ಗೌರವಕೊಸ್ಕರ ಏನು ಮಾಡಿದರು ಎಂದರೆ, "ನೀವು ನಿಮ್ಮ ಒಂದು ಹಲ್ಲು ತೆಗೆದಿರಿ ನೋಡಿ ನಾನು ಎರಡು ಹಲ್ಲು ತೆಗೆಯುತ್ತೇನೆ" ಎಂದು ತನ್ನಲ್ಲಿ ಇರತಕ್ಕಂಥ ಎರಡು ಒಳ್ಳೆಯ ಹಲ್ಲುಗಳನ್ನು ತೆಗೆದು ಬಿಸಾಕಿ ಹೋದರು. ಇವನಿಗೆ ಬಾರಿ ಸಂತೋಷ. ಅವನು ನಿಜವಾದ ಹಲ್ಲನ್ನು ಕಿತ್ತು ಹಾಕಿ ನೋವು ಇಟ್ಟುಕೊಂಡು ಹೊರಗೆ ಹೋದ, ಇವರು ಕೆಟ್ಟು ಹೋಗಿರುವ ಹಲ್ಲು ಕಿತ್ತುಕೊಟ್ಟು ನನ್ನ ದೇಶಭಕ್ತಿ ಹೇಗಿದೆ ನೋಡಿ ಎಂದನಂತೆ. ಆ ರೀತಿಯಾಗಿ ಸುಮ್ಮನೆ ರೈತರ ಮೇಲೆ ಹೇಳಿ ಇವರು budget plan ಮಾಡಿದರು. ಏನು ಪ್ರಯೋಜನ? ನಿಜವಾಗಲೂ ಇವರು ನೋವು ಇಟ್ಟುಕೊಂಡು ಬಂದಿರುವವರು, ಇವರು politician budget ಮಾಡಿದ್ದಾರೆ. ಉದಾಹರಣೆಯಾಗಿ ಹೇಳುವುದಾದರೆ, ಗಂಗಾ ಕಲ್ಯಾಣ ಯೋಜನೆಗೆ additional budget ಕೇಳುತ್ತಾರೆ. ಎಲ್ಲರಿಗೂ ಗೊತ್ತಿದೆ bore well ಹಾಕುವುದಿಲ್ಲ current ಕೊಡುವುದಿಲ್ಲ motor ಬರುವುದಿಲ್ಲ, ಕೊಟ್ಟಿರುವ ಹಣವನ್ನೇ ಇನ್ನೂ ಖರ್ಚು ಮಾಡಿಲ್ಲ. ಇಂಥದ್ದಕ್ಕೂ ಕೂಡ ಇವರು ಅಡಿಷನಲ್ ಬಜೆಟ್‌ನಲ್ಲಿ ಹಣ ಕೇಳುತ್ತಾರೆಂದರೆ ಮತ್ತೆ ಅಧಿಕಾರಿಗಳು ಲೂಟಿ ಮಾಡಿಕೊಂಡು ತಿನ್ನುವುದಕ್ಕೋಸ್ಕರವೇ ಅಥವಾ ಜನರಿಗೆ ಅನುಕೂಲ ಮಾಡುವುದಕ್ಕೋಸ್ಕರವೇ ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ 15 ಬೋರ್ ವೆಲ್‌ಗಳನ್ನು ಹಾಕುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಆದರೆ, ಅಲ್ಲಿ ರೈತರೇ ಇಲ್ಲ. ಇದನ್ನು ಕೊಟ್ಟು ಒಂದು ವರ್ಷವಾಗಿದೆ, ಇದುವರೆಗೂ ಅದರ ಬಗ್ಗೆ ಯಾರೂ ಮಾಡಿಲ್ಲ, ಚಿಂತೆಯನ್ನೇ ಮಾಡಿಲ್ಲ. ನಾನು ಒಂದು ಪತ್ರ ಬರೆದು ಈಗಾಗಲೇ ಸ್ಯಾಂಕ್ಷನ್ ಆಗಿರುವ ಬೋರ್‌ವೆಲ್‌ಗೆ ಯಾರೂ ಫಲಾನುಭವಿಗಳಿಲ್ಲ, ಮತ್ತೆ ಮೊದಲು ನಮಗೆ 10 ಬೋರ್‌ವೆಲ್‌ಗೆ ಅನುಮತಿ ಕೊಟ್ಟಿದ್ದೀರಿ, ಅದಕ್ಕೂ ಕೂಡ ರೈತರ್ಯಾರು ಇರಲಿಲ್ಲ. ಆದ್ದರಿಂದ, ಇದನ್ನು ಅಕ್ಕಪಕ್ಕದಲ್ಲಿರುವಂಥವರಿಗೆ ಕೊಡಿ, ಮತ್ತೆ ಈಗ 15 ಬೋರ್‌ವೆಲ್‌ಗಳನ್ನು ಏತಕ್ಕೆ

ಕೊಟ್ಟಿದ್ದೀರೆಂದು ಮತ್ತು ಇದನ್ನು ಕೊನೇ ಪಕ್ಷ ಕುಡಿಯುವ ನೀರಿಗೋಸ್ಕರವಾದರೂ ಉಪಯೋಗ ಮಾಡಬೇಕೆಂದು ನಾನು ಕಾಗದ ಬರೆದು 2 ತಿಂಗಳಾಗಿದೆ, ಇದುವರೆಗೂ ತಂದಿದ್ದಾರೆ. ಇದೆಂಥ ನ್ಯಾಯ ನೋಡಿ. ಇದರ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಿ. ಅಡಿಷನಲ್ ಬಜೆಟ್‌ನಲ್ಲಿ ಮತ್ತೆ ಕೊಟ್ಟರೆ ಸಂತೋಷ. But who is utilizing it? No body. It is a criminal waste. ಜೊತೆಗೆ rehabilitation for employees of BGML and special package was approved for Kolar district ಎಂದು 5 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಇದನ್ನು 5 ಸಾವಿರ ನೌಕರರಿಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇದು ಎಸ್‌ಸಿ:ಎಸ್‌ಟಿ ನೌಕರರಿಗೆ ಸೇರಬೇಕಾಗಿದೆ. ಆದರೆ, ಅಲ್ಲಿ 5 ಸಾವಿರ ಜನ ಕೂಡ ಎಸ್‌ಸಿ:ಎಸ್‌ಟಿ ನೌಕರರೆ? ನಿಮಗೆ ಯಾರು ಲೆಕ್ಕ ಮಾಡಿ ಈ ರೀತಿಯ ಐಡಿಯಾ ಕೊಟ್ಟರು? Re habilitation for 5 thousand employees of BGML. 5 ಸಾವಿರ ಜನರು ಎಸ್‌ಸಿ:ಎಸ್‌ಟಿ ನೌಕರರಾಗಿದ್ದಾರೆಯೇ? ಅದಕ್ಕೆ ಕೊನೆಗೆ ಅಡಿಷನಲ್ ಬಜೆಟ್‌ನಲ್ಲಿ ಏನು ಮಾಡಿದ್ದೀರೆಂದರೆ, 1500 ನೌಕರರಿಗೆ ಸದ್ಯಕ್ಕೆ ಈಗ ಕೊಡುತ್ತೇವೆಂದು ಹೇಳಿದ್ದೀರಿ. ಆದ್ದರಿಂದ ಉಳಿದ ಎಸ್‌ಸಿ:ಎಸ್‌ಟಿ ಮತ್ತು ಬೇರೆ ಜಾತಿಯ ನೌಕರರು ಏನು ಮಾಡಬೇಕು? What is the meaning of rehabilitation? From the past five years, the entire BGML employees are suffering without any salary, without any benefit. ಅವರಿಗೆ ನೀವು ಮಾಡಿರುವ ಕೆಲಸ ಹೇಗಿದೆ ನೋಡಿ? ಇದು ಸತ್ಯಾಂಶದ ಮತ್ತು ಧರ್ಮ ನೀತಿ ಕೆಲಸವೇ? ಇದನ್ನು ಯಾರು ಪ್ರಿಪೇರ್ ಮಾಡಿದರು? Who is the officer who prepared this? I am from that constituency I know very well what is happening there. From the past six years, Karnataka Government has never bothered about BGML. ನಾವು ಚಿನ್ನ ಕೊಟ್ಟಿರುವವರೆಂದು ಮಾನ್ಯ ಶ್ರೀರಾಮರೆಡ್ಡಿಯವರು ಈಗ ತಾನೇ ಹೇಳಿದರು. ಆದ್ದರಿಂದ, ಚಿನ್ನವನ್ನು ತಿಂದು ಬಿಟ್ಟು ಜಾಲಿಯಾಗಿ ಕುಳಿತಿರುವ ಸರ್ಕಾರ ಇದಾಗಿದೆ. ನಾವೇ ಚಿನ್ನ ಕೊಟ್ಟಿರುವುದು, ಈಗ ಬಿಜಿಎಂಎಲ್ ಮುಚ್ಚಿದ ಮೇಲೆ ಅಲ್ಲಿ 200 ಎಕರೆ ಜಾಗ ದೊರೆಯುತ್ತಿದೆ. ಈಗ ಕೋಟಿಗಟ್ಟಲೆ ದುಡ್ಡು ಹಾಕಿ ಜಾಗ

ತೆಗೆದುಕೊಳ್ಳುವುದಕ್ಕೆ ಇಲ್ಲಿ, ಅಲ್ಲಿ ಹೋಗೋಣವೆಂದು ಹೇಳುತ್ತಿದ್ದೀರಿ. ಆದರೆ, ಇಲ್ಲಿ ಉಚಿತವಾಗಿ ಲ್ಯಾಂಡ್ ಸಿಗುತ್ತಿದೆ, ಇದನ್ನು ನೀವು ಏತಕ್ಕಾಗಿ ತೆಗೆದುಕೊಳ್ಳಬಾರದು? why you have not moved Government of India to take over the land? ಏಕೆಂದರೆ, ಕಮಿಷನ್ ಸಿಗುವುದಿಲ್ಲವೆಂದು ಮತ್ತು ದುಡ್ಡು ಬರುವುದಿಲ್ಲವೆನ್ನತಕ್ಕಂಥದ್ದು ನಿಮ್ಮ ಚಿಂತನೆಯಾಗಿದೆ. ಆದರೆ, ಇದಕ್ಕೆ ಅಡಿಷನಲ್ ಬಜೆಟ್ ಬೇರೆ ಮಾಡುತ್ತಿದ್ದೀರಿ. 5 ಸಾವಿರ ನೌಕರರಿಗೆ ಪುನರ್‌ವ್ಯವಸ್ಥೆ ಮಾಡಿಕೊಡುತ್ತೇವೆಂದು ದೊಡ್ಡದಾಗಿ ಮಾತನಾಡಿದ್ದೀರಿ. ಆದರೆ, ಅಲ್ಲಿ 5 ಸಾವಿರ ಜನರಿಗೆ ಎಲ್ಲಿ ಕೊಡುವುದಕ್ಕಾಗುತ್ತದೆ? ಎಸ್‌ಸಿ:ಎಸ್‌ಟಿ ಜನರಿಗೆ ಕೊಡಬೇಕಾಗಿರತಕ್ಕಂಥ ದುಡ್ಡನ್ನು ಬೇರೆಯವರಿಗೆ ಕೊಡುವುದಕ್ಕಾಗುತ್ತದೆಯೇ? ಇಲ್ಲಿ ತಪ್ಪಾಗಿದೆ, ಸರಿಪಡಿಸಿಕೊಳ್ಳಿ, ನಿಮ್ಮ ಬಜೆಟ್‌ಗೆ ನಾನು ಕೋ–ಆಪರೇಟ್ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ನೀವು ಕೊಟ್ಟಿರತಕ್ಕಂಥ ಸಬ್ಜೆಕ್ಟ್ ನನ್ನ ಕಣ್ಣು ಮುಂದೆ ಇದೆ. ಆ ಜಿಲ್ಲೆಯಲ್ಲಿ 5 ಸಾವಿರ ನೌಕರರಿಗೆ ರೀಹ್ಯಾಬಿಲಿಟೇಶನ್ ಮಾಡುತ್ತೇವೆಂದು ಹೇಳಿರತಕ್ಕಂಥದ್ದು ತಪ್ಪು. ಆದ್ದರಿಂದ ಇದರ ಮೇಲೆ ಎಕ್ಸ್‌ಪ್ಲೇನ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಗಡಿ ಪ್ರದೇಶದಲ್ಲಿರತಕ್ಕಂಥವರೆಲ್ಲಾ ಕನ್ನಡ ಓದಬೇಕೆಂದು ಹೇಳುತ್ತಾರೆ. ಮತ್ತೆ ಇವತ್ತಿನ ದಿವಸ ಬೋರ್‌ವೆಲ್‌ಗಳನ್ನು ಕೊರಿಯುವುದಕ್ಕೆ ಆಗುತ್ತಿಲ್ಲವೆಂದರೆ, ತಮಿಳುನಾಡಿನವರೇ ಇವತ್ತು ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಈಗಾ ಕಾವೇರಿ ಗಲಾಟೆ ನಡೆಯುತ್ತಿರುವುದರಿಂದ ನಾವು ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಒಂದು ತಿಂಗಳಿಂದ ನಮ್ಮ ಜಿಲ್ಲೆಯ ಡಿ.ಸಿ.ಯವರು ರಿಗ್‌ಗಳನ್ನು ಹುಡುಕುತ್ತಿದ್ದಾರೆ. ಅವರು ಇನ್ನೂ ಒಂದು ತಿಂಗಳು ಹುಡುಕಿದರೂ ರಿಗ್ ಬರುವುದಿಲ್ಲ. what is the other alternative? ಗಡಿ ಪ್ರದೇಶದಲ್ಲಿರತಕ್ಕಂಥವರೆಲ್ಲಾ ಕನ್ನಡ ಓದಬೇಕೆಂದು ಹೇಳುತ್ತೀರಿ. ಆದರೆ, ಕನ್ನಡ ಅಂಡ್ ಕಲ್ಚರ್ ಇಲಾಖೆಗೆ ನೀವು ಒದಗಿಸಿರುವ ಹಣ ನೋಡಿ? 50 ಸಾವಿರ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ಪೆಪ್ಪರ್‌ಮೆಂಟ್, ಮಿಠಾಯಿಗೆ ಕೊಡುವ ರೀತಿಯಲ್ಲಿ ಕೊಟ್ಟಿದ್ದೀರಿ. ಆದರೆ, ಗಡಿ ಪ್ರದೇಶದ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತೀರಿ. ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ವರದಿ ಕೊಟ್ಟು ಗಡಿ ಪ್ರದೇಶದಲ್ಲಿರುವ ಕನ್ನಡಿಗರ ಅಭಿವೃದ್ಧಿಗೆ ಏನು ಮಾಡಬೇಕೆಂದು ಮತ್ತು ಕನ್ನಡ ಸಂಸ್ಕೃತಿಯನ್ನು ಯಾವ

ರೀತಿಯಾಗಿ ಅಭಿವೃದ್ಧಿ ಮಾಡಬೇಕೆಂಬುದರ ಬಗ್ಗೆ ವರದಿ ಕೊಟ್ಟಿದ್ದರು. ನಾನು ಇಲ್ಲಿ ಒಂದ ಪದ ಇಂಗ್ಲೀಷ್ ಮಾತನಾಡಿದರೆ, ಕನ್ನಡದಲ್ಲಿ ಮಾತನಾಡಿ ಎಂದು ಮಾನ್ಯ ವಾಟಾಳ್ ನಾಗರಾಜ್‌ನವರು ಹೇಳುತ್ತಾರೆ. ಅವರು ಹೇಳತಕ್ಕಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತೆ ಅವರು ಹೇಳಿದ್ದಕ್ಕೋಸ್ಕರ ನಾನು ಕನ್ನಡದಲ್ಲೇ ಮಾತನಾಡುತ್ತೇನೆ. ಆದರೆ, ನನ್ನ ತರಹ ನನ್ನ ಜನ ಮಾತನಾಡಬೇಕು ಮತ್ತು ಓದಬೇಕು. ಆದರೆ, ನಮ್ಮ ಊರಿನಲ್ಲಿ ನಾನು ಸುವರ್ಣ ಕರ್ನಾಟಕವನ್ನು ನೋಡಿಲ್ಲ. ಇಲ್ಲಿ ಏನಾಗಿದೆ ಎಂದರೆ, ಅಧಿಕಾರಿಗಳು ಬಂದು ದೀಪ ಹಚ್ಚಿ ನಮ್ಮ ಹೆಸರುಗಳನ್ನು ಹೇಳುವುದು ಸುವರ್ಣ ಕರ್ನಾಟಕ ಕಾರ್ಯಕ್ರಮವೇ? ಇದರ ಬಗ್ಗೆ ಯಾರು ಮಾತನಾಡುವುದು? ಸುವರ್ಣ ಕರ್ನಾಟಕ ಕಾರ್ಯಕ್ರಮವಿರಲಿ, ಆದರೆ, ಗಡಿ ಪ್ರದೇಶದಲ್ಲಿನ ಗತಿಗಳು ಏನಾಗಿವೆ ಎಂಬುದನ್ನು ನೋಡಿ. ನೀವು ನಮಗೆ ಇನ್ನೂ 10 ಕೋಟಿ ರೂಪಾಯಿ ಕೊಟ್ಟು ಕೆ.ಜಿ.ಎಫ್‌ನಲ್ಲಿರತಕ್ಕಂಥ ಜನಗಳಿಗೆ ಅಲ್ಲಲ್ಲಿ ಟ್ಯೂಶನ್ ಕೊಟ್ಟು ಅವರಿಗೆಲ್ಲಾ ಕನ್ನಡ ಕಲಿಸಿಕೊಡಿ ಎಂದು ಹೇಳಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ರಾಜೇಂದ್ರನ್‌ರವರು ಗಡಿ ಭಾಗದಿಂದ ಬಂದಿದ್ದಾರೆ. ನಾನು ವರದಿ ಕೊಟ್ಟು ಎಷ್ಟು ವರ್ಷಗಳಾಗಿವೆ ಎಂದು ಅವರು ಕೇಳಿದರು. ನಾನು ಗಡಿನಾಡು ವರದಿ ಕೊಟ್ಟು 7 ವರ್ಷವಾಯಿತು. ಕನ್ನಡ ಸಂಸ್ಕೃತಿ ಇಲಾಖೆಗೆ ಭಿಕ್ಷೆ ಕೊಟ್ಟಂತೆ 5 ಲಕ್ಷ, 3 ಲಕ್ಷ ರೂಪಾಯಿ ಕೊಟ್ಟಿದ್ದಾರೆಂದು ಅವರು ಈಗಾಗಲೇ ಹೇಳಿದರು. ಆದರೆ, ಪ್ರತಿ ಸರ್ಕಾರಗಳು ಕನ್ನಡ ಸಂಸ್ಕೃತಿ ಇಲಾಖೆಯನ್ನು ಕಡೆಗಣಿಸಿದ್ದಾರೆ. ಇವತ್ತಿನ ದಿವಸ ಕನ್ನಡ ಸಂಸ್ಕೃತಿ ಇಲಾಖೆ ಬಹಳ ವಿಶಾಲವಾದಂಥ ಒಂದು ಇಲಾಖೆಯಾಗಿದೆ. ಮತ್ತೆ ಇದರ ಅವಶ್ಯಕತೆ ಇಡೀ ಕರ್ನಾಟಕಕ್ಕೆ ಹೆಚ್ಚು ಇದೆ. ಆದ್ದರಿಂದ ಈ ಇಲಾಖೆಗೆ ಹೆಚ್ಚಿನ ಹಣ ಮತ್ತು ಬೆಂಬಲ ಕೊಡಬೇಕಾಗುತ್ತದೆ. ಮಾನ್ಯ ಮಹದೇವ್ ಪ್ರಸಾದ್‌ರವರು ಆ ಇಲಾಖೆಯ ಮಂತ್ರಿಗಳಾಗಿದ್ದಾರೆ. ನಿನ್ನೆ ದಿವಸ ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಗಡಿನಾಡಿನ ಬಗ್ಗೆ ಒಂದು ಒಳ್ಳೆಯ ಸಮಾರಂಭವಾಯಿತು. ಇದು ನಿಜವಾಗಿಯೂ ಸಂತೋಷಪಡತಕ್ಕಂಥ ವಿಚಾರ. ಮಾನ್ಯ ಸಚಿವರು ಒಳ್ಳೆಯ ಕೆಲಸ ಮಾಡುತ್ತಾರೆ ಮತ್ತೆ ಕೆಲಸ ಮಾಡಬೇಕೆಂಬ ಉತ್ಸಾಹ ಸಹ ಇದೆ. ಆದರೆ, ಅವರ ಜೋಳಿಗೆಯಲ್ಲಿ

ದುಡ್ಡಿಲ್ಲ. ಆ ಇಲಾಖೆ ಕೊಟ್ಟಿರತಕ್ಕಂಥದ್ದು ಸರಿಯಿಲ್ಲ. ತಮಗೆ ಬೇಕಾದವರೆಲ್ಲರೂ ಹಂಚಿಕೊಂಡಿದ್ದೇವೆ. ಸದ್ಯಕ್ಕೆ ಮಂತ್ರಿಯಾಗಿರತಕ್ಕಂಥದ್ದೇ ಸಾಕು, ಮತ್ತೆ ಹಣ ಬೇಕೆಂದು ಅವರಿವರನ್ನು ಕೇಳುವುದಕ್ಕೆ ಹೋಗಿ ಮತ್ತೆ ಪಜೀತಿ ಆಗಬಹುದೆಂದು ಎಷ್ಟು ಕೊಟ್ಟಿದ್ದಾರೆಯೋ ಅಷ್ಟೇ ಹೋಗಲೆಂದು ಮತ್ತೆ ಏನಾದರೊಂದು ಕೊಡಲೆಂದು ಸುಮ್ಮನಿದ್ದಾರೆ. ನಿಮಗೆ ಒಳ್ಳೆಯ ಇಲಾಖೆ ಕೊಟ್ಟಿದ್ದಾರೆ ನೀವು ಚೆನ್ನಾಗಿ ಕೆಲಸ ಮಾಡಿದರೆ ಒಳ್ಳೆಯ ಹೆಸರು ಬರುತ್ತದೆಂದು ಚಾಮರಾಜನಗರದಲ್ಲಿ ಅವರಿಗೆ ನಾನು ಹೇಳಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಸಾಮಾನ್ಯವಾಗಿ ಈ ಖಾತೆಯನ್ನು ಮಹಿಳೆಯರಿಗೆ ಕೊಡಲಾಗುತ್ತಿತ್ತು. ಆದರೆ, ಇದನ್ನು ಇವರಿಗೆ ಏಕೆ ಕೊಟ್ಟರೆಂದು ನಾವು ಮಾತನಾಡಿಕೊಳ್ಳುತ್ತಿದ್ದವು.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:– ಅವರು ಕಾರ್ಯಕ್ರಮದಲ್ಲಿ ಏನೇನು ಹೇಳಬೇಕಾಗುತ್ತೋ ಅವೆಲ್ಲವನ್ನು ಹೇಳಿದ್ದಾರೆ. ಆದರೆ, ಸದನದಲ್ಲಿ ಬಂದು ಒಳ್ಳೆಯ ಮಾತನ್ನು ಹೇಳುತ್ತಿರುವುದರಿಂದ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಹಿಳೆಯರಿಗೆ ಕೊಡಬೇಕಾಗಿರತಕ್ಕಂಥದನ್ನು ನಿಮಗೆ ಕೊಟ್ಟಿರುವ ಬಗ್ಗೆ ನಾನು ಹೇಳುತ್ತಿಲ್ಲ. ಸಂಜೆಯ ಕಾರ್ಯಕ್ರಮದಲ್ಲಿ ಏನು ಹೇಳಿದ್ದೇನೆಂಬುದನ್ನು ಹೇಳಿ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:– ಮಾನ್ಯ ಉಪಾಧ್ಯಕ್ಷರೇ, ಜಾನಪದ ಜಾತ್ರೆ ಕಾರ್ಯಕ್ರಮ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯುತ್ತಿತ್ತು. ಮೊನ್ನೆ ದಿವಸ ಇದನ್ನು ಚಾಮರಾಜನಗರಕ್ಕೆ ತೆಗೆದುಕೊಂಡು ಹೋಗಿ ಅಲ್ಲೂ ಒಂದು ಕಾರ್ಯಕ್ರಮ ಮಾಡಿ ನಮ್ಮ ಕನ್ನಡ ಚಳುವಳಿಯ ನಾಯಕರಾಗಿರುವ ಶೀ ವಾಟಾಳ್ ನಾಗರಾಜ್‌ರವರು ಹಿಂದೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ಏನೊಂದು ಕನ್ನಡ ರಾಜ್ಯೋತ್ಸವ ಆಚರಿಸುತ್ತಿದ್ದ ಹಳೆಯ ನೆನಪುಗಳ ಬಗ್ಗೆ ಮೆಲುಕುಹಾಕುವ ರೀತಿಯಲ್ಲಿ 3 ಗಂಟೆಗಳ ಕಾಲ ಅವರು ಅಲ್ಲಿ ಕುಳಿತು ಆ ಕಾರ್ಯಕ್ರಮವನ್ನು ಆನಂದಿಸಿದ್ದಾರೆ. ಹಾಗಾಗಿ, ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಬಗ್ಗೆ ವಿಶೇಷವಾದಂಥ ಗಮನ ಬಂದಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ಈಗ ಬಹಳ ಗಂಭೀರವಾದಂಥ ಪರಿಸ್ಥಿತಿ ಇದೆ. ಆದ್ದರಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಡೆ ಮಾನ್ಯ ಹಣಕಾಸಿನ ಸಚಿವರು ಸ್ವಲ್ಪ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಮ್ಮೆಲ್ಲರಿಗೂ ಗೌರವ ತರತಕ್ಕಂಥ ಇಲಾಖೆಯಾಗಿದೆ. ಮತ್ತೆ ರಾಜ್ಯದ ಎಲ್ಲರ ಬಗ್ಗೆ ಮಾತನಾಡತಕ್ಕಂಥ ಇಲಾಖೆ ಸಂಸ್ಕೃತಿ ಇಲಾಖೆಯಾಗಿದೆ. ಇದರಲ್ಲಿ ಬರತಕ್ಕಂಥ ಸಂಸ್ಕೃತಿ, ಸಾಹಿತ್ಯ, ಇತಿಹಾಸ, ಸಾಹಿತಿಗಳು, ಕವಿಗಳು, ಬರಹಗಾರರು ಮತ್ತು ಪತ್ರಕರ್ತರು ಅಂದರೆ, ಇಡೀ ರಾಜ್ಯವೇ ಕೇಂದ್ರಿಕೃತವಾದಂಥ ಒಂದು ಇಲಾಖೆಯಾಗಿದೆ. ಇದಕ್ಕೆ ಅವರು ಒಳ್ಳೆಯ ಮಂತ್ರಿಗಳಾಗಿದ್ದಾರೆ. ಮತ್ತೆ ಅವರು ಕೆಲಸ ಕೂಡ ಚೆನ್ನಾಗಿ ಮಾಡುತ್ತಾರೆ. ನಮ್ಮ ಗಡಿನಾಡು ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ನಿನ್ನೆ ನಡೆದಂಥ ಸಮಾರಂಭ ಆಗಿದೆ. ಮತ್ತೆ ನಾವೆಲ್ಲರೂ ಯಾವುದೇ ಪಕ್ಷ ಭೇದ ಮರೆತು ಸೇರಿರತಕ್ಕಂಥದ್ದು ಬಹಳ ಚೆನ್ನಾಗಿತ್ತು. ಆದರೆ, ಆ ಒಂದು ಇಲಾಖೆಗೆ ಹೆಚ್ಚಿನ ಹಣಕಾಸು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸುವರ್ಣ ಕರ್ನಾಟಕ ವಿಫಲವಾಯಿತೆಂದು ನಾವೆಲ್ಲರೂ ಹೇಳಿದ್ದೆವು...

ಡಾ|| ಕೆ.ಅನ್ನದಾನಿ:- ಮಾನ್ಯ ಉಪಾಧ್ಯಕ್ಷರೇ, ಈಗ ಜಾನಪದ ಜಾತ್ರೆ ಮಾಡತಕ್ಕಂಥದ್ದು ಒಳ್ಳೆಯ ಕಾರ್ಯಕ್ರಮ. ಸುವರ್ಣ ಕರ್ನಾಟಕದ ಅವಧಿಯಲ್ಲಿ ವಿಶೇಷವಾಗಿ ಒಂದು ಒಳ್ಳೆಯ ಕಾರ್ಯಾಕ್ರಮವನ್ನು ನಮ್ಮ ಕರ್ನಾಟಕ ಸರ್ಕಾರ ಕೊಡುತ್ತಿದೆ. ಮತ್ತೆ ಇದರ ಬಗ್ಗೆ ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸತಕ್ಕಂಥ ವಿಚಾರ ಕೂಡ ಆಗಿದೆ. ಆದರೆ, ಬೆಂಗಳೂರಿನಲ್ಲಿ ಒಂದೇ ಕಡೆ ಜಾನಪದ ಜಾತ್ರೆಯನ್ನು ಮಾಡತಕ್ಕಂಥ ಸಂದರ್ಭ ಇತ್ತು. ಆದರೆ, ಅದನ್ನು ಬದಲಾವಣೆ ಮಾಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರತ್ಯೇಕವಾದ ಸಚಿವರು ಬಂದ ಮೇಲೆ ಅವರ ಜಿಲ್ಲೆಯಲ್ಲಿ ಮೊದಲು ಜಾನಪದ ಜಾತ್ರೆಯನ್ನು ಮಾಡಿಕೊಂಡಿರತಕ್ಕಂಥದ್ದು ಸಂತೋಷದ ವಿಚಾರ. ಈ ವರ್ಷವೆಲ್ಲಾ ನಾವು ಸುವರ್ಣ ಕರ್ನಾಟಕ ಕಾರ್ಯಕ್ರಮವನ್ನು ಆಚರಿಸುತ್ತಿರುವುದರಿಂದ, ಕರ್ನಾಟಕದ 27 ಜಿಲ್ಲೆಗಳಲ್ಲಿಯೂ ಕೂಡ ಈ ಜಾನಪದ ಜಾತ್ರೆ ಕಾರ್ಯಕ್ರಮವನ್ನು ಆಚರಿಸಿದರೆ ತುಂಬಾ ಚೆನ್ನಾಗಿರುತ್ತದೆ.

ಮತ್ತೆ ಸ್ಥಳೀಯ ಜಾನಪದ ಕಲಾವಿದರಿಗೆ ಹೆಚ್ಚಿನ ಅವಕಾಶವನ್ನು ಕೊಟ್ಟಂತೆ ಕೂಡ ಆಗುತ್ತದೆ. ಕೇವಲ ಬೆಂಗಳೂರಿನಲ್ಲಿಯೇ ಇದನ್ನು ಆಚರಿಸುವುದರಿಂದ ಏನಾಗುತ್ತದೆಂದರೆ, ಅಧಿಕಾರಿಗಳು ಬೇಕಾದಂಥವರಿಗೆ ಸ್ವಲ್ಪ ಮಟ್ಟದ ರಾಜಕಾರಣವನ್ನು ನಮಗಿಂತ ಹೆಚ್ಚಾಗಿ ಮಾಡುವುದಕ್ಕೆ ಕಲಿತುಕೊಂಡಿದ್ದಾರೆ. ಏಕೆಂದರೆ, ಅವರಿಗೆ ಬೇಕಾದಂಥವರನ್ನು ಮತ್ತೆ ಅವರಿಗೆ ಪರಿಚಯವಿರುವ ನಾಲ್ಕು ಜನರನ್ನು ಕರೆದುಕೊಂಡು ಬಂದು ಡ್ರಮ್ ಹೊಡೆಸುವುದು, ಹಾಗೆಯೇ, ಅವರ ಕಡೆಯವರ 5 ಜನರನ್ನು ಕರೆದುಕೊಂಡು ಬಂದು ತಮಟೆ ಹೊಡೆಸತಕ್ಕಂಥ ಕೆಲಸವನ್ನು ಅಧಿಕಾರಿಗಳು ಮಾಡುತ್ತಿದ್ದಾರೆ. ಆದ್ದರಿಂದ, ಈ ಸಂದರ್ಭದಲ್ಲಿ ನನ್ನ ಮನವಿ ಏನೆಂದರೆ ಈಗ ಸುವರ್ಣ ಕರ್ನಾಟಕ ಉತ್ಸವವನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾಡಿದರು. ಈ ಒಂದು ಕಾರ್ಯಕ್ರಮವನ್ನು ಕೂಡ ಮೆಚ್ಚಿಗೆ ವ್ಯಕ್ತಪಡಿಸತಕ್ಕಂಥದ್ದಾಗಿದೆ. ಏಕೆಂದರೆ, ನಮ್ಮ ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ತುಂಬಾ ಚೆನ್ನಾಗಿ ಮಾಡಿದರು. ಆದರೆ, ಇದನ್ನು ಮಾಡಿದಂಥ ಸಂದರ್ಭದಲ್ಲಿ ಕೆಲವು ಅಧಿಕಾರಿಗಳು ಅಲ್ಲಲ್ಲಿ ಏನೇನು ಭ್ರಷ್ಟಾಚಾರ ಮಾಡಿದ್ದಾರೆಂಬುದು ಸ್ವಲ್ಪ ಹೊರಗಡೆ ಬಂದರೆ ಸೂಕ್ತ. ಏಕೆಂದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಂದ ತಕ್ಷಣವೇ ಇಡೀ ಕರ್ನಾಟಕದ ಇತಿಹಾಸ, ಸಂಸ್ಕೃತಿ, ಭಾಷೆ, ನೆಲ, ಜಲವನ್ನು ರಕ್ಷಣೆ ಮಾಡತಕ್ಕಂಥ ವಿಚಾರ ಮತ್ತೆ ಇದನ್ನು ಮಾಡತಕ್ಕಂಥ ಸಂಪೂರ್ಣ ಹೊರೆ ಹೊರಬೇಕಾಗಿರತಕ್ಕಂಥ ಜವಾಬ್ದಾರಿ ನಮಗೆ ಇರುತ್ತದೆ.

ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ, ಕರ್ನಾಟಕದ ಬಗ್ಗೆ ನಾವು ಇಷ್ಟು ಮಾತನಾಡಲಿಲ್ಲವೆಂದರೆ ಹೇಗೆ? ನಾನು ಮಾತನಾಡುತ್ತಿದ್ದೇನೆ.

ಉಪಾಧ್ಯಕ್ಷರು:– ಅವರು ಮಾತನಾಡಲಿ, ಬರೀ ಅದರ ಬಗ್ಗೆ ಹೇಳಿದರೆ ಹೇಗೆ?

ಡಾ॥ ಕೆ.ಅನ್ನದಾನಿ:– ಅವರು ಮಾತನಾಡಲಿ ಸರ್. ಒಂದು ನಿಮಿಷ, ನಾನು ಮಾತನಾಡಿ ಮುಗಿಸಿಬಿಡುತ್ತೇನೆ. ಅವರು ಅಲ್ಲಿ ಹೇಳುತ್ತಾರೆ, ನಾವು ಮೂರು ಸಾವಿರ ಡೊಳ್ಳುಕುಣಿತದವರನ್ನು ಕರೆಸಿ ಕುಣಿಸಿದ್ದೇವೆಂದು ಹೇಳುತ್ತಾರೆ. ಇಡೀ ಸ್ಟೇಡಿಯಂನಲ್ಲಿ ಮೂರು ಸಾವಿರ ಜನರನ್ನು ಸೇರಿಸುವುದಕ್ಕಾಗುವುದಿಲ್ಲ.

ಒಂದು ಕಡೆ ತಾಳ ಬಡಿಯುವವರು, ಯಕ್ಷಗಾನದವರು ನಾಲ್ಕು ಸಾವಿರ, ಆ ಲಿಸ್ಟ್ ನೋಡಿದರೆ ಹೇಗೇಗೆ ಇದೆ ನೋಡಿ ಗೊತ್ತಾಗುತ್ತದೆ. ಮೂರು ಸಾವಿರ ಜನರು ಇದ್ದರೆ? 300 ಜನ ಇದ್ದರೆ, 30 ಜನರು ಇದ್ದರೆ ಎನ್ನುವುದು ಗೊತ್ತಾಗುತ್ತದೆ. ಇಷ್ಟೆಲ್ಲಾ ಇರುವಾಗ, ಅವರವರ ಇಲಾಖೆಯಲ್ಲಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಹಣವನ್ನು ಅಲಾಟ್ ಮಾಡಿಕೊಳ್ಳುವುದನ್ನು ಕಲಿತುಕೊಂಡಿದ್ದಾರೆ. ಮೊನ್ನೆ ನಾನು ಒಂದು ಪುಸ್ತಕವನ್ನು release ಮಾಡಿದೆ. ನನ್ನ ಹತ್ತಿರ ಬರೆಯುವುದಕ್ಕೆ ದುಡ್ಡು ಇಲ್ಲವೆಂದು ಹೇಳಿ, ನಾನು ಮಾತನಾಡಿ ಮುಗಿಸಿ ಬಿಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:- ಬಜೆಟ್ ಮೇಲೆ ಮಾತನಾಡುವುದು ಸಾಕಷ್ಟು ಇದೆ. ಅದರ ಬಗ್ಗೆ ಸೆಪರೇಟಾಗಿ ತಾವು ಮಾತನಾಡಿ. ಬಹಳ ಸಂತೋಷ ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ. ರಾಜೇಂದ್ರನ್‌ರವರೇ ನಿಮ್ಮ ಎರಡು ನಿಮಿಷ ಆಗಿ ಹೋಯಿತು.

ಶ್ರೀ ಎನ್.ರಾಜೇಂದ್ರನ್:- ಮಾನ್ಯ ಉಪಾಧ್ಯಕ್ಷರೇ, ಇಲ್ಲಿ, "A sum of Rs. 478.00 lakhs has been provided in the year 2006-2007 budget for repayment of loan and interest to HUDCO, taken by Karnataka Backward Classes Department Association for the construction of BCM Hostels." ಇದು ಯಾವ Association? Is it SC:ST Association, Backward Classes Association? What is the name of the Association? ಏನಿದು? ಸರ್ಕಾರದಿಂದ ಒಂದು Association ಮಾಡಿದ್ದೀರಾ? Association ಹೆಸರೇ ಇಲ್ಲ. ಅದಕ್ಕೆ ಹಣ ಬಿಡುಗಡೆ ಮಾಡುತ್ತೀರಾ? ಅದಕ್ಕೆ ಇನ್ನಷ್ಟು ದುಡ್ಡು extra ಬೇಕು, Additional ಮಾಡಿ ಕೊಡುತ್ತೀರೆಂದರೆ, ನಾವು ಒಂದು Transparency Act ಅನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ:- ಮಾನ್ಯ ಉಪಾಧ್ಯಕ್ಷರೇ, ಹುಡ್ಕೋ ದಲ್ಲಿ loan ತೆಗೆದುಕೊಂಡು deposit ನಲ್ಲಿಟ್ಟು ಬಡ್ಡಿಯನ್ನು ಸರ್ಕಾರ ಕೊಡುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ, ನಿಮಗೆ ಮಾಹಿತಿ ಇದೆಯೋ ಗೊತ್ತಿಲ್ಲ. ಹುಡ್ಕೋದಿಂದ ಸಾಲವನ್ನು ತೆಗೆದುಕೊಂಡರು. ಅದನ್ನು ಅವರು ಬ್ಯಾಂಕಿನಲ್ಲಿ deposit ಮಾಡಿ ಬಡ್ಡಿಯನ್ನು ತೆಗೆದುಕೊಂಡು ಬಿಟ್ಟರು. ನೀವು ಗ್ಯಾರಂಟಿಯನ್ನು ಕೊಟ್ಟು ಬಿಟ್ಟು ಇವತ್ತು ಅದಕ್ಕೆ ನೀವು repayment ಅನ್ನು ಮಾಡುತ್ತಿದ್ದೀರಿ. ಆ officers ಮೇಲೆ ನೀವು ಕ್ರಮವನ್ನು ಜರುಗಿಸಬೇಕು. Whatever loans drawn from HUDCO, ಆಗಿನ ಎರಡು–ಮೂರು ವರ್ಷಗಳಲ್ಲಿ ಅದು utilize ಆಗಿಲ್ಲ. ಅವರು ಆ ಹಣದ ಮೇಲೆ 5–6% interest ಅನ್ನು ತೆಗೆದುಕೊಂಡು, ನಾವು ದುಡಿದಿದ್ದೇವೆಂದು ವೆಹಿಕಲ್‌ಗಳನ್ನು ತೆಗೆದುಕೊಂಡು ಆಫೀಸಿನಲ್ಲಿ ಮೋಜು ಮಾಡು ಕಳೆದು, ಬಡ್ಡಿಯನ್ನು ನಿಮ್ಮ ಕೈಯಿಂದ ಕಟ್ಟಿಸುತ್ತಿದ್ದಾರೆ. Repayment ಅನ್ನು ಸರ್ಕಾರದಿಂದ ಮಾಡಿಸುತ್ತಿದ್ದಾರೆ.

ಶ್ರೀ ಎನ್.ರಾಜೇಂದ್ರನ್:- ಮಾನ್ಯ ಉಪಾಧ್ಯಕ್ಷರೇ, ನೀವು ಯೋಚನೆ ಮಾಡಿ, ಏನು ಇದು ಬಜೆಟ್, ಏನು additional budget, extra payment ನಾವು ಮಾಡಬೇಕು. Blind ಆಗಿ ಒಂದು Association ಬಗ್ಗೆ ಹೇಳುತ್ತಾರೆ. ಇದಕ್ಕೆ ನಾವು support ಮಾಡಬೇಕಾ? ಅದಕ್ಕೆ ಹೆಸರು ಏನು ಇಲ್ಲ. ಯಾವ Association ಇಲ್ಲವೆ? Who is the person to whom you are giving? ಇದು ಸರ್ಕಾರದ ದುಡ್ಡಲ್ಲ, ಜನರ ದುಡ್ಡು. ಸರ್ಕಾರ ನೀವು ಮಾಡುವುದು, ಆ ಕೆಲಸವನ್ನು ನೀವು ಸರಿಯಾಗಿ ಮಾಡಿಲ್ಲವೆಂದರೆ, ನಮ್ಮ ಹತ್ತಿರ ಸಹಾಯ ಕೇಳಿದರೆ, ನಾವು ಏನು ಮಾಡುವುದು, ನೀವು ಯೋಚನೆ ಮಾಡಿ. ಇದರ ಮೇಲೆ ಇನ್ನು ಮಾತನಾಡಿದರೆ ಏನು ಪ್ರಯೋಜನವಿಲ್ಲ. Association ಹೆಸರು ಕೊಟ್ಟಿಲ್ಲ. ಯಾರು ನಿಮಗೆ prepare ಮಾಡಿ ಕೊಟ್ಟಿದ್ದಾರೆ. ಇದರ ಮೇಲೆ ನಾವು ಮಾತನಾಡಿಕೊಂಡು ಹೋದರೆ, half an hour ಆಗಬಹುದು. ಕೊನೆಗೆ ಪ್ರಯೋಜನವೇನು ಇದೆ. No transparency in your Government. You are not crystal clear, you have no bonafide

intention in mind. ನೀವೇ ಯೋಚನೆ ಮಾಡಿ. Malafide ಅಂತ ಹೇಳಿಬಿಟ್ಟರೆ ನಿಮಗೆ ಕೋಪ ಬಂದು ಬಿಡುತ್ತದೆ. I am not mentioning that. Then what is that? ನೀವೇ ಯೋಚನೆ ಮಾಡಿ. ನಮ್ಮ ಬೆಂಬಲ ಪೂರ್ತಿ ಇದಕ್ಕೆ ಇಲ್ಲವೆಂದು ಹೇಳಿ, ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ):– ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಪಂಚಾಯತಿಯಲ್ಲಿ Horticulture Nurseries ಇದೆ. ಅಲ್ಲಿ ಕೆಲವರು 15–20 ವರ್ಷದಿಂದ ಕೆಲಸವನ್ನು ಮಾಡಿಕೊಂಡು ಇದ್ದರು. ಅವರನ್ನು ತೆಗೆದು ಹಾಕಿಬಿಟ್ಟರು, ಏಕೆ ಅಂದರೆ, daily wages ನವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕಾಗಿ Supreme Court ಆದೇಶ ಇದೆ. ಆದರೆ ಇಲ್ಲಿ ಪುನಃ 14.02 ಲಕ್ಷ ರೂ.ಗಳನ್ನು daily wages ನಲ್ಲಿರುವವರಿಗೆ payment ಸಲುವಾಗಿ ಇಟ್ಟಿದ್ದೀರಿ. ಆದರೆ ಕಾನೂನು ಒಬ್ಬೊಬ್ಬರಿಗೆ ಒಂದೊಂದು ರೀತಿ ಇದೆಯೇ? ನಾನು Director, Horticulture ಅವರಿಗೆ ಮಾತನಾಡಿದೆ. ಜಿಲ್ಲಾ ಪಂಚಾಯತಿಯಲ್ಲಿ ಚರ್ಚೆಯಾಯಿತು, resolution ಅನ್ನು ಪಾಸ್ ಮಾಡಿದರು, ಅವರನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು. ಆದರೆ ಇಲ್ಲಿ ಹಣ ಇಟ್ಟಿದ್ದಾರೆ ಅವರಿಗೆ ಯಾವುದು ಕಾನೂನು ಇಲ್ಲ, ಅಲ್ಲಿದ್ದರನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದರೆ, ಹಾಗಾದರೆ ಈ ದುಡ್ಡು ಯಾರಿಗೆ ಕೊಡುವುದಕ್ಕೆ ಇಟ್ಟಿದ್ದೀರಿ? ಅಲ್ಲಿ ಕೊಡುವುದಕ್ಕಾಗದಿದ್ದರೆ, ಯಾವ ಜಿಲ್ಲೆಗೆ ಕೊಡುವುದಕ್ಕಾಗುತ್ತದೆ? ಒಂದೊಂದು ಜಿಲ್ಲೆಗೆ ಒಂದೊಂದು ಕಾನೂನು ಇದೆಯೇ? ಇದನ್ನು ಸರಿಪಡಿಸಿಕೊಳ್ಳಬೇಕು ಇದರ ಬಗ್ಗೆ ಅವರು ಉತ್ತರವನ್ನು ಹೇಳಬೇಕಾಗುತ್ತದೆ. ಮೀನುಗಾರಿಗೆ ಕೊಂಡಿ ರಸ್ತೆ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಮಾತನಾಡಿದರು. 160 ರಿಂದ 170 ಕಿ.ಮೀ.ವರೆಗೆ ಕೊಂಡಿ ರಸ್ತೆ ಎಂದು ತೆಗೆದುಕೊಂಡಿದ್ದಾರೆ. ಅನೇಕ ವರ್ಷಗಳಿಂದ ಆ ರಸ್ತೆಯನ್ನು ದುರಸ್ಥಿ ಮಾಡಿಲ್ಲ, ನಾವು ಬೈಸಿಕೊಳ್ಳುವ ಪರಿಸ್ಥಿತಿ ಬಂದಿದೆ, ನಾವು ಶಾಸಕರ ನಿಧಿಯಿಂದ ನಾವು ರಿಪೇರಿ ಮಾಡಿಸುತ್ತಿದ್ದೇವೆ. ಅದನ್ನು ತೆಗೆದುಕೊಂಡು ಹೋಗಿ ಜಿಲ್ಲಾ ಪಂಚಾಯತಿ ರಸ್ತೆಗೆ ಹಾಕಿಬಿಟ್ಟರು. State sector ನಲ್ಲಿದ್ದ ಕೊಂಡಿ ರಸ್ತೆಗಳು

ಗ್ರಾಮೀಣ ಪ್ರದೇಶಗಳಲ್ಲಿ ಇಲ್ಲ. ಪಟ್ಟಣ ಪ್ರದೇಶಗಳಲ್ಲಿ ಇದೆ. ನೀವು ತೆಗೆದುಕೊಂಡು ಹೋಗಿ ಅಲ್ಲಿ ಹಾಕಿ, ಗ್ರಾಮೀಣ ಪ್ರದೇಶದಲ್ಲಿರುವ ಕೊಂಡಿ ರಸ್ತೆಗಳ ದುರುಸ್ತಿಗೆ ಏನೂ ಹಣ ಕೊಡದಿರುವ ಪರಿಸ್ಥಿತಿ ಬಂತು. ಇಲ್ಲಿ ಅಧಿಕಾರಿಗಳು ಏನೇನು ಹೇಳುತ್ತಾರೆ, ಸರ್ಕಾರ ಅದನ್ನು ಒಪ್ಪಿಕೊಳ್ಳುವಂಥದ್ದು, ಯಾವ್ಯಾವುದು State sector ನಲ್ಲಿ ಇರಬೇಕು, ಯಾವ್ಯಾವುದು ಜಿಲ್ಲಾ ಪಂಚಾಯತಿಗೆ ಹೋಗಬೇಕು ಎನ್ನುವಂಥದ್ದನ್ನು ಆಲೋಚನೆ ಮಾಡದೇ ಮಾಡಿದರೆ, ವಿತರಣೆ ಮಾಡುವಾಗ ಮೀನುಗಾರಿಕೆ ಹೆಚ್ಚು ಕೆಲಸವಾಗುವಂಥದ್ದು ಪಟ್ಟಣ ಪ್ರದೇಶದಲ್ಲಿ, ಮಂಗಳೂರು, ಉಡುಪಿ, ಕಾರವಾರ, ಪೆಣಂಬೂರು ಇಂತಹ ಪ್ರದೇಶದಲ್ಲಿ, ಇವೆಲ್ಲವನ್ನು ಬಿಟ್ಟು ಜಿಲ್ಲಾ ಪಂಚಾಯತಿ ಸೆಕ್ಟರ್‌ನಲ್ಲಿ ಹಾಕಿಬಿಟ್ಟರೆ, ಕೆಲಸವಾಗುವುದಿಲ್ಲ. Last time sanction ಮಾಡಿಸಿಕೊಂಡು ಹೋಗಿರುವ ರಸ್ತೆಯ ದುಡ್ಡನ್ನು ಜಿಲ್ಲಾ ಪಂಚಾಯತಿಗೆ ಹಾಕಿಬಿಟ್ಟರೆ, ಅದೇ ಪರಿಸ್ಥಿತಿ ಇಲ್ಲಿ ಆಗಿದೆ. ಪುನಃ ಈ ಸಲ ಏನು ನೀವು ದುಡ್ಡನ್ನು ಕೊಡುತ್ತಿದ್ದೀರಿ, ದಯವಿಟ್ಟು State sector ನಲ್ಲಿಡಿ, ಇಲ್ಲಿಂದಲೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹೇಳಬೇಕಾಗುತ್ತದೆ. ಪುನಃ ಅದನ್ನು ಜಿಲ್ಲಾ ಪಂಚಾಯತಿಗೆ ಹಾಕಬೇಡಿ, ಆ ರಸ್ತೆಗಳಲ್ಲಿ ನೀವು ಹೋದರೆ, ನಿಮಗೇ ಗೊತ್ತಾಗುತ್ತದೆ. ನಾವು ಯಾವಾಗಲೂ ಬೈಸಿಕೊಳ್ಳುತ್ತಿದ್ದೇವೆ. ಕೇವಲ ಕರಾವಳಿ ರಸ್ತೆಗಳು ಅಲ್ಲ. ಒಳನಾಡು ಮೀನುಗಾರಿಕೆಯಲ್ಲಿಯೂ ಕೊಂಡಿ ರಸ್ತೆಗಳು ಇವೆ. ಅದಕ್ಕೇನಾದರೂ ವ್ಯವಸ್ಥೆಯನ್ನು ಮಾಡಿದ್ದೀರಾ? ನಿಮ್ಮ ಈ ಪೂರಕ ಬಜೆಟ್‌ನಲ್ಲಿಯಾಗಲಿ, ಅಥವಾ ಬಜೆಟ್‌ನಲ್ಲಿಯಾಗಲಿ, ಒಳನಾಡು ಮೀನುಗಾರಿಕೆಯ ಬಗ್ಗೆ ಒಂದು ಶಬ್ಧವನ್ನು ಕೂಡ ಹೇಳಿಲ್ಲ. ಅದರ ಬಗ್ಗೆ ಸ್ವಲ್ಪ ಹೇಳಬೇಕು. ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಹಣಕಾಸು ಆಯೋಗಕ್ಕೆ 60 ಲಕ್ಷ ರೂಪಾಯಿಗಳ ಹಣವನ್ನು ಇಟ್ಟಿದ್ದೀರಿ. ಅವರು ಎಲ್ಲಿಯವರೆಂದರೆ ನಮ್ಮ ಜಿಲ್ಲೆಯವರು, ಅವರು ಮಾಜಿ ಶಾಸಕರು. ಅವರು ಕೊಟ್ಟಿರುವ ಹೇಳಿಕೆಯನ್ನು ಸರ್ಕಾರದ ಪರವಾಗಿ ಓದುತ್ತೇನೆ. ಸರ್ಕಾರಿ ಕಾಮಗಾರಿಕೆಯ ಬಗ್ಗೆ ಮೊನ್ನೆ ಮಾನ್ಯ ಕಾರಜೋಳ್‌ರವರಿಗೆ ಹೇಳಿದೆ. ಗ್ರಾಮೀಣ ಪ್ರದೇಶದ ಅತೀ ಕಡುಬಡವರಿಗೆ ಜಾರಿ ಗೊಳಿಸಿರುವ ಅನ್ನಪೂರ್ಣ ಪಡಿತರ ಚೀಟಿಯ ವ್ಯವಸ್ಥೆ ಬಗ್ಗೆ ಇಲ್ಲಿ ಹಲವಾರು

ಲೋಪದೋಷಗಳು ಕಂಡು ಬಂದಿದ್ದು, ಫೆಬ್ರವರಿ ತಿಂಗಳಲ್ಲಿ 10 ಕೆ.ಜಿ. ಅಕ್ಕಿ ವಿತರಣೆಯಾಗಬೇಕಾಗಿದ್ದು, ಇದುವರೆಗೆ ವಿತರಣೆಯಾಗದಿರುವ ಕುರಿತು ಅವರು ಹೇಳುತ್ತಾರೆ. ರಾಜ್ಯ ಸರ್ಕಾರ ಹೇಗೆ ಕೆಲಸ ಮಾಡುತ್ತದೆಂದು ಅವರು ಇನ್ನೊಂದು ವಿಷಯವನ್ನು ಹೇಳುತ್ತಾರೆ. ವರಾಹಿ ಯೋಜನೆ ಬಗ್ಗೆ ಅವರು ಹೇಳುತ್ತಾರೆ. ಹಣದ ಅಭಾವದಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮ ನಿಂತಿಲ್ಲ. ಈ ದಿಕ್ಕಿನಲ್ಲಿ ನಾವು ವಿದೇಶಿ ಸಾಲವನ್ನು ಎತ್ತಿದ್ದೇವೆ. ವಿದೇಶಿ ಸಾಲವನ್ನು ಎತ್ತಿ ಕೆಲಸ ಮಾಡಲಿ, ಅದಕ್ಕೆ ನಮ್ಮ ವಿರೋಧವಿಲ್ಲ. ಏಕೆಂದರೆ, ಅಭಿವೃದ್ಧಿಯಾಗಬೇಕಾದರೆ, ಸಾಲ ಪಡೆದು ಅಭಿವೃದ್ಧಿಯನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನಾವು ಹಣಕ್ಕೋಸ್ಕರವಾಗಿ ಕಾದರೆ ಅಷ್ಟು escalation ಆಗಿರುತ್ತದೆ, ಮುಂದೆ ತೊಂದರೆಯಾಗುತ್ತದೆ. ನೀವು ಬಡ್ಡಿ ಕೊಟ್ಟಿದ್ದರಲ್ಲಿ ಇವತ್ತೇ ಅಭಿವೃದ್ಧಿಯಾಗುತ್ತದೆ. ಆದರೆ ಮುಂದೆ ಹಣಕ್ಕಾಗಿ ಕಾದರೆ ಕೆಲಸವಾಗುವುದಿಲ್ಲ ಅದು ಗೊತ್ತಿದೆ. ಆದರೆ ಇವರು ಏನು ಹೇಳುತ್ತಾರೆಂದರೆ, ಹಣದ ಲೂಟಿಯಾಗಿದ್ದು, ಯೋಜನಾ ಅನುಷ್ಠಾನದ ಕೊರತೆಯಿಂದಷ್ಟೇ ಅಭಿವೃದ್ಧಿಗೆ ಹಿನ್ನಡೆಯಾಗಿದೆ ಎಂದು ಅವರು ಖೇದ ವ್ಯಕ್ತಪಡಿಸಿದರು. ಇದನ್ನು ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರು ಹೇಳಿದ್ದು, ಇದು ನಾನಲ್ಲ. ಅವರು ಮುಂದೆ ಹೇಳುತ್ತಾರೆ, ಸರ್ಕಾರಿ ಕಾಮಗಾರಿಗಳ ಬಗ್ಗೆ ಗ್ರಾಹಕರು ಅಧಿಕಾರಿಗಳು ಗಮನಿಹರಿಸಬೇಕು ಎಂದು ಹೇಳಿದರು. ಸರ್ಕಾರಿ ಆದೇಶಗಳು ವೈರುಧ್ಯಗಳಿದ್ದು ನೈಜ ಬಡವರಿಗೆ ಅನ್ಯಾಯವಾಗಿದೆ. ವರಾಹಿ ಯೋಜನೆ ಈ ಶತಮಾನದಲ್ಲಿ ಆಗದು. ಲೂಟಿ ಮಾತ್ರ ನಡೆಯುತ್ತಿದೆ ಎಂದು ಮೊದಲು ಅವರು ಸರ್ಕಾರಿ ಅಧಿಕಾರಿಗಳ ಕಣ್ಣು ತೆರೆಸಬೇಕೆಂದು ಹೇಳಿರುತ್ತಾರೆ. ವರಾಹಿ ಯೋಜನೆಯಲ್ಲಿ ಸಾಕಷ್ಟು ಲೂಟಿಯಾಗುತ್ತಿದೆ ಎನ್ನುವುದನ್ನು ಅವರೇ ಹೇಳಿದ್ದಾರೆ, ನಾನು ಅಲ್ಲ ಹೇಳುತ್ತಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಉಪಾಧ್ಯಕ್ಷರೇ, ಹಣಕಾಸು ಆಯೋಗದ ಅಧ್ಯಕ್ಷರು ಈ ರೀತಿಯ ಹೇಳಿಕೆಯನ್ನು ಕೊಡಬಹುದೇ? ಅವರಿಗೆ ಆ ಅಧಿಕಾರ ಇದೆಯಾ? ಅಧಿಕಾರದ ವ್ಯಾಪ್ತಿಯನ್ನು ಅವರು ಮೀರಿ ಈ ರೀತಿಯ ಒಂದು ಹೇಳಿಕೆಯನ್ನು ಹೇಗೆ ಕೊಟ್ಟರು? ಅದನ್ನು ಸರ್ಕಾರ ಹೇಗೆ ನೋಡಿಕೊಂಡಿದೆ

ಎಂದು ಹೇಳಿ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಹಣಕಾಸು ಆಯೋಗದ ಅಧ್ಯಕ್ಷ ಸ್ಥಾನವೆಂದರೆ, ಒಂದು ಜವಾಬ್ದಾರಿಯುತ ಸ್ಥಾನ. ಆ ರೀತಿ ಹೇಳಿಕೆಯನ್ನು ಕೊಟ್ಟಾಗ ಸರ್ಕಾರದ ಮೇಲೆ ಯಾವ ರೀತಿಯಾದ ಪರಿಣಾಮವಾಗುತ್ತದೆ, ಮಾನ್ಯ ಯಡಿಯೂರಪ್ಪನವರೇ ತಾವು ರಾಜೀನಾಮೆಯನ್ನು ಕೊಡಬೇಕಾಗುತ್ತದೆ, ಅವರು ಹೇಳಿರುವುದನ್ನು ನೀವು ಒಪ್ಪುವುದಾದರೆ. ಇಲ್ಲದಿದ್ದರೆ ಅವರ ಕೈಯಿಂದ ರಾಜೀನಾಮೆಯನ್ನು ತೆಗೆದುಕೊಳ್ಳಿ. ಅಥವಾ ನೀವಾದರೂ ರಾಜೀನಾಮೆ ಕೊಡಿ. ನಿಮ್ಮ ಸರ್ಕಾರದ ಮೇಲೆ ನೇರವಾದ ಆಪಾದನೆಯನ್ನು ವರಾಹಿ ಯೋಜನೆಯಲ್ಲಿ ಹಣ ಲೂಟಿಯಾಗುತ್ತಿದೆ ಎಂದು ಹೇಳಿದ್ದಾರೆ. Either you must accept it or you must ask that man to resign. If you are not in a position to ask him to resign, you must resign.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಉಪಾಧ್ಯಕ್ಷರೇ, ನಾನು High Court ಗೆ ಒಂದು writ petition ಹಾಕಿರುತ್ತೇನೆ. ಹಿಂದಿನ ಸರ್ಕಾರ ಎಂ.ಪಿ.ಗಳಿಗೆ ಕಾರುಗಳನ್ನು ಕೊಟ್ಟಿದ್ದರು. ಅದು ಪೆಂಡಿಂಗ್ ಇದೆ. ಆದರೆ ಅವರುಗಳಿಗೆ ಹೊಸ ಕಾರುಗಳ ಬದಲಾವಣೆಯನ್ನು ಮಾಡುತ್ತಿರುವುದು, ಸರ್ಕಾರ ಎಷ್ಟು ಪೆಟ್ರೋಲ್ ಮತ್ತು ಡೀಸಲ್‌ನ್ನು ಕೊಡುತ್ತಿರುವುದು ಅದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಇವರಿಗೆ ಕಾರುಗಳು ಎಷ್ಟು ವರ್ಷಕ್ಕೆ ಬದಲಾವಣೆಯನ್ನು ಮಾಡಬೇಕು. ಅವರಿಗೆ 500 ಲೀಟರ್ ಎಂದು ಲಿಮಿಟ್ ಮಾಡಿದ್ದಾರೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಮಾಹಿತಿಯನ್ನು ತರಿಸಿಕೊಂಡು ನೋಡಬೇಕು. ತಾವು ಕೊಟ್ಟಿರುವ ಲಿಮಿಟ್ ಪ್ರಕಾರ ಅವರು ಖರ್ಚು ಮಾಡುತ್ತಿದ್ದಾರಾ? ಅವರು ಕಾರನ್ನು ಡಿ.ಸಿ. ಆಫೀಸಿಗೆ ಕೊಡುತ್ತಿದ್ದಾರಾ, ಅಥವಾ ಅವರು ಸ್ವಂತಕ್ಕೆ ಉಪಯೋಗಕ್ಕೆ ಇಟ್ಟುಕೊಂಡಿದ್ದಾರಾ, ಅದರ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಬೇಕು. ಹಿಂದೆ ಈ ಬಗ್ಗೆ ಚರ್ಚೆಯಾಗಿತ್ತು, ಅವರಿಗೆ ಅದನ್ನು ಕೊಟ್ಟಾಗಲೇ ನಾನು ವಿರೋಧವನ್ನು ಮಾಡಿದ್ದೇ. ಈ ಬಗ್ಗೆ High Court ನಲ್ಲಿ writ petition ನ್ನು ಸಹ ಹಾಕಿದ್ದೇನೆ. ನಾನು ಅವತ್ತು ಮಾತನಾಡುವಾಗಲೂ ಸಹ ಹೇಳಿದ್ದೇನೆ, ನಾನು ಎಂ.ಪಿ. ಯಾದರೂ ಕೂಡ ಕಾರನ್ನು ಕೊಡಬೇಡಿ ಎಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ನೀವು ಕಾರುಗಳನ್ನು ಲೋಕಸಭಾ ಸದಸ್ಯರುಗಳಿಗೆ ಕೊಡುವುದಾದರೆ ಶಾಸಕರುಗಳಿಗೂ ಕೊಡಿ. ಅವರುಗಳಿಗೆ ಏನು ವಿಶೇಷ? ನೀವು ಕಾರನ್ನು ಶಾಸಕರುಗಳಿಗೆ ಕೊಡಬೇಡವೇ? ಲೋಕಸಭಾ ಸದಸ್ಯರಿಗಿಂತ ಕೆಲಸಕಾರ್ಯಗಳು ಆ ಕ್ಷೇತ್ರದಲ್ಲಿ ಎಲ್ಲರಿಗಿಂತ ಹೆಚ್ಚಾಗಿ ಇರುವುದು ಶಾಸಕರಿಗೆ. ಶಾಸಕರಿಗೆ ಪ್ರತಿಯೊಂದು ಸಹ ಕಡೆಗಣಿಸಿ, ಲೋಕಸಭಾ ಸದಸ್ಯರುಗಳಿಗೆ ಕೊಡತಕ್ಕಂತಹ ವಿಚಾರ ಏನಿದೆ, ಅದರ ಬಗ್ಗೆ ತಾವು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಲೋಕಸಭಾ ಸದಸ್ಯರ ಬಗ್ಗೆ ಎಲ್ಲಾ ವಿಚಾರಗಳಲ್ಲಿಯೂ ವಿಶೇಷ ಸೌಲಭ್ಯಗಳನ್ನು ನೀಡಲಾಗಿದೆ. ಅವರಿಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಒಂದು ಕಾರ್ಯಾಲಯ. ಅವರಿಗೆ ವಿಶೇಷ ವ್ಯವಸ್ಥೆ, ಅವರಿಗೆ ಸಾಲದಕ್ಕೆ ರಾಜ್ಯಮಂತ್ರಿಯ ಸ್ಥಾನಮಾನ, ಇದನ್ನು ಏಕೆ ಕೊಟ್ಟಿದ್ದೀರಿ, ಏಕೆ ಅವರಿಗೆ ಬೇಕಾಗಿದೆ. ಇದು ಸರಿಯಾದ ಕ್ರಮವಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅದಕ್ಕಿಂತ ಅಸಹ್ಯ ಎಂದರೆ ಹಿಂದೆ ಮುಖ್ಯಮಂತ್ರಿಗಳಾಗಿದ್ದವರಿಗೂ, ಕೂಡ ಡೆಪ್ಯೂಟಿ ಮಿನಿಸ್ಟರ್ ಕೇಡರ್ ಈಗ. ಬರೀ perks ಗೋಸ್ಕರ. ಇದು ದುರಂತ ಹಿಂದೆ ಎಲ್ಲಿತ್ತು? Write petition ಪೆಂಡಿಂಗ್ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- Perks and privileges of Parliment member ಬಗ್ಗೆ list ತರಿಸಿನೋಡಿ. ನೀವು ಏತಕ್ಕೆ ರಾಜ್ಯ ಸರ್ಕಾರದ exchequer ನಿಂದ ಅಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದೀರಿ, ಅದರ ಬಗ್ಗೆ ತಾವು ಯೋಚನೆ ಮಾಡಬೇಕು. ಇದಕ್ಕೆ ನಮದೆಲ್ಲಾ ಬಹಳ ವಿರೋಧವಿದೆ. ಇದನ್ನು ತಕ್ಷಣ withdraw ಮಾಡಬೇಕು. ವರ್ಷ ವರ್ಷ ಹೊಸ ಹೊಸ ಕಾರುಗಳನ್ನು ಕೊಂಡುಕೊಂಡು ಲೋಕಸಭಾ ಸದಸ್ಯರಿಗೆ ಹೊಸ ಕಾರುಗಳೆಂದು ಬಜೆಟ್‌ನಲ್ಲಿ ತಂದರೆ ಗತಿ ಎಲ್ಲಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅದನ್ನು ನಾನು question ಮಾಡಿದ್ದು, Constitution ಪ್ರಕಾರ State Contingency Fund ನಿಂದ ಕೊಡುವುದಕ್ಕೆ ಬರುವುದಿಲ್ಲ. ಅವರುಗಳಿಗೆ ಏನಾದರೂ ಕೊಡುವುದಿದ್ದರೆ ಸೆಂಟ್ರಲ್

ಗೋರ್ಮೆಂಟ್‌ನವರೆ ಕೊಡಬೇಕಾಗುತ್ತದೆ. ಅದನ್ನು ಸ್ಟೇಟ್ ಗೋರ್ಮೆಂಟ್ ನವರು ಕೊಡುವುದಕ್ಕೆ ಬರುವುದಿಲ್ಲವೆಂದು ಸಂವಿಧಾನದಲ್ಲಿದೆ. ಅದನ್ನು ನಾವು question ಮಾಡುತ್ತಿದ್ದೇವೆ.

ಶ್ರೀ ಬಿ. ಶಿವರಾಂ :– ಅದು ಬೇರೆ ರಾಜ್ಯದಲ್ಲಿ ಇದೆಯೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಇಲ್ಲ. ಬೇರೆ ರಾಜ್ಯದವರು ಕೇಳಿದ್ದಾರೆ.

ಶ್ರೀ ಬಿ. ಶಿವರಾಂ :– ಬೇರೆ ರಾಜ್ಯದವರು ಈ ವ್ಯವಸ್ಥೆಯನ್ನು ಮಾಡಿಲ್ಲವೆಂದಾಗ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಲೋಕಸಭಾ ಸದಸ್ಯರಿಗೆ ಕೊಡತಕ್ಕಂತಹದ್ದು ಏನು? ಅಂತಹ ಅನಿವಾರ್ಯತೆ ಏನು ಇದೆ? ಹಾಗಾದರೆ ಶಾಸಕರುಗಳಿಗೂ ಕೊಡಿ.

ಶ್ರೀ ಹೆಚ್.ಡಿ. ಬಸವರಾಜು :– ಸನ್ಮಾನ್ಯ ಉಪಾಧ್ಯಕ್ಷರೇ ನಿಮ್ಮ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಶಿವರಾಂ :– ಎಲ್ಲಿಯವರೆಗೆ ಈ ವ್ಯವಸ್ಥೆಯನ್ನು ತರುತ್ತೀರಿ?

ಶ್ರೀ ಹೆಚ್.ಡಿ. ಬಸವರಾಜು :– ತಾವು ಒಳ್ಳೆಯ ಮಾತನ್ನು ಹೇಳುತ್ತಿದ್ದೀರಿ, ಇಲ್ಲವೆಂದು ನಾನು ಹೇಳುವುದಿಲ್ಲ. ಇದನ್ನು ಮಾಡಿದವರು ಯಾರು? ಇದು ಯಾವಾಗ ಆಯಿತು? ಮಾನ್ಯ ಶಿವರಾಮುರವರೇ ತಮ್ಮ ಬಗ್ಗೆ ನನಗೆ ಬಹಳ ಗೌರವವಿದೆ. ತಾವು ಮಾತನಾಡಿ, ನಾನು ಈ ಬಗ್ಗೆ ಒಂದೆರಡು ಮಾತನಾಡುತ್ತೇನೆ. ಅವರಿಗೆ ಕೊಟ್ಟಿರುವುದು ತಪ್ಪಲ್ಲವೆಂದು ನಾನು ಹೇಳುತ್ತಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಅವತ್ತು ಕೂಡ ಕೊಟ್ಟಿರುವುದು ತಪ್ಪು ಎಂದು ಹೇಳಿದ್ದೇನೆ. ಇವತ್ತು ಸಹ ತಪ್ಪು ಎಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು :– ನೀವು ಹೇಳುತ್ತಿರುವುದು ಸರಿ ಇದೆ. ಆದರೆ ಇದು ಯಾವಾಗ ನಡೆಯಿತು, ಯಾರಿಂದ ನಡೆಯಿತು, ಈಗ ನಾವೆಲ್ಲರೂ ಸುಮ್ಮನೆ ಇದ್ದೇವು, ಈಗ ನಾವುಗಳೆಲ್ಲರೂ ಮಾತನಾಡುತ್ತಿದ್ದೇವೆ. ಈಗಲಾದರೂ ಜ್ಞಾನೋದಯವಾಗಿರುವ ಬಗ್ಗೆ ನಾವುಗಳು ಸಂತೋಷ ಪಡೋಣ. ಅದರ ಬಗ್ಗೆ ಚರ್ಚೆ ಮಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಶಿವರಾಂ :- . . . . . ಏನು ಮಾಡಬೇಕೆಂದು ಹೇಳಿ ಬಸವರಾಜುರವರೇ. . ..

ಶ್ರೀ ಬಸವರಾಜು :- ಅದನ್ನೇ ನಾನು ಹೇಳುತ್ತೀರುವುದು,

ಶ್ರೀ ಬಿ. ಶಿವರಾಂ :- ಇದೊಂದೇ ಮಂತ್ರವೇ?

ಶ್ರೀ ಹೆಚ್.ಡಿ. ಬಸವರಾಜು :- ಅದನ್ನು ಸರಿಮಾಡೋಣ. ಅದನ್ನು ಸರಿಮಾಡಬೇಕೆಂದು ಹೇಳುತ್ತಿದ್ದೇನೆ. ಅದು ಯಾವಾಗ ಆಯಿತು ಎಂದುದೇ ಪ್ರಶ್ನೆ. ಅದು ಬರುವುದು ಬೇಡವೆಂದು ಹೇಳುವುದಿಲ್ಲ. ಅದು ಯಾವಾಗ ಬಂತು ಎಂಬ ಚರ್ಚೆಗೆ ಬರುವುದು ಬೇಡವೇ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಇದರ ಬಗ್ಗೆ ಸರ್ಕಾರದವರು ಉತ್ತರವನ್ನು ಕೊಡಲಿ. ಏಕೆ ಮಧ್ಯೆ ಮಧ್ಯೆ ಬೇರೆಯವರು ಮಾತನಾಡುವುದು. ಇವರು ಉತ್ತರವನ್ನು ಕೊಡುವುದಕ್ಕೆ ಶುರು ಮಾಡುತ್ತಾರೆ.

ಉಪಾಧ್ಯಕ್ಷರು :- ಆಯಿತು. ಈಗ ಸರ್ಕಾರದವರು ಉತ್ತರವನ್ನು ಕೊಡುತ್ತಾರೆ. ಶ್ರೀರಾಮರೆಡ್ಡಿಯವರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಸರ್ಕಾರದವರು ಅದನ್ನು ಬೇಕಾದರೆ ಸಮರ್ಥನೆ ಮಾಡಲಿ. ನಾವು ಬೇಡವೆಂದು ಹೇಳುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಹೇಳಲಿ. ಬೇಡವೆಂದು ಹೇಳುವುದಿಲ್ಲ.

ಉಪಾಧ್ಯಕ್ಷರು :- ಅವರು ಉತ್ತರವನ್ನು ಕೊಡುವಾಗ ಇದರ ಬಗ್ಗೆ ಹೇಳುತ್ತಾರೆ.

ಡಾ॥ ಕೆ. ಅನ್ನದಾನಿ :- ಎಂ.ಪಿ.ಗಳಿಗೆ State Minister Carde ಕೊಟ್ಟಿದ್ದೀರಿ. ಎಂಎಲ್ಎಗಳಿಗೂ ವಿಶೇಷ ಸ್ಥಾನಮಾನ ಕೊಡಿ.

(ಗೊಂದಲ)

ಉಪಾಧ್ಯಕ್ಷರು :– ಅನ್ನದಾನಿಯವರೆ, ಕುಳಿತುಕೊಳ್ಳಿ. ಮಾನ್ಯ ಹೆಗ್ಡೆಯವರೇ ತಾವು ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :– ಅವರು ಕೊಟ್ಟಿರುವ ಸವಲತ್ತುಗಳನ್ನು ನಮ್ಮ ಎಂಎಲ್ಎಗಳಿಗೂ ಕೊಡಬೇಕೆಂದು ನಾವು ಪ್ರತಿಪಕ್ಷದಲ್ಲಿರುವವರೆಲ್ಲರೂ ಒಟ್ಟಿಗೆ ಇರೋಣ. ಅದರಲ್ಲಿ ಎರಡು ಮಾತಿಲ್ಲ. ತಾವು ಎಂ.ಪಿ.ಗಳಿಗೆ ಕೊಟ್ಟಿರುವಂತಹ ಸವಲತ್ತುಗಳನ್ನು ಎಲ್ಲರಿಗೂ ಸಿಗುವುದರ ಬಗ್ಗೆ ನಾವು ಪ್ರತಿಪಾದನೆಯನ್ನು ಮಾಡೋಣ. ಇವತ್ತು ಸರ್ಕಾರವನ್ನು ಕೇಳೋಣ. ಅದರಲ್ಲಿ ತಪ್ಪು ಏನಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :– ಮಾನ್ಯ ಬಸವರಾಜುರವರೇ ಅವರು ತಪ್ಪು ಮಾಡಿರುವುದಕ್ಕಾಗಿಯೇ ಇಲ್ಲಿ ಬಂದು ಕುಳಿತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :– ಶಾಸಕರುಗಳಿಗೂ ಸಹ ಈ ಸವಲತ್ತುಗಳು ಸಿಗಲಿ, ಅದರಿಂದ ಜನಕ್ಕೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ.

(ಗೊಂದಲ)

ಡಾ॥ ಕೆ. ಅನ್ನದಾನಿ :– ಮಾನ್ಯ ಉಪಾಧ್ಯಕ್ಷರೆ, ತಾಲ್ಲೂಕಿನಲ್ಲಿ . . . . .

ಉಪಾಧ್ಯಕ್ಷರು : ಅನ್ನದಾನಿಯವರೇ, ಅವರಿಗೆ ಅರ್ಥವಾಗಿದೆ, ತಾವು ಕುಳಿತುಕೊಳ್ಳಿ. ಹೆಗ್ಡೆಯವರೇ ತಾವು ಬೇಗ ಮುಗಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ನಾನು ನಮಗೆ ಕೊಡಿ ಎಂದು ಕೇಳುತ್ತಿಲ್ಲ. ಅವರಿಗೆ ಕೊಟ್ಟಿರುವ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ಸಾಲ ಮನ್ನಾ ಮಾಡುವ ಕಾರ್ಯಕ್ರಮಕ್ಕೆ ಹಿಂದಿನ ಅವಧಿಯಲ್ಲಿ ಪುನಃ 500 ಕೋಟಿ ರೂಪಾಯಿಗಳನ್ನು ತೆಗೆದು ಇರಿಸಿದ್ದಾರೆ. ಅದಕ್ಕೆ ನಾನು ವಿರೋಧವನ್ನು ಮಾಡುತ್ತಿಲ್ಲ. ಬ್ರಹ್ಮಾವರ ಸಕ್ಕರೆ ಕಾರ್ಖಾನೆಯು ಮುಚ್ಚಿ ಹಲವಾರು ವರ್ಷಗಳು ಆಯಿತು. ಕೇವಲ 15 ಕೋಟಿ ರೂಪಾಯಿಗಳನ್ನು ಕೊಡಬೇಕು, ಸಹಕಾರ ಸಂಸ್ಥೆಗಳಿಗೆ, ಕಾರ್ಮಿಕರಿಗೆ,

ಮತ್ತು ಅಲ್ಲಿಯ ರೈತರಿಗೆ. ಅದನ್ನು ಕೊಡದೇ ನೀವು ಖಾಸಗೀಕರಣ ಮಾಡಿ ತೊಂದರೆ ಏನು ಇಲ್ಲ. ಅವರಿಗೆ ಹಾಕಿರುವ terms & condition ನಲ್ಲಿ ಅವರು ಕೊಟ್ಟಂತಹ ಹಣವನ್ನು ರೈತರಿಗೆ ಕೊಡುವುದಕ್ಕಾಗುವುದಿಲ್ಲ, ಕಾರ್ಮಿಕರಿಗೆ ಕೊಡುವುದಕ್ಕಾಗುವುದಿಲ್ಲ, ಸಹಕಾರಿ ಸಂಘಗಳಿಗೂ ಕೊಡುವುದಕ್ಕಾಗುತ್ತಿಲ್ಲ. ಅವರು ಸಹಕಾರ ಸಂಘದಲ್ಲಿ ಪಡೆದಿರುವಂತಹ ಸಾಲದ ಮೇಲೆ ಬಡ್ಡಿಯೂ ಏರುತ್ತಿದೆ. ಅದಕ್ಕಾಗಿ ಸರ್ಕಾರದವರು ಇದರಲ್ಲಿ ಸ್ವಲ್ಪ ಪ್ರೊವಿಸನ್ ಮಾಡಿಕೊಳ್ಳಲಿ. ಅದನ್ನು ಮೊದಲು ಕೊಡಬೇಕು. ಅದನ್ನು ಕೊಟ್ಟಮೇಲೆ ಯಾರು ಖಾಸಗಿಯವರು ತೆಗೆದುಕೊಂಡಿದ್ದಾರೆ. ಅವರಿಗೆ ಕೊಟ್ಟಂತಹ ಹಣವನ್ನು ನೀವು ಅದಕ್ಕೆ ಅಡ್ಜಸ್ಟ್ ಮಾಡಿಕೊಂಡು ಬರಬೇಕೆಂದು ನಾನು ತಮ್ಮಲ್ಲಿ ಕೇಳುತ್ತೇನೆ. Disaster Management ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರ ಬಹಳ ವಿಚಿತ್ರ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಸುನಾಮಿ ಬಂದಾಗ ನಮ್ಮ ಭಾಗದಲ್ಲಿ ಸ್ವಲ್ಪ ಬದಲಾವಣೆಗಳು ಆಗಿ ಇದರಲ್ಲಿ ನೀರಿನ ಫೋರ್ಸಿನಲ್ಲಿ ಸ್ವಲ್ಪ ಕೊರತೆ ಜಾಸ್ತಿಯಾಯಿತು. ಅವರು ತಕ್ಷಣ ಸುನಾಮಿ ಫಂಡ್‌ನಿಂದ ಕೆಲಸವನ್ನು ಮಾಡಿಸಿದರು. ಆದರೆ ಇನ್ನು ಹಣವನ್ನು ಕೊಡುವುದು ಬಾಕಿ ಇದೆ. ನೀವು ಅದಕ್ಕೆ ಏನು ಪ್ರೊವಿಸನ್ ಮಾಡಿರುವುದಿಲ್ಲ. ಮೊನ್ನೆ ದಿವಸ ನಮ್ಮ private nursing college ನವರು Bayloor Education Trust ನವರು ನಿನ್ನೆ ಅದರ ಉದ್ಘಾಟನೆ ಆಯಿತು. ಮಾನ್ಯ ವಿ.ಎಸ್. ಆಚಾರ್ಯರವರು ಬಂದು ಉದ್ಘಾಟನೆಯನ್ನು ಮಾಡಿದರು. Disaster Management ಬಗ್ಗೆ ಒಂದು ಕಾರ್ಯಕ್ರಮವನ್ನು ಮಾಡಿದರು. ಅದನ್ನು ಸರ್ಕಾರದವರು ಮಾಡಲಿಲ್ಲ. ಅದನ್ನು ಒಂದು ಖಾಸಗಿ ಸಂಸ್ಥೆಯವರು ಮಾಡಿದರು. ಆಗ ಅವರು ವರ್ಷಗಳ ಕಾಲ ಲಕ್ಷ ಖರ್ಚು ಮಾಡುವುದಕ್ಕೆ ಸ್ವಲ್ಪ ಗ್ರಾಂಟ್‌ನ್ನು ಕೊಡಬೇಕೆಂದು ಕೇಳಿದರೂ ಇವತ್ತಿಗೂ ಹಣವನ್ನು ಕೊಡಲಿಲ್ಲ. ನಾವು ಹಣವನ್ನು ಮಠಕ್ಕೆ, ಮಂದಿರಕ್ಕೆ ಕೊಡುತ್ತೇವೆ. ಆದರೆ ನಮ್ಮ ಊರಿಗೆ ಏನು ತೊಂದರೆಗಳು ಆಗುತ್ತದೆ flood damage ಆಗುತ್ತದೆ, ಸಮುದ್ರ ಕೊರೆತ ಆಗುತ್ತದೆ, ನದಿ ಕೊರೆತ ಬರುತ್ತದೆ. ಇವೆಲ್ಲಕ್ಕೂ ಸುನಾಮಿ ಬಂದಾಗ ಏನು ಮಾಡಬೇಕು, ತರಬೇತಿಯನ್ನು ಕೊಡುವುದಕ್ಕೆ ಹಣವನ್ನು ಕೊಡುವುದರ ಬಗ್ಗೆ ಪ್ರತಿಯೊಂದಕ್ಕೂ ಅಧಿಕಾರಿಗಳು objection ನ್ನು ಹಾಕುತ್ತಾರೆ.

ಇದಕ್ಕಾಗಿ ಹಣವನ್ನು ಬಿಡುಗಡೆ ಮಾಡಬೇಕು. ಅದನ್ನೆ Disaster Management ಕಾರ್ಯಕ್ರಮವನ್ನು ಪ್ರತಿ ಜಿಲ್ಲೆಯಲ್ಲಿ ಹಾಕಿಕೊಳ್ಳಬೇಕು. ತರಬೇತಿಯನ್ನು revenue department ನ ಎಲ್ಲಾ ಇಂಜಿನಿಯರಿಂಗ್ ಡಿವಿಜನ್‌ನವರಿಗೆ ಕೊಡಬೇಕು. ಪ್ಯಾರಾ-ಮೆಡಿಕಲ್‌ನವರಿಗೆ ತರಬೇತಿಯನ್ನು ಕೊಡುವಂತಹ ವ್ಯವಸ್ಥೆ ಸರ್ಕಾರದಿಂದ ಆಗಬೇಕೆಂದು ಹೇಳುತ್ತೇನೆ. ನಾನು ಮೊನ್ನೆ ದಿನ ಸಮುದ್ರದ ಕೊರೆತವನ್ನು ನೋಡಿದೆ. ಒಬ್ಬ ಸ್ವಾಮೀಜಿಯವರು ಕುಳಿತು ಅವರಿಗೆ ಜ್ಞಾನೋದಯವಾದ ಜಾಗದ ಅಭಿವೃದ್ಧಿಗೆ ಹಣವನ್ನು ಕೊಟ್ಟಿದ್ದೀರಿ. ನಮಗೂ ಕೂಡ ಸಮುದ್ರ ತಪ್ಪಲಿನಲ್ಲಿ ಜ್ಞಾನೋದಯವಾಗಿರುವುದು, ಆ ಜಾಗವು ಕೊರೆದುಕೊಂಡು ಹೋಗುತ್ತಿದೆ. ಆ ಕೊರೆತವನ್ನು ತಡೆಯುವುದಕ್ಕಾದರೂ ಹಣವನ್ನು ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಯಾರಿಗೋ ಜ್ಞಾನೋದಯವಾಯಿತು, ಯಾರದೋ ಮಠ ಮತ್ತು ಮಂದಿರವನ್ನು ಅಭಿವೃದ್ಧಿ ಮಾಡಬೇಕು. ಪ್ರಾಯಶಃ ಇದಕ್ಕೆ Public Interset Litigation ಹಾಕಿದರೆ ಇದರಲ್ಲಿ ಎಲ್ಲವನ್ನು cancel ಮಾಡುವುದಕ್ಕೆ ಆಗುತ್ತದೆ ಎಂದು ನನ್ನ ಅಭಿಪ್ರಾಯವಾಗಿದೆ. ಇದೆಲ್ಲವನ್ನು ಬಜೆಟ್‌ನಲ್ಲಿ ಹೇಳುವುದಕ್ಕೆ ಆಗುತ್ತದೆಯೇ, ಬಜೆಟ್‌ನಲ್ಲಿ ಇದರ ಬಗ್ಗೆ ಮಾತನಾಡೋಣ. ಇದನ್ನು ಮಾಡುವುದು ಒಂದು ದೊಡ್ಡ ತಪ್ಪು. ಇಂತಹದಕ್ಕೆ ಪೂರಕ ಬಜೆಟ್‌ನಲ್ಲಿ ಜಾಸ್ತಿ ತರುವಂತಹದ್ದು. ಕಾಲೇಜುಗಳನ್ನು ಹಾಗೂ ಹೈಸ್ಕೂಲ್‌ಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಅಲ್ಲಿ. ಟೀಚರ್ಸ್‌ಗಳನ್ನು ಕೊಡಲಿಲ್ಲ. ಅಲ್ಲಿಗೆ ಪೇಪರ್ ಮತ್ತು ಸ್ಟೇಶನರಿಯನ್ನು ಸಹ ಕೊಡಲಿಲ್ಲ. ಪಿ.ಯು.ಸಿ ಮತ್ತು ಹೈಸ್ಕೂಲ್ ಸಿಕ್ಕಿದ್ದಲ್ಲಿ ನಾನೇ ಅಲ್ಲಿಗೆ ಪೆನ್ಸಿಲ್ ಮತ್ತು ಪೇಪರ್‌ನ್ನು ಪ್ರೊವೈಡ್ ಮಾಡಬೇಕಾಯಿತು. ಪೆನ್ಸಿಲ್, ಪೇಪರ್ ಮತ್ತು ಟೀಚರ್ಸ್ ಸಂಬಳ, ಇಲ್ಲಿ ಎಷ್ಟು ಇದೆ honorarium ಅನ್ನು ಸರ್ಕಾರದಿಂದ ಕೊಡುತ್ತೇವೆಂದು ಹೇಳುತ್ತೀರಿ. ಇದನ್ನು ಕೊಡುವ ಬಗ್ಗೆ ಸರ್ಕಾರದಿಂದ ಹಣ ಬರಲಿಲ್ಲ. ನಾನು ಸ್ವತಃ ಕೊಟ್ಟಿದ್ದೇನೆ. ಆ ಬಗ್ಗೆ ನೆನಪು ಇದೆ. ಎರಡು pre - University College ಗಳಿಗೆ ಕೊಟ್ಟಿದ್ದಾರೆ. ಅದನ್ನು ಏತಕ್ಕಾಗಿ ಕೊಟ್ಟಿದ್ದಾರೆ. ಎಲ್ಲೆಲ್ಲಿ ಕೊಟ್ಟಿದ್ದಾರೆ ಎಂಬುದರ ಬಗ್ಗೆ ಮಾಹಿತಿಯನ್ನು ಕೊಡಬೇಕು. ಈ ಒಂದು PWD ರಸ್ತೆಯ ಬಗ್ಗೆ ಹೇಳುವುದಾದರೆ, ಅದನ್ನು ರೂರಲ್ ರೋಡ್‌ಗೆ ಕೊಟ್ಟಿದ್ದಾರೆ. ಅದು ಸಾಧ್ಯ ಇದೆಯಾ? ನೀವು ಅದನ್ನು ಹೇಳಿದ್ದೀರಿ, ನೋಡಲಿಲ್ಲವೆಂದು ಕಾಣಿಸುತ್ತದೆ.

For the improvement of rural roads and other works is Shimoga district, Public works Department ನಿಂದ ಕೊಟ್ಟಿದ್ದೀರಿ. ಅಲ್ಲಿ ZP ಯವರು ಕೆಲಸವನ್ನು ಮಾಡುವುದಿಲ್ಲವೇ? Public Works Department ನಿಂದ ಕೊಡುವುದಕ್ಕಾಗುತ್ತದೆಯೇ? ನಾವು 12th Finance ಅಥವಾ CMGSY ನಲ್ಲಿ ಕೇಳಿದರೆ link document ನಲ್ಲಿದೆ. ಆದರೆ ಪಿಡಬ್ಲೂಡಿಯಿಂದ ರುರಲ್‌ಗೆ ಕೊಡುವ ಬಗ್ಗೆ ಲಿಂಕ್ ಡೊಕ್ಯೂಮೆಂಟ್ ನಲ್ಲಿ ಇಲ್ಲ. ನಾವು KRDCL ನಿಂದ Bridge ಗೆ ಕೇಳಿದರೆ ಆ ರೋಡ್ ಅಪ್‌ಗ್ರೇಡ್ ಆಗಿಲ್ಲ ಎಂದು ಹೇಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಉದಾಸಿಯವರು ಎಲ್ಲೋ ಹೋಗಿದ್ದಾರೆ. ಇದರ ಬಗ್ಗೆ ಅವರು ಹೇಳಬೇಕು. CMGSY 12th Finance ಕೊಡಿ ಎಂದು ಹೇಳಿದರೆ link document ನಲ್ಲಿ ಸೇರಿಸಿಬಿಟ್ಟಿದೆ ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ.

ರೂರಲ್ ರೋಡ್ಸ್‌ಗೆ PWD ಗೆ ನೀವು ಹಣ ಕೊಡುತ್ತಿದ್ದೀರಲ್ಲಾ ಇದಕ್ಕೆ ಲಿಂಕ್ ಡ್ಯಾಕುಮೆಂಟ್ಸ್ ಬರುವುದಿಲ್ಲವೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- roads, National Highways, ಮತ್ತು State Highways, mine lorry ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ನನಗೆ ಉತ್ತರ ಕೊಟ್ಟಿದ್ದು mines ನಿಂದ ಲಾಭದಾಯಕವಾಗಿ ಬಂದದ್ದು 84.00 ಕೋಟಿ ರೂಪಾಯಿಗಳು ಎಂದು ಉತ್ತರ ಕೊಟ್ಟಿದ್ದಾರೆ, ಹಾಗಿದ್ದರೆ ಇದನ್ನು ಏಕೆ export ಮಾಡಬೇಕಾಗಿತ್ತು. ಪರ್ಮಿಷನ್ ಏಕೆ ಕೊಟ್ಟರೆಂದು ನಾನು ಕೇಳುವಂಥಾದ್ದು. ಈಗ 84.00 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರುವುದು, 1700.00 ಕೋಟಿ ರೂಪಾಯಿಗಳು ನಷ್ಟ ಆಗುವುದಾದರೆ ಇದಕ್ಕೆ ಏಕೆ ಪರ್ಮಿಷನ್ ಕೊಟ್ಟಿರಿ? ಅನುಮಾನ ಏನು ಗೊತ್ತೇ? ಎಲ್ಲಾ ಇಲ್ಲಿದ್ದವರೇ ಹೆಚ್ಚಿನವರು ಲೈಸೆನ್ಸ್ ತೆಗೆದುಕೊಂಡಿದ್ದಾರೆಂದು ಜನ ಮಾತನಾಡುತ್ತಿದ್ದಾರೆ. ಅದಕ್ಕೋಸ್ಕರ ಇದರಲ್ಲಿ ಕೆಲವರೇ ಪಟ್ಟಭದ್ರಾಹಿತಾಸಕ್ತಿಗಳಿಗೆ ಲಾಭ ಮಾಡಿಕೊಡುವುದಾದರೆ ಇದಕ್ಕೆ ಪರ್ಮಿಷನ್ ಅನ್ನು ಕೊಡಬೇಡಿ. ಕೇಂದ್ರಕ್ಕೆ ಪತ್ರ ಬರೆದು 84.00 ಲಕ್ಷ ರೂಪಾಯಿಗಳನ್ನಾದರೂ ತರಿಸಿಕೊಳ್ಳಿ. ಆರೋಗ್ಯ ಇಲಾಖೆಯಿಂದ ಮೆಡಿಸಿನ್ ಸಪ್ಲೈ ಮಾಡಲಿಕ್ಕೆ ಪ್ರೊಫೆಷನಲ್ ಹಣ ಮಾಡಿಕೊಳ್ಳುತ್ತಾ

ಹೋಗಿದ್ದಾರೆ. ಸದನದಲ್ಲಿ ಅಂದು ಹುಚ್ಚುನಾಯಿ ಕಡಿತದ ಬಗ್ಗೆ ಬಹಳ ಚರ್ಚೆಯಾಯಿತು, ನಮ್ಮಲ್ಲಿ ಇವತ್ತಿಗೂ ಸಹ vaccines ಇಲ್ಲ. ನಾನು ಸ್ವತಃ ಆಸ್ಪತ್ರೆಗಳಿಗೆ ತೆಗೆಸಿಕೊಟ್ಟು ಬಂದಿದ್ದೇನೆ. ಪ್ರೈಮರಿ ಹೆಲ್ತ್ ಸೆಂಟರ್‌ಗಳಲ್ಲಿ ಔಷಧಿಗಳಿಲ್ಲ. ಇವತ್ತಿಗೂ ಆ ಸಮಸ್ಯೆ ಇದೆ. ಮೊನ್ನೆ ದಿವಸ ನಾನೇ ಔಷಧಿಯನ್ನು ಅಂಗಡಿಯಿಂದ ತೆಗೆಸಿಕೊಟ್ಟು ಬಂದಿದ್ದೇನೆ. ಅದಕ್ಕೇನಾದರೂ provision ಮಾಡಲಿಕ್ಕಾಗುವುದಿಲ್ಲವೇ ಇಲ್ಲಿ ಕೇಳಿದರೆ ರಾಜ್ಯದ ಮಂತ್ರಿಗಳು ಸಾಕಷ್ಟು ಔಷಧಿಗಳು, vaccines ಅನ್ನು Primary Health Centres ನಲ್ಲಿ ಇಟ್ಟಿದ್ದೇವೆಂದು ಉತ್ತರವನ್ನು ಕೊಡುತ್ತಾರೆ, ಆದರೆ ಇವತ್ತಿಗೂ ಅಲ್ಲಿನ Primary Health Centres ನಲ್ಲಿ, Paracetamol, Rabifer ಇಲ್ಲ. ಇದು ಯಾವ ರೀತಿಯ ವ್ಯವಸ್ಥೆ? ದಯವಿಟ್ಟು ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳುತ್ತಾ ಈ ಒಂದು ಪೂರಕ ಬಜೆಟ್ 6,000 ಕೋಟಿ ರೂಪಾಯಿಗಳನ್ನೇನು ಮಂಡಿಸಿದ್ದಾರೆ. ಅವರು ಬಜೆಟ್‌ನ total 17.58% ಎಂದು ಹೇಳಿದ್ದರು, It is much more than that. Calculate ಮಾಡಿ. ಸಿದ್ಧರಾಮಯ್ಯನವರು ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಹೇಳಿ, ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು :- ಸನ್ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ಆ ಕಡೆ ಮಾತನಾಡುತ್ತಿದ್ದಾರೆ, ನಾನು ನಿಮ್ಮಷ್ಟು ಮಾತನಾಡಲಿಕ್ಕೆ ಆಗುವುದಿಲ್ಲ, ಒಂದೆರಡು ನಿಮಿಷ ನಾನು ಮಾತನಾಡಲಿಕ್ಕೆ ಅವಕಾಶ ಕೊಡಿ. ಸಿದ್ಧರಾಮಯ್ಯನವರೇ ತಾವು ಅರ್ಥ ಮಂತ್ರಿಗಳಾಗಿದ್ದವರು, ಎರಡೇ ನಿಮಿಷ ನಾನು ಮಾತನಾಡುತ್ತೇನೆ. ತಾವು ಹಿರಿಯರಿದ್ದೀರಿ, ನಾವು ಬಹಳ ಸಮಯದಿಂದ ಕಾಯುತ್ತಿದ್ದೇವೆ. ನಾನು ಜಾಸ್ತಿ ಮಾತನಾಡುವುದಿಲ್ಲ, ಎರಡೇ ನಿಮಿಷ, ನಾವು juniors, ನೀವು ಇದ್ದಾಗ ನಿಮ್ಮ ಮುಂದೆ ಮಾತನಾಡಿದರೆ ನಮಗೆ ಇನ್ನೂ ಸಂತೋಷವಾಗುತ್ತದೆ. ಹಾಗಾಗಿ ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು. ತಮ್ಮ ಮುಂದೆ ಮಾತನಾಡಬೇಕೆಂಬುದು ನನಗೊಂದು ಆಸೆ. ಈಗ ನೀವೆಲ್ಲಾ ಹೇಳಿದ್ದನ್ನು ನಾವು ಕೇಳಲಿಲ್ಲವೇ?

ಉಪಾಧ್ಯಕ್ಷರು :- ಬಸವರಾಜ್, ಸಿದ್ಧರಾಮಯ್ಯನವರು ಮಾತನಾಡಿ ಮುಗಿಸುತ್ತಾರೆ, ನಂತರ ಅವರು ಮಾತನಾಡಿದ ಕೂಡಲೇ ನೀವು ಮಾತನಾಡಿ.

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು 2ನೇ ಕಂತಿನ ಪೂರಕ ಅಂದಾಜುಗಳನ್ನು ಸದನದಲ್ಲಿ ಇಟ್ಟು ಸದನದ ಒಪ್ಪಿಗೆಯನ್ನು ಕೇಳಿದ್ದಾರೆ. ಸಾಮಾನ್ಯವಾಗಿ ಪೂರಕ ಅಂದಾಜುಗಳನ್ನು ಯಾರೂ ವಿರೋಧ ಮಾಡುವುದಿಲ್ಲ. ಆದರೆ ಅದು ಇತಿಮಿತಿಯೊಳಗೆ ಇರಬೇಕಾಗುತ್ತದೆ. ಅದಕ್ಕೆ Constitution ನ Article 205, clause(I) ರಲ್ಲಿ provision ಮಾಡಿಕೊಟ್ಟಿದ್ದಾರೆ. ನಾವು ಒಂದು ಆರ್ಥಿಕ ವರ್ಷದಲ್ಲಿ ಮಂಡಿಸತಕ್ಕಂಥ ಆಯವ್ಯಯದಲ್ಲಿ ನಾವು ಹೇಳಿರತಕ್ಕಂಥ ಕಾರ್ಯಕ್ರಮಗಳಿಗೆ ಹಣ ಸಾಲದೇ ಹೋದರೆ, ಹೊಸ ಸೇವೆಗಳು ಬಂದರೆ ಮತ್ತೆ unforeseen expenditure ಬಂದರೆ, ನಾವು ಲೆಕ್ಕ ಹಾಕಿಕೊಳ್ಳಲಾಗದೇ ಇರುವಂಥದ್ದು, emergency ಬರುವಂಥದ್ದು ನಾವು ಬಜೆಟ್ ತಯಾರು ಮಾಡುವಾಗ estimated receipts and estimated expenditure ಮಾಡುವಾಗ, ನಮ್ಮ ಊಹೆಗೆ ನಿಲುಕದೇ ಇರುವಂತಹವು ಅಥವಾ ನಮ್ಮ ಜ್ಞಾನಕ್ಕೆ ಬರದೇ ಇರತಕ್ಕಂಥ ಖರ್ಚುಗಳು ಬಂದಾಗ ಅವೆಲ್ಲವನ್ನೂ ಈ ಪೂರಕ ಅಂದಾಜುಗಳಲ್ಲಿ ಸೇರಿಸಿ ಮತ್ತೆ ಸದನದ ಒಪ್ಪಿಗೆ ಪಡೆದುಕೊಳ್ಳಬೇಕೆಂದು ಕಾನೂನು ಹೇಳುತ್ತದೆ, ಆದರೆ ಎಷ್ಟು ಬೇಕಾದರೂ ಮಂಡಿಸಬಹುದೆಂದು ಹೇಳಲಿಕ್ಕೆ ಬರುವುದಿಲ್ಲ. ಬಜೆಟ್ ಮಂಡಿಸುವಾಗಲೇ ನಾವು ಇವನ್ನೆಲ್ಲಾ ಕೂಲಂಕಷವಾಗಿ ಚರ್ಚೆ ಮಾಡಿ, ನಿಜ ಇವುಗಳನ್ನು estimated receipts and estimated expenditure ಎಂದೇ ಕರೆಯುವುದು. ಯಾವಾಗಲೂ ಒಂದು ಆರ್ಥಿಕ ವರ್ಷದಲ್ಲಿ ಸರ್ಕಾರ ಒಂದು ಬಜೆಟ್ ಅನ್ನು ಮಂಡಿಸತಕ್ಕಂಥದ್ದು, it is an annual financial statement. ಎಷ್ಟು ನಮಗೆ ಆದಾಯ ಬರುತ್ತದೆ, ಎಷ್ಟು ನಾವು ಖರ್ಚು ಮಾಡುತ್ತೇವೆನ್ನುವುದನ್ನೆಲ್ಲಾ ಲೆಕ್ಕ ಹಾಕಿಕೊಂಡು ಅದನ್ನು ಬಜೆಟ್‌ನಲ್ಲಿ ನಾವೆಲ್ಲಾ ಹೇಳಿರುತ್ತೇವೆ ಆದರೆ ಇವರು ಮಂಡಿಸಿರತಕ್ಕಂಥಾದ್ದು ಒಂದು ಮಿನಿ ಬಜೆಟ್ ಆಗಿಬಿಟ್ಟಿದೆ. ಮೊದಲನೇ ಕಂತಿನಲ್ಲಿ 1,408/- ಕೋಟಿ ರೂಪಾಯಿಗಳಿಗೆ ಪೂರಕ ಅಂದಾಜಿನಲ್ಲಿ ಒಪ್ಪಿಗೆ

ಪಡೆದುಕೊಂಡಿದ್ದಾರೆ. ಈಗ ಎರಡನೇ ಕಂತಿನಲ್ಲಿ 5,484/- ಕೋಟಿ ರೂಪಾಯಿಗಳೆಂದು ಇದೆ, ಒಟ್ಟು ಸುಮಾರು ಹೆಚ್ಚು ಕಡಿಮೆ 7,400/- ಕೋಟಿ ರೂಪಾಯಿಗಳಷ್ಟಾಗುತ್ತದೆ. ಇವರು expected receipts 41,136/- ಕೋಟಿ ರೂಪಾಯಿಗಳು. ಈ ವರ್ಷ 2006-07ಕ್ಕೆ ಬಜೆಟ್‌ನಲ್ಲಿ 41,136/- ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆಂದು ಅವರು ಹೇಳಿಕೊಂಡಿದ್ದರು. ಈಗ ಅದು 44,000/- ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗುತ್ತದೆಂದು ಬಜೆಟ್‌ನ revised estimates ನಲ್ಲಿ ಹೇಳಿಕೊಂಡಿದ್ದೀರಿ. ಕಳೆದ ವರ್ಷ 2005-06 ರಲ್ಲಿ ಏನೂ revised estimates expenditure ಏನಾಗಿತ್ತು ಅದಕ್ಕಿಂತ ಸುಮಾರು 7,000/- ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ನಮ್ಮ ರಾಜ್ಯಕ್ಕೆ ಈ ವರ್ಷ ಬಂದಿದೆ. ಇದಕ್ಕೆ ಯಡಿಯೂರಪ್ಪನವರು ಕಾರಣರೆಂದು ಅವರು ಬೆನ್ನು ತಟ್ಟಿಕೊಳ್ಳುವ ಅಗತ್ಯವೇನಿಲ್ಲ. ಏಕೆಂದರೆ ನೀವು ಮಾತೆತ್ತಿದ್ದರೆ, ನಾನು ಅದಕ್ಕೆ ಖರ್ಚು ಮಾಡಿದೆ, ಇದಕ್ಕೆ, ಅಲ್ಲಿಗೆ, ಇಲ್ಲಿಗೆ ಖರ್ಚು ಮಾಡಿದೆಯೆಂದು ಹೇಳುತ್ತೀರಿ. ಕರ್ನಾಟಕ ರಾಜ್ಯದಲ್ಲಿ ಸುಮಾರು 1996-97 ರಿಂದ 2003-04 ರವರೆಗೆ deficit budget, revenue deficit ಇತ್ತು. ನಾವು 2002ರಲ್ಲಿ Fiscal Responsibility Act ಅನ್ನು ಪಾಸ್ ಮಾಡಿಕೊಂಡು ಕರ್ನಾಟಕದಲ್ಲೂ ಕೂಡ ಆರ್ಥಿಕ ಶಿಸ್ತನ್ನು ತರಲಿಕ್ಕೆ ಪ್ರಯತ್ನ ಮಾಡಿದ ಮೇಲೆ Fiscal correction and fiscal consolidation ಮಾಡಲಿಕ್ಕೆ ಪ್ರಾರಂಭ ಮಾಡಿದೆ ಮೇಲೆ, ಆ Fiscal correction and fiscal consolidation ನಲ್ಲಿ 2005-06ರ ಮಾರ್ಚ್‌ನೊಳಗೆ ಏನೇನು ನಾವು achieve ಮಾಡಬೇಕೆಂದು ಹೇಳಿದ್ದೆವೋ ಅದನ್ನು ಧರಂಸಿಂಗ್‌ರವರು ಮುಖ್ಯಮಂತ್ರಿಯಾಗಿರುವಾಗ, ನಾನು ಹಣಕಾಸಿನ ಮಂತ್ರಿಯಾಗಿರುವಾಗ, ಆ ಸಮ್ಮಿಶ್ರ ಸರ್ಕಾರದಲ್ಲಿ ಗುರಿಗಳನ್ನು ಒಂದು ವರ್ಷ ಮುಂಚಿತವಾಗಿ reach ಆಗಿಬಿಟ್ಟೆವು. 2004-06ರ ಮಾರ್ಚ್‌ನೊಳಗೆ revenue deficit ಏನಿತ್ತು ಆ ರೆವಿನ್ಯೂ ಖೋತಾವನ್ನು ತೆಗೆದು ಹಾಕಿ ರೆವಿನ್ಯೂ ಸರ್‌ಪ್ಲಸ್ ಅನ್ನು ತಂದೆವು. For the first time in the year 2004-05. ನನಗೆ ಜ್ಞಾಪಕವಿರುವ ಮಟ್ಟಿಗೆ ಸುಮಾರು 854/- ಕೋಟಿ ರೂಪಾಯಿಗಳನ್ನು ಖೋತಾದಿಂದ ಸರ್‌ಪ್ಲಸ್‌ಗೆ ತಂದೆವು. 4% ಗಿಂತ ಹೆಚ್ಚು fiscal deficit ಅನ್ನು 2.85% ಕ್ಕೆ ತಂದೆವು. ಹಾಗಾಗಿ ಕರ್ನಾಟಕದಲ್ಲಿ

ಆರ್ಥಿಕ ಸುಧಾರಣೆಯನ್ನು ತಂದ ಮೇಲೆ ಆರ್ಥಿಕ ಶಿಸ್ತನ್ನು ತೆಗೆದುಕೊಂಡು ಬಂದು ಕರ್ನಾಟಕದ ಆರ್ಥಿಕ ಪರಿಸ್ಥಿತಿಯನ್ನು ಸುಸ್ಥಿತಿಗೆ ತಂದಂಥ credit ಯಾರಿಗೆ ಹೋಗಬೇಕೆಂದರೆ, it is not to Mr.Yediyurappa, ನಮಗೆ ಸೇರಬೇಕು, ನಾವು ಬಂದ ಮೇಲೆ revenue surplus ಆಯಿತು. revenue deficit ಕಡಿಮೆ ಆಯಿತು. ಸಾಲದ ಭಾರ ಕಡಿಮೆಯಾಯಿತು, net savings ಕಡಿಮೆ ಆಯಿತು. ತೆರಿಗೆ ಪ್ರಮಾಣವು ಜಾಸ್ತಿಯಾಯಿತು. ಮೂರನೆಯದು 20%, 2004–05 ರಲ್ಲಿ 26% ರಿಂದ 27%, 2005–06ರಲ್ಲಿ again 25% ರಿಂದ 26% ಈ ವರ್ಷ 2006–07 ರಲ್ಲಿ ಸುಮಾರು 22% revenue growth ಆಗಿದೆ. ಸುಮಾರು 22% ರೆವಿನ್ಯೂ ಗ್ರೋತ್ ಆಗಿದೆ. ಮತ್ತು ಕೇಂದ್ರ ಸರ್ಕಾರದಿಂದ 2005–06ಕ್ಕೆ ಹೋಲಿಕೆ ಮಾಡಿದರೆ 3300 ಕೋಟಿ ರೂಪಾಯಿಗಳಿಗೂ ಹೆಚ್ಚು ನಮ್ಮ ತೆರಿಗೆ ಪಾಲು ಮತ್ತು Grant-in-Aid ಬಂದಿದೆ. ಕೇಂದ್ರ ಸರ್ಕಾರದಿಂದ ಬಂದ ತೆರಿಗೆ ಪಾಲು, 2005–06 ಕ್ಕೆ ಕಂಪೇರ್ ಮಾಡಿದರೆ, 2006–07 ರಲ್ಲಿ ಸುಮಾರು 2 ಸಾವಿರ ಕೋಟಿಗಿಂತ ಹೆಚ್ಚು ಸೆಂಟ್ರಲ್ ಗ್ರಾಂಟ್ ಬಂದಿದೆ. ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್‌ನ ಪ್ಲಾನ್‌ನಲ್ಲಿ ಬರತಕ್ಕಂತಹ ಹಣ 2 ಸಾವಿರ ಕೋಟಿಗಿಂತ ಹೆಚ್ಚು ಹಣ ಬಂದಿದೆ. ನಮ್ಮ ತೆರಿಗೆ ಪಾಲಿನಲ್ಲಿ 1 ಸಾವಿರ ಕೋಟಿಗಿಂತ ಹೆಚ್ಚು ಹಣ ಬಂದಿದೆ. ಅಂದರೆ 3300 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಕೇಂದ್ರ ಸರ್ಕಾರದಿಂದ ಬಂದಿದೆ. ಆದ್ದರಿಂದ ಈಗ ಯಡಿಯೂರಪ್ಪನವರು ಮೀಸೆ ತಿರುಗಿಸಲೇಬೇಕು. ಅವರ ಶ್ರಮ ಏನೂ ಇಲ್ಲದೇ ಹೋದರೂ ಕೂಡ.....

ಶ್ರೀ ಎಂ.ಶಿವಣ್ಣ :– ಆಗ ತಾವು ಯಾವ ಪಾರ್ಟಿಯಲ್ಲಿದ್ದಿರಿ?

(ಗೊಂದಲ)

ಶ್ರೀ ಸಿದ್ಧರಾಮಯ್ಯ :– ನೀವು ಆಗ ಬಂದಿದ್ದರಲ್ಲವೇ? ನೀವು ನನ್ನ ವಿರುದ್ಧ ಕೆಲಸ ಮಾಡುವುದಕ್ಕೆ ಬಂದಿದ್ದೀರಿ. ತಾವು ಆಗ ಎಲ್ಲಿದ್ದಿರಿ ಅಂತ ಗೊತ್ತಾಯಿತಲ್ಲವೇ? ಹಣಕಾಸಿನ ಸಚಿವರು ಇದ್ದಾರೆ ಅವರು ಉತ್ತರ ಕೊಡುತ್ತಾರೆ. ತಾವು ಕುಳಿತುಕೊಳ್ಳಿ. ತಾವು ಮಧ್ಯದಲ್ಲಿ ಏತಕ್ಕೆ ಮಾತನಾಡುತ್ತೀರಿ?

ಶ್ರೀ ಮಹಿಮಾ ಜೆ. ಪಟೇಲ್ :– ತಾವು ಮಾತನಾಡುವಾಗ ನಿಮಗೆ ಸೇರಬೇಕಾದ್ದು ಅಂತ ಹೇಳಿದಿರಿ. ಅದರ ಅರ್ಥವೇನು ಅಂತ ಅವರು ಕೇಳಿದರು.

ಶ್ರೀ ಸಿದ್ಧರಾಮಯ್ಯ :– ಅದನ್ನು ಆಮೇಲೆ ಹೇಳುತ್ತೇನೆ.

ಶ್ರೀ ಮಹಿಮಾ ಜೆ. ಪಟೇಲ್ :– ಆಗ ನಮಗೆ ಅಂದರೆ ಕಾಂಗ್ರೆಸ್ ಜನತಾದಳ ಎರಡೂ ಒಟ್ಟಿಗೆ ಇತ್ತು. ಅದಕ್ಕೆ ಕೇಳಿದೆ.

ಶ್ರೀ ಸಿದ್ಧರಾಮಯ್ಯ :– ಆಗ ನಾನು ಸಹ ನಿಮ್ಮ ಜೊತೆಯಲ್ಲಿಯೇ ಇದ್ದೆ. ಸಮ್ಮಿಶ್ರ ಸರ್ಕಾರ ಅಂದರೆ ಧರ್ಮಸಿಂಗ್ ಸರ್ಕಾರ ಎನ್ನುವುದು ಗೊತ್ತಿಲ್ಲವೇ? ಕಾಂಗ್ರೆಸ್ ಸರ್ಕಾರ ಅಂದರೆ ಜಗತ್ತಿಗೆ ಗೊತ್ತಿರುವ ವಿಷಯ. ಪದೇ ಪದೇ ಬಿಡಿಸಿ ಹೇಳಬೇಕೆ? ತಾವು ಸ್ವಲ್ಪ ದಿನ ಧ್ಯಾನ ಮಾಡುವುದಕ್ಕೆ ಹೋಗಿದ್ದರಲ್ಲವೇ?

ಶ್ರೀ ಮಹಿಮಾ ಜೆ. ಪಟೇಲ್ :– ಧ್ಯಾನ ಮಾಡುವುದಕ್ಕೆ ನಾನು ಕೂಡಲ ಸಂಗಮಕ್ಕೆ ಹೋಗಿದ್ದೆ. ನೀವು ಧ್ಯಾನ ಮಾಡುವುದಕ್ಕೆ ಕಾಂಗ್ರೆಸ್‌ಗೆ ಹೋಗಿದ್ದೀರಿ.

ಶ್ರೀ ಸಿದ್ಧರಾಮಯ್ಯ :– ಈಗ ಫಿಲಾಸಫಿ ಬಗ್ಗೆ ಮಾತನಾಡುವುದು, ಐಡಿಯಾಲಜಿ ಬಗ್ಗೆ ಮಾತನಾಡುವುದು, ಆ ಬಗ್ಗೆ ಚರ್ಚೆ ಬೇಡ. ಅದು ಈಗ ಅನಗತ್ಯ. ನಾನು ಹಣಕಾಸಿನ ಸಚಿವನಾಗಿದ್ದರಿಂದ ನಾನು ಸಪ್ಲಿಮೆಂಟರಿ ಏತಕ್ಕೆ ಮಂಡಿಸಿದಿರಿ, ಅದನ್ನು ವಿರೋಧ ಮಾಡಬೇಕೆನ್ನುವುದಕ್ಕೆ ನಾನು ಮಾತನಾಡುವುದಿಲ್ಲ. ಮಾನ್ಯ ಅಧ್ಯಕ್ಷರೇ, ಮುಂದಿನ ವರ್ಷದ ಸಾಲ, ಈಗ ಇವರು 25 ಸಾವಿರ ರೂಪಾಯಿ ಸಾಲ ಮನ್ನಾ ಮಾಡುತ್ತೇವೆ, ಅದಕ್ಕೆ ಹಣ ಈಗಲೇ ಇಟ್ಟುಕೊಂಡಿದ್ದೇವೆಂದು ಹೇಳಿದರೆ ಹೇಗೆ? ಆ 500 ಕೋಟಿ ರೂಪಾಯಿಗಳನ್ನು ನೀವು ಈಗಲೇ ಏತಕ್ಕೆ ಇಟ್ಟುಕೊಳ್ಳಬೇಕಾಗಿತ್ತು. ಹಿಂದಿನ ಸಾಲದ ಹಣ ಕೊಟ್ಟಿಲ್ಲ. ಎಲ್ಲಾ ಡಿ.ಸಿ.ಸಿ ಬ್ಯಾಂಕ್‌ಗಳಿಗೆ ಹಣ ಬಾಕಿ ಇದೆ. 2004–05 ನೇ ಇಸವಿಯಲ್ಲಿ 49 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ provide ಮಾಡಿ ಯಾರು ಪಿ.ಎಲ್.ಡಿ. ಬ್ಯಾಂಕ್ ನಲ್ಲಿ ಸಾಲ ತೆಗೆದುಕೊಂಡಿದ್ದಾರೆ ಯಾರು ಅಸಲಿಗಿಂತ ಬಡ್ಡಿಯನ್ನೇ ಜಾಸ್ತಿ ಕಟ್ಟಿದ್ದಾರೆ ಅವರ ಸಾಲ ಮನ್ನಾ ಮಾಡಬೇಕು ಅಂತ ಹೇಳಿ 49 ಕೋಟಿ ರೂಪಾಯಿಗಳನ್ನು ಸೇರಿಸಿದ್ದೀರಿ. ಅದು ನಿಮಗೆ ಗೊತ್ತಿರಲಿಲ್ಲವೇ? 24 ಕೋಟಿ

ರೂಪಾಯಿಗಳು ಕೊಟ್ಟಿದ್ದೇವೆ, ಇನ್ನು 24 ಕೋಟಿ ರೂಪಾಯಿ ಕೊಡಬೇಕು ಅಂತ ಸೇರಿಸಿದ್ದೀರಿ. Is it an unforeseen expenditure? ಇದು ಯಾವ ಪ್ರಿನ್ಸಿಪಲ್? ಅಥವಾ ಹೊಸ ಸೇವೆಗಳಲ್ಲಿ ಬರುತ್ತದೆಯೇ? ನಾನು ಪೂರಕ ಅಂದಾಜುಗಳ ಮೇಲೆಯೇ ಮಾತನಾಡುತ್ತಿದ್ದೇನೆ. ಈಗ 5994 ಕೋಟಿ ರೂಪಾಯಿ ಕೇಳಿದ್ದೀರಿ. ಹೋದ ಸಲ ಬೆಳಗಾಂನಲ್ಲಿ ಆದ ಅಧಿವೇಶನದಲ್ಲಿ 1408 ಕೋಟಿ ರೂಪಾಯಿ ಕೇಳಿದ್ದೀರಿ. ಒಟ್ಟು ಎಷ್ಟು ಎಸ್ಟೀಮೇಟ್ ಮಾಡಿದ್ದೀರಿ ರೂಪಾಯಿ 41,136 ಕೋಟಿಯಲ್ಲವೇ? ಅದರಲ್ಲಿ ರೂ.7400 ಕೋಟಿ ಸಪ್ಲಿಮೆಂಟರಿಯಲ್ಲಿಯೇ ಅಂದರೆ, ಬಜೆಟ್‌ನಲ್ಲಿ ಎಷ್ಟು ಭಾಗ ಆಯಿತು ಹೇಳಿ. It is nearly 1/6th of the total budget; it is of the total budget around 20%. ಬಜೆಟ್‌ಗೆ ಒಂದು, Sanctity ಉಳಿಯುವುದಿಲ್ಲ ಅಂತ. ಈಗಾಗಲ್ಲೇ ತಾವು ಕೆಲವೆಲ್ಲಾ ಹೊಸ ಸಂಪ್ರದಾಯಗಳನ್ನು ಹಾಕಿದ್ದೀರಿ. ಬಜೆಟ್‌ಗಿಂತ ಮುಂಚಿತವಾಗಿಯೇ ಎಲ್ಲಾ ವಿಷಯಗಳನ್ನು ಹೇಳಿಬಿಟ್ಟಿದ್ದೀರಿ. ಅದು ಟಿ.ವಿ.ಯಲ್ಲಿ ಎಲ್ಲಾ ಬಂತು. ಪತ್ರಿಕೆಗಳಲ್ಲಿ ಎಲ್ಲಾ ಬಂತು. ಮೊನ್ನೆ ಅಡಿಶನಲ್ ಬಜೆಟ್ ತಂದಿರಿ. 50 ಸಾವಿರ ರೂಪಾಯಿ ಸಾಲದಲ್ಲಿ 25 ಸಾವಿರ ರೂಪಾಯಿ ಸಾಲ ಕಟ್ಟಿದರೆ 25 ಸಾವಿರ ಸಾಲ ಮನ್ನಾ, ಜನರಲ್ ಬಜೆಟ್ ಮೇಲೆ ಚರ್ಚೆಯೇ ಪ್ರಾರಂಭವಾಗಿಲ್ಲ, ಚರ್ಚೆ ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿ ಜನರಲ್ ಬಜೆಟ್‌ನಲ್ಲಿ ಹೇಳುವುದನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೇಳುವುದು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೇಳುವುದು, ಈ ತರಹ ಆದರೆ ಇದನ್ನು ನಾವು ಒಪ್ಪಿಕೊಳ್ಳಬೇಕಾ? ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಈ ತರಹ ನೀವು ಇಷ್ಟೆಲ್ಲಾ ಹೇಳಿದ ಮೇಲೆ ಒಪ್ಪಿಕೊಳ್ಳುತ್ತೇನೆ. ಆದರೆ ಇಂತಹ ಸಂಪ್ರದಾಯವನ್ನು ನೀವು ಇನ್ನು ಮುಂದೆ ಬಿಡಬೇಕು. ಇಂತದ್ದಕ್ಕೆಲ್ಲಾ ಅವಕಾಶ ಕೊಡಬಾರದು ಅದು ಒಳ್ಳೆಯದಲ್ಲ.

ಶ್ರೀ ಅರಗ ಜ್ಞಾನೇಂದ್ರ :- ತಾವು Finance Minister ಆಗಿದ್ದಾಗ ಇದನ್ನು ಮಂಡನೆ ಮಾಡುವಾಗ ನಾನು ಆ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದೆ. ಆಗ ತಾವೇನು ಹೇಳಿದಿರಿ ಒಂದು ಸರ್ಕಾರ ಪೂರಕ ಅಂದಾಜುಗಳನ್ನು ಮಂಡನೆ ಮಾಡುತ್ತದೆಂದರೆ, ಆ ಸರ್ಕಾರ ಅಷ್ಟು ಹಣಕಾಸನ್ನು ನಿಭಾಯಿಸುವಂಥ

ಶಕ್ತಿಯನ್ನು ಪಡೆದಿದೆ, ಅದಕ್ಕಾಗಿ ತಾವು ನನಗೆ ಅಭಿನಂದನೆಗಳನ್ನು ಹೇಳಬೇಕು ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಅದು ರೆಕಾರ್ಡ್ ಆಗಿದೆ. ನನಗೆ ನೆನಪಿದೆ, ಆದ್ದರಿಂದ 6,000, 7,000/– ಕೋಟಿ ರೂಪಾಯಿಗಳ ಪೂರಕ ಅಂದಾಜನ್ನು ಮಂಡಿಸುತ್ತದೆ ಅಂದರೆ ಬಹುಶಃ ಈ ಸರ್ಕಾರಕ್ಕೂ ಅದೇ ಅರ್ಥವಲ್ಲವೇ? ಅದೇನು ದೊಡ್ಡದಲ್ಲ, ಅವರೇ ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ :– ಆಯಿತು, ಕರೆಕ್ಟ್ ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಜ್ಞಾನೇಂದ್ರರವರೇ ಅದನ್ನು ಯಾವಾಗ ಮಂಡಿಸಬೇಕು?

ಶ್ರೀ ಅರಗ ಜ್ಞಾನೇಂದ್ರ :– ಅವರು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ :– ಹಾಗಾದರೆ ಒಂದು ಕೆಲಸವನ್ನು ಮಾಡೋಣ. ಈ ಸಾರಿ 47,000/– ಕೋಟಿ ರೂಪಾಯಿಗಳು ಖರ್ಚಾಗುತ್ತದೆಂಬ ಒಂದು ಬಜೆಟ್ ಎಸ್ಟಿಮೇಟ್ ಇದೆ. 47,000/– ರೂಪಾಯಿಗಳಲ್ಲಿ 27,000–00 ರೂಪಾಯಿಗಳನ್ನು ಮಂಡಿಸಿ, ನಂತರ 20,000–00 ರೂಪಾಯಿಗಳಿಗೆ ಸಪ್ಲಿಮೆಂಟರಿ ಬಜೆಟ್ ಆಮೇಲೆ ಮಂಡಿಸೋಣ. ಸಪ್ಲಿಮೆಂಟರಿ ಮಾಡೋಣ. ಹಾಗೆ ಮಾಡಲಿಕ್ಕೆ ಬರುವುದಿಲ್ಲ 50% fixed ಮಾಡಿ ಎರಡು ಸಾರಿ strict ಮಾಡಿಬಿಟ್ಟು ಮಾಡೋಣ. 27,000–00 ರೂಪಾಯಿಗಳು ಒಂದು ಸಾರಿ, 20,000–00 ರೂಪಾಯಿಗಳು ಒಂದು ಸಾರಿ ಮಾಡೋಣ. ನಾನು ಏನು ಹೇಳುತ್ತೇನೆಂದರೆ, I am not criticizing. ಆದರೆ ಈ ರೀತಿ ಸರಿಯಿಲ್ಲ. ಈಗ ನೀವು 1950–00 ಕೋಟಿ ರೂಪಾಯಿಗಳನ್ನು ಬೆಳೆ ಸಾಲಕ್ಕೆ ಕಟ್ಟಬೇಕಾಗುತ್ತದೆಂದು 500–00 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟಿದ್ದೀರಿ. ಸಪ್ಲಿಮೆಂಟರಿ 500.00 ಕೋಟಿ ರೂಪಾಯಿಗಳನ್ನಿಟ್ಟಿದ್ದೀರಿ, ಒಟ್ಟಿಗೆ 1,000–00 ಕೋಟಿ ರೂಪಾಯಿಗಳನ್ನು ಇಡೋಣ. ಆಮೇಲೆ ಇದರ ಬಗ್ಗೆ ಒಟ್ಟಿಗೆ ಚರ್ಚೆ ಮಾಡಬಹುದಿತ್ತಲ್ಲಾ. ಮುಂದಿನ ವರ್ಷದ ಖರ್ಚಿಗೆ ನೀವು ಈಗಲೇ ಇಟ್ಟುಕೊಂಡು ಕುಳಿತರೆ ಹೇಗೆ? ಹಾಗಾದರೆ 29 ಕೋಟಿ ಯಾಕೆ ಒಂದು ವರ್ಷದಿಂದ ಕಟ್ಟಲಿಲ್ಲ? ಇನ್ನೊಂದು 2002 ರಲ್ಲಿ ಬೆಳೆ

ಸಾಲ ಮನ್ನಾ ಮಾಡಿದ್ದು 12 ಕೋಟಿ ಇದೆ, ಮತ್ತೆ 6% ಗೆ ನಾವು ಬಡ್ಡಿದರ ಇಳಿಸಿದಾಗ ಅದರ ಬಾಕಿ ಈಗ ಸೇರಿಸಿಕೊಂಡು ಕೊಡುತ್ತಾ ಇದ್ದೀರಿ. ಹೋದ ವರ್ಷವೇ ಕಟ್ಟಿಬಿಡಬಹುದಿತ್ತಲ್ಲ. ಕಳೆದ ವರ್ಷವೇ ಬಜೆಟ್‌ನಲ್ಲೇ ಬಡ್ಡಿ ಮನ್ನಾ ಸೇರಿಸಿದ್ದೀರಿ. ಪೂರಕ ಅಂದಾಜುಗಳಲ್ಲಿ ಯಾಕೆ ತೆಗೆದುಕೊಂಡು ಬಂದಿರಿ? Is it a unforeseen expenditure? ಅಥವಾ ಹೊಸ ಸೇವೆನಾ ಅದು? ಎಲ್ಲರಿಗೂ ಗೊತ್ತಿರುವುದೇ. ಅದನ್ನು ಬಜೆಟ್‌ನಲ್ಲೇ ಸೇರಿಸಬಹುದಿತ್ತಲ್ಲ. That is my question, ನಾವು ನೀವೂ ಅಂತ ಅಲ್ಲ ಇದು. ಇದು ಜನರ ತೆರಿಗೆ ಹಣ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಇದು ಹೆಚ್ಚು ಗಳಿಕೆಯದು, ನಾವು ಹಣಕಾಸನ್ನು ಚೆನ್ನಾಗಿ ನಿರ್ವಹಣೆ ಮಾಡಿದ್ದರಿಂದ ಹೆಚ್ಚು ಹಣ ಬಂದಿರುವುದು.

ಶ್ರೀ ಸಿದ್ಧರಾಮಯ್ಯ :- ಹಾಗಾದರೆ ಕೇಂದ್ರ ಸರ್ಕಾರದ್ದೂ ನೀವೇ ನಿರ್ವಹಣೆ ಮಾಡಿಬಿಟ್ಟಿರ? 3300 ಕೋಟಿ ಬಂದಿದೆಯಲ್ಲ ಅದೂ ನಿಮ್ಮದೇ ನಿರ್ವಹಣೆ? ಪಾಪ ಅಲ್ಲಿ ಹಣಕಾಸು ಸಚಿವರಿದ್ದಾರಲ್ಲ ಚಿದಂಬರಂ ಅವರದೇನೂ ನಿರ್ವಹಣೆ ಇಲ್ಲವ? ಅವರದು ಕಳೆದ ವರ್ಷಕ್ಕೂ ಈ ವರ್ಷಕ್ಕೂ 20 ಸಾವಿರ ಕೋಟಿ ತೆರಿಗೆ ಹೆಚ್ಚಾಗಿದೆ. ಅದಕ್ಕೂ ನೀವೇ ಜವಾಬ್ದಾರರೇ?

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವು ಹಣಕಾಸು ಸಚಿವರಾಗಿದ್ದಾಗ ಯಾವತ್ತಾದರೂ ಸಾರ್ವಜನಿಕವಾಗಿಯಾಗಲಿ ಸದನದಲ್ಲಾಗಲಿ ನಿಮ್ಮ ಹಣಕಾಸಿನ ನಿರ್ವಹಣೆ ಚೆನ್ನಾಗಿರಲಿಲ್ಲ ಅಂತ ಹೇಳಿದ್ದೀನಾ?

ಶ್ರೀ ಸಿದ್ಧರಾಮಯ್ಯ :- ಇಲ್ಲೇ ಹೇಳಿದ್ದೀರಿ ಬಿಡಿ. ಅದನ್ನು ಹೇಳಬಾರದು ಅಂತ ಇದ್ದೆ, ಹೇಳುತ್ತೇನೆ. 4% ಬಡ್ಡಿ ದರದಲ್ಲಿ ರೈತರಿಗೆ ಸಾಲ ಸಿಗುವಂಥದು ಸಹಕಾರ ಸಂಸ್ಥೆಗಳಿಂದ ಇತಿಹಾಸ ನಿರ್ಮಾಣ ಮಾಡಿದ್ದೇವೆ ಅಂತ ಹೇಳಲಿಲ್ಲವೇ? 11.5% ಇತ್ತು, ಅದನ್ನು 6% ಗೆ ಇಳಿಸಿದಾಗ ಎಷ್ಟು ವ್ಯತ್ಯಾಸ? 5.5% ನೀವು 6% ನಿಂದ ಈಗ 4% ಗೆ ಇಳಿಸಿದಾಗ ಎಷ್ಟು ವ್ಯತ್ಯಾಸ? 2%. 2% ಗೆ ಇಳಿಸಿದವರು ದೊಡ್ಡ ಕಿರೀಟ ಹಾಕಿಕೊಳ್ಳಬೇಕೋ 5.5% ಇಳಿಸಿದವರು ಕಿರೀಟ ಹಾಕಿಕೊಳ್ಳಬೇಕೋ? ಹೇಳಿ. ಮಾತೆತ್ತಿದರೆ ಇತಿಹಾಸ ಅಂತ ಹೇಳುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಹಾಗಾದರೆ ಬೇರೆ ರಾಜ್ಯಗಳಲ್ಲಿದ್ದ ಕಾಂಗ್ರೆಸ್ ನವರು ಯಾಕೆ ಮಾಡಲಿಲ್ಲ, ಇದನ್ನು?

ಶ್ರೀ ಸಿದ್ಧರಾಮಯ್ಯ :- ಅದನ್ನು ಆ ರಾಜ್ಯಗಳಲ್ಲಿ ಕೇಳಬೇಕು. ಹಾಗಾದರೆ 11.5% ಇದ್ದದನ್ನು 6% ಗೆ ಇಳಿಸಿದಾಗ ನಿಮ್ಮ ಬಿಜೆಪಿ ಸರ್ಕಾರಗಳು ಯಾಕೆ ಮಾಡಲಿಲ್ಲ ? ಗುಜರಾತ್ ಮಧ್ಯಪ್ರದೇಶಗಳಲ್ಲಿ ಮಾಡಿದ್ದೀರ?

(ಗೊಂದಲ)

ನಾನು ಯಾರ ಮೇಲೆಯೂ ಆರೋಪ ಮಾಡಲು ಹೋಗುವುದಿಲ್ಲ. ಹಾಗೆ ಹೇಳಲು ಬರುವುದಿಲ್ಲ. ನಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ. ನಮಗೆ ತೆರಿಗೆ ಹೆಚ್ಚಾಗಿ ಬರುತ್ತದೆ. ಕೇಂದ್ರ ಸರ್ಕಾರದಿಂದ ಕೂಡ ನಮ್ಮ ಪಾಲಿಗೆ ತೆರಿಗೆ ಹೆಚ್ಚಾಗಿ ಬರುತ್ತಾ ಇದೆ. ಆದ್ದರಿಂದ ನಾವು ಹೆಚ್ಚಿಗೆ ಕೆಲಸ ಮಾಡುತ್ತೇವೆ. ಬಿಹಾರದಲ್ಲಿ even today there is a revenue deficit. Even today there is a fiscal deficit. ಬಿಹಾರ ಉತ್ತರ ಪ್ರದೇಶಗಳಲ್ಲಿ ಇಷ್ಟು ಕಡಿಮೆ ಬಡ್ಡಿಗೆ ಕೊಡುತ್ತಾರೆ? ಹಾಗೆ ಲೆಕ್ಕ ಹಾಕಿದರೆ ನಾವು ಬಹಳ ಎದೆತಟ್ಟಿಕೊಳ್ಳಬೇಕಾಗಿಲ್ಲ. ನಾವು poverty ಯಲ್ಲಿ 8ನೇ ಜಾಗದಲ್ಲಿದ್ದೇವೆ. ನಾನೂ ನಿಮಗೆ ಹೇಳಲಿಲ್ಲ, ನಮ್ಮ ರಾಜ್ಯದ ಪರಿಸ್ಥಿತಿ ಹೇಳುತ್ತಿದ್ದೇನೆ. ಇವತ್ತು ನಮ್ಮ ರಾಜ್ಯದಲ್ಲಿ 1.39 ಕೋಟಿ ಬಡತನದ ರೇಖೆಗಿಂತ ಕೆಳಗಿರುವವರು ಅಂತ ಹೇಳುತ್ತಾರೆ, ನಾನು ಅದನ್ನು ನಂಬುವುದಿಲ್ಲ. 5.5 ಕೋಟಿ ಜನಸಂಖ್ಯೆಯಲ್ಲಿ 2 ಕೋಟಿ below poverty line ಇದ್ದಾರೆ. ಯಾಕೆಂದರೆ, ಅವರು ಏನು ಹೇಳುತ್ತಾರೆ ಒಂದು ತಿಂಗಳಿಗೆ 324 ರೂಪಾಯಿಗಳಿಗಿಂತ ವರಮಾನ ಕಡಿಮೆ ಇದ್ದರೆ ಅವನ below poverty line ಗಿಂತ ಕೆಳಗಿದ್ದಾನೆ ಅಂತ ಲೆಕ್ಕ. 325 ಇತ್ತು ಅಂದರೆ ಇಲ್ಲ. ಅದೇ ಪಟ್ಟಣದಲ್ಲಿ 356ಕ್ಕಿಂತ ಒಂದು ತಿಂಗಳ ವರಮಾನ ಕಡಿಮೆ ಇದ್ದರೆ ಆತ BPL ಗಿಂತ ಕೆಳಗಿದ್ದಾನೆ ಅಂತ ಹೇಳುತ್ತಾರೆ. 357 ಆಗಿಬಿಟ್ಟರೆ ಇಲ್ಲ. ಆ ಲೆಕ್ಕಾಚಾರವೇ ಅವೈಜ್ಞಾನಿಕ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಯೋಜನಾ ಆಯೋಗದ ತೀರ್ಮಾನದಂತೆ 2200 ಕ್ಯಾಲರೀಸ್ ಒಬ್ಬನಿಗೆ ಸಿಕ್ಕಿದರೆ ಅವನು ಕನಿಷ್ಠ ಬದುಕಲು ಸಾಧ್ಯ. ಆದರೆ

ಇದೇ ಯೋಜನಾ ಆಯೋಗದ ಪ್ರಕಾರ ಈಗ ಇಂಡಿಯಾದ ಸರಾಸರಿ 1300 ಮಾತ್ರ. ಆದ್ದರಿಂದ ಈ ಲೆಕ್ಕಾಚಾರ ಸರಿಯಲ್ಲ.

ಶ್ರೀ ಸಿದ್ಧರಾಮಯ್ಯ :- ಆದ್ದರಿಂದ ನಾನು ಹೇಳುತ್ತಿದ್ದೇನೆ ಅಂದರೆ ನಮ್ಮ ರಾಜ್ಯವನ್ನು ಇನ್ನೂ ಬಹಳ ಮುಂದಕ್ಕೊಯ್ಯಬೇಕಾಗಿದೆ. ಶಿಕ್ಷಣ, ಅಭಿವೃದ್ಧಿ, ಮೂಲಭೂತ ಸೌಕರ್ಯಗಳಲ್ಲಿ ಮುಂದಕ್ಕೆ ಕೊಂಡೊಯ್ಯಬೇಕಾಗಿದೆ. ಯಾಕೆಂದರೆ ಒಬ್ಬ ವ್ಯಕ್ತಿಯ ವರಮಾನದ ಮೇಲೆ ರಾಜ್ಯ ಬೆಳವಣಿಗೆಯಾಗಿದೆಯಾ ಇಲ್ಲವ, ಜನರ ಬದುಕಿನಲ್ಲಿ ಗುಣಮಟ್ಟದ ಸುಧಾರಣೆಯಾಗಿದೆಯಾ ಇಲ್ಲವೇ? ಅಂತ ಹೇಳಲು ಬರುವುದಿಲ್ಲ. ಅವನಿಗೆ ಎರಡು ಹೊತ್ತು ಊಟ ಸಿಕ್ಕುತ್ತಿದೆಯಾ, ಆರೋಗ್ಯ ನೋಡಿಕೊಳ್ಳಲು ದುಡ್ಡಿದೆಯಾ? ಮಕ್ಕಳ ಶಿಕ್ಷಣ, ಕುಡಿಯಲು ನೀರು, ಮನೆ ಇಂಥಾದ್ದನ್ನೆಲ್ಲ ನೋಡಿ ಲೆಕ್ಕಹಾಕಬೇಕು. ಇವರೇನು ಮಾಡುತ್ತಾರೆ ಅಂದರೆ ವರಮಾನ ತಗೊಂಡುಬಿಡುತ್ತಾರೆ. ವರಮಾನ ಬೆಂಗಳೂರು ಜಿಲ್ಲೆಯಲ್ಲಿ ಒಂದು ತರಹ ಇದೆ, ಗುಲ್ಬರ್ಗದಲ್ಲಿ ಒಂದು ತರಹ ಇದೆ. ಇವೆರಡನ್ನು ಸರಾಸರಿ ಮಾಡಿ ವರಮಾನ ತಗೊಂಡರೆ ಆಗುತ್ತದ? ನಿಮಗೆ ಸುಮ್ಮನೆ ಉದಾಹರಣೆ ಹೇಳುತ್ತೇನೆ. ಈಗ debt servicing supplementary ಯಲ್ಲಿ ತಂದಿದ್ದೀರ. ನಿಮಗೆ debt servicing ಎಷ್ಟು ಅಂತ ಗೊತ್ತಿರಲಿಲ್ಲವ? ಅದೇನು unforeseen expenditure? ಏನೋ ಹೊಸ ಕೆಲಸ ಮಾಡಿದರೆ, ಅಭಿವೃದ್ಧಿ ಕೆಲಸ ಮಾಡಿದರೆ ತುರ್ತು ಕೆಲಸ ಮಾಡಿದಾಗ ಅಂಥ ಖರ್ಚು ಇಲ್ಲಿ ತಂದರೆ ತಕರಾರಿಲ್ಲ. ಈಗ PWD ಇಲಾಖೆಯದು ಒಟ್ಟು ಬಜೆಟ್ ಈ ವರ್ಷ ಇದ್ದುದು 2400 ಕೋಟಿ. ಅದರಲ್ಲಿ 750 ಕೋಟಿ ಬರೀ supplementary ಯಲ್ಲೇ ಕೊಟ್ಟಿದ್ದೀರಿ. One fourth of the total budget ಕೊಟ್ಟಿದ್ದೀರಿ. ಈ ತರಹ ಅಸಂಬದ್ಧವಾದದ್ದನ್ನು supplementary ಯಲ್ಲಿ ತಂದಿದ್ದೀರಲ್ಲ, ಇದು bad. ಆಮೇಲೆ ನೀವು ನಗರಪ್ರದೇಶಗಳಿಗೆ ಹಣ ಹಂಚಿದ್ದೀರಿ, ಒಂದು ಕಡೆ ನಂಜುಂಡಪ್ಪ ವರದಿ ಜಾರಿಗೆ ತರಬೇಕು, ಅದು ನಮಗೆ ಮಂತ್ರ ಅನ್ನುತ್ತೀರಿ. ಇನ್ನೊಂದು ಕಡೆ ನಿಮಗಿಷ್ಟ ಬಂದಂತೆ ನಿಮಗೆ ಯಾವ್ಯಾವ ಜಿಲ್ಲೆಗೆ ಬೇಕೋ ದುಡ್ಡು ಕೊಟ್ಟುಕೊಳ್ಳುತ್ತೀರಿ. ಶಿವಮೊಗ್ಗದ ನಗರಾಭಿವೃದ್ಧಿಗೆ 17.5 ಕೋಟಿ ಕೊಟ್ಟುಕೊಂಡಿದ್ದೀರಿ. ಅದು

ನಂಜುಂಡಪ್ಪ ವರದಿಯಲ್ಲಿ ಬಂದಿದೆಯಾ ಹೇಳಿ ನೋಡೋಣ. ಒಂದು ಕಡೆ imbalance ಆಗಿದೆ ಸಮಾನ ಬಳೆವಣಿಗೆ ಮಾಡಬೇಕು ಎಂದು argument ಮಾಡುತ್ತಾ ಇನ್ನೊಂದು ಕಡೆ imbalance ಅನ್ನು widen ಮಾಡುತ್ತಾ ಹೋದರೆ ನಿಮ್ಮ argument ನಲ್ಲಿ ಏನು ಸತ್ವ ಇದೆ, ಹೇಳಿ ನೋಡೋಣ. ಏನು ಸತ್ವ ಇದೆ? This is my point. ನೀವು 17 ಜಿಲ್ಲೆಗಳಿಗೆ ಐದೈದು ಕೋಟಿ ಕೊಟ್ಟಿದ್ದೀರಿ. ಶಿವಮೊಗ್ಗಕ್ಕೆ ಏಕೆ 17 ಕೋಟಿ ಕೊಟ್ಟಿದ್ದೀರಿ? ಸಮಾನವಾಗಿ ಎಲ್ಲರಿಗೂ ಹಂಚಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಹಿಂದೆ ಎಲ್ಲ ನಮಗೆ ಅನ್ಯಾಯ ಮಾಡಿದ್ದೀರಿ. ಅದಕ್ಕೆ ಸ್ವಲ್ಪ ಹೆಚ್ಚಿಗೆ ಮಾಡಿಕೊಂಡಿದ್ದೇವೆ.

ಶ್ರೀ ಸಿದ್ಧರಾಮಯ್ಯ :- ಹೌದೌದು. ನಾವು ಅನ್ಯಾಯ ಮಾಡಿಕೊಳ್ಳಬೇಕೆಂದರೆ ಬೇರೆಯವರಿಗೆ ಅನ್ಯಾಯ ಮಾಡಿದ್ದೇವೆಂದು ಅರ್ಥವೇ? ಈ ರೀತಿ ನಾನು ಒಂದು ಜಿಲ್ಲೆಗೆ ಕೊಟ್ಟಿರುವುದನ್ನು ತೋರಿಸಿಬಿಡಿ ನೋಡೋಣ. ಹಾಗಾದರೆ ನಿಮಗೆ ಅನ್ಯಾಯವಾಗಿದ್ದರೆ ನಂಜುಂಡಪ್ಪನವರ ವರದಿಯಲ್ಲಿ ಶಿವಮೊಗ್ಗ ಬರಬೇಕಾಗಿತ್ತಲ್ಲ. ನಿಮಗೆ ಅನ್ಯಾಯವಾಗಿದೆಯಲ್ಲ, ಬಹಳ ಹಿಂದಿನಿಂದ ಅನ್ಯಾಯವಾಗಿಬಿಟ್ಟಿದೆಯಲ್ಲ, ನಿಮ್ಮಲ್ಲಿ literacy percentage ಎಷ್ಟಿದೆ? ಗುಲ್ಬರ್ಗದಲ್ಲಿ ಎಷ್ಟಿದೆ? ಈ ರೀತಿ argument ಗೆ ಏನಾದರೂ ಅರ್ಥವಿದೆಯೇ? Supplementary budget ನಲ್ಲಿ ಶಿಕಾರಿಪುರ ದೇವಸ್ಥಾನಕ್ಕೆ ಹಾಕಿಕೊಂಡಿದ್ದೀರಿ. ಅದು ಯಾವ imbalance ನಲ್ಲಿ ಬರುತ್ತದೆ? This is my point. ಈ ರೀತಿ ನಮಗೆ ಭಯವೇನೆಂದರೆ ನಾವು ಒಂದು ಆರ್ಥಿಕ ಶಿಸ್ತನ್ನು ತೆಗೆದುಕೊಂಡು ಬಂದಿದ್ದೇವೆ. ಆರ್ಥಿಕ ಪರಿಸ್ಥಿತಿ ಸುಸ್ಥಿತಿಯಲ್ಲಿದೆ. ಇದನ್ನು ದಯಮಾಡಿ ಯಡಿಯೂರಪ್ಪನವರ ಕಾಲದಲ್ಲಿ ಹಾಳಾಯಿತು ಎನ್ನುವ ಅಪವಾದಕ್ಕೆ ಗುರಿಯಾಗಬೇಡಿ. That is my point. ಅದು ಆ ಕಡೆ ಹೋಗುತ್ತಿದೆ. ಗೊತ್ತು ಗುರಿ ಇಲ್ಲದೇ ಇರುವ ರೀತಿಯಲ್ಲಿ ನಾವು ಮಾಡಿಕೊಂಡು ಹೋದರೆ non developmental expenditure ಬಗ್ಗೆ ನಾನು ಬಜೆಟ್ ಬಗ್ಗೆ ಚರ್ಚೆ ಬಂದಾಗ ಹೇಳುತ್ತೇನೆ. 2004-05 ರಲ್ಲಿ developmental expenditure 56.72 ಇತ್ತು. Out of the total expenditure. ನಾನು 2005-06 ರಲ್ಲಿ ಬರುವಷ್ಟರಲ್ಲಿ ಒಂದು

ವರ್ಷದಲ್ಲಿ 62.95 ಇತ್ತು. ಈಗ ಇವರು ಬಂದಮೇಲೆ ಒಂದು ವರ್ಷದಲ್ಲಿ 63 ಬರೀ 0.5 ಮಾತ್ರ ಹೆಚ್ಚಾಗಿದೆ developmental expenditure. Do you agree with this? ಇದನ್ನು development ಎಂದು ಕರೆಯುತ್ತೀರಾ? ನೀವೇ Economic Survey ಯಲ್ಲಿ ಕೊಟ್ಟಿರುವ figures ಇದು. ಅದರಲ್ಲಿ ನೀವೇನು ಹೇಳಿದ್ದೀರಿ ಎಂದರೆ 2004–05 ನೇ ಇಸವಿಯಲ್ಲಿ total developmental expenditure 56.72 ಇದ್ದರೆ ಅದು 2005–06 ಕ್ಕೆ 92.95 ಆಗುತ್ತದೆ. It is more than 6% Developmental Expenditure ಬೆಳವಣಿಗೆಯಾಗುತ್ತದೆ. ಆದರೆ ನೀವು ಒಂದು ವರ್ಷದ ಅವಧಿಯಲ್ಲಿ 62.95 ರಿಂದ 0.5 ಬರೀ ಮಾತ್ರ ಹೆಚ್ಚಾಗಿದೆ. That means to say, ನೀವು non developmental ಕಡೆಗೆ ಹೆಚ್ಚು ಗಮನವನ್ನು ಕೊಟ್ಟಿದ್ದೀರಿ. ನೀವು ಆರ್ಥಿಕ ಶಿಸ್ತನ್ನು ಕಡೆಗಾಣಿಸಿದ್ದೀರಿ, Plan ಕಡೆಗೆ asset creation ಗೆ ನೀವು ಹೆಚ್ಚು ಗಮನವನ್ನು ಕೊಟ್ಟಿಲ್ಲವೆನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. This is the figures given in the Economic Survey 2006-07. This is not my figure. ನೀವು ಕೊಟ್ಟಿರುವ ಅಂಕಿ ಅಂಶಗಳೇ. ಇಷ್ಟೊಂದು ಹಣಕಾಸಿನ ಪರಿಸ್ಥಿತಿ ಸುಧಾರಣೆಯಾಗಿ, ನೀವು ಬಜೆಟ್‌ನಲ್ಲಿ ಹೇಳಿದ್ದೀರಿ", ನಮ್ಮ ಹತ್ತಿರ ಹಣಕಾಸು ತುಂಬಿ ತುಳುಕುತ್ತಿದೆ" ಎಂದು ಹೇಳಿದ್ದೀರಿ. ಹಾಗಾದರೆ 0.5 development ಸಾಕೋ? ಈ ರೀತಿಯಾದರೆ ನಮ್ಮ ರಾಜ್ಯದ ಬೆಳವಣಿಗೆ ಆಯಿತೋ? ಕೇಂದ್ರ ಸರ್ಕಾರದ ಬೆಳವಣಿಗೆ 2006–07ಕ್ಕೆ GDP ಬೆಳವಣಿಗೆ 9.2 ಆದರೆ ನಮ್ಮದು 7.9. 2005–06 ರಲ್ಲಿ ಅವರದ್ದು 7.8 ಆದರೆ ಅವರದ್ದು 9% ಅಂದರೆ ಕೇಂದ್ರ ಸರ್ಕಾರದ್ದು. ನಾವು ಎಲ್ಲಿದ್ದೇವೆ? 7.8, 7.9, Can we claim that our State is growing rapidly? we can't. ನಾನು ಇಷ್ಟಕ್ಕೆ ನಿಲ್ಲಿಸುತ್ತೇನೆ. ನಾನು ಹೆಚ್ಚು details ಗೆ ಹೋಗುವುದಿಲ್ಲ. ಆದ್ದರಿಂದ ನಾನೇನು ಹೇಳುತ್ತೇನೆ ಎಂದರೆ ನೀವು ಕಳೆದ ಒಂದು ವರ್ಷದಲ್ಲಿ developmental ಕಡೆಗೆ ಹೆಚ್ಚು ಗಮನವನ್ನು ಕೊಟ್ಟಿಲ್ಲ., ಇಷ್ಟೊಂದು supplementary budget ನಲ್ಲಿ ಹಣ ಖರ್ಚು ಮಾಡಿದರೂ ಕೂಡು development ಗೆ ರಾಜ್ಯದ ಬೆಳವಣಿಗೆಗೆ, ಆರ್ಥಿಕ ಬೆಳವಣಿಗೆಗೆ ಜನರ ತಲಾ ಆದಾಯದ ಬೆಳವಣಿಗೆಗೆ, ಜನರ ಬದುಕಿನಲ್ಲಿ ಸುಧಾರಣೆ, ಗುಣಮಟ್ಟದ ಬದುಕು

ಆಗುವುದಕ್ಕೆ ಇವೆಲ್ಲ ಮಾಡಿಲ್ಲ. This is my objection. ಇಷ್ಟಾದರೂ ಕೂಡ ನಾನು ಇದನ್ನು ಒಪ್ಪುವುದಿಲ್ಲವೆಂದು ಹೇಳುವುದಿಲ್ಲ. ಆದರೆ ಇನ್ನು ಮುಂದೆ ಈ ರೀತಿ ನಮ್ಮ principle ಗಳು ಏನಿವೆಯಲ್ಲ ಕಾನೂನಿನಲ್ಲಿ, ಅವೆಲ್ಲವನ್ನು ಗಾಳಿಗೆ ತೂರಿ, ಬಜೆಟ್ ತಯಾರು ಮಾಡುವುದಾಗಲಿ, ಖರ್ಚು ಮಾಡುವುದಾಗಲಿ, ಮಾಡದೇ ಇದನ್ನು ಸ್ವಲ್ಪ ಕಾನೂನಿನ ಚೌಕಟ್ಟಿನೊಳಗಡೆಯೇ ಸಾಧ್ಯವಾದ ಮಟ್ಟಿಗೆ ಕರಾರುವಾಕ್ಕಾಗಿ ಬಜೆಟ್‌ನ್ನು ತಯಾರುಮಾಡಬೇಕಾಗುತ್ತದೆ. hundred percent ಕರಾರುವಾಕ್ಕಾಗಿ ಯಾರೂ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರವೇ constitutional provision ಅನ್ನು ಮಾಡಿಕೊಂಡಿರುವುದು. ಅಂದರೆ 5%, 6%, 7% ಹೋಗಲಿ maximum 10% ಇರಬಹುದು, ಆದರೆ ಇದು 20%. ಇದು ಒಪ್ಪತಕ್ಕದ್ದಲ್ಲ. ಇದು ಸರಿಯಾದಂಥದ್ದೂ ಅಲ್ಲ. ಇದು ಆರ್ಥಿಕ ಶಿಸ್ತಿನ ಚೌಕಟ್ಟಿನೊಳಗಡೆ ಹೋಗತಕ್ಕದ್ದಲ್ಲ. ಇದನ್ನು ನಾನು ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತೇನೆ. ಸಲಹೆ ಬೇಕಾದರೆ ತೆಗೆದುಕೊಳ್ಳಲಿ. ಬಿಟ್ಟರೆ ಬಿಡಲಿ. ಆದರೆ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಏನು ಬುನಾದಿಯನ್ನು ಹಾಕಿದ್ದೇವೆ ಕಳೆದ 4–5 ವರ್ಷಗಳಿಂದ, ಅದು ಹಾಳಾಗಬಾರದು ಎನ್ನುವ ಕಳಕಳಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇಷ್ಟು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :– ಮಾನ್ಯ ಅಧ್ಯಕ್ಷರೇ, ಇವತ್ತು ಸನ್ಮಾನ್ಯ ಆರ್ಥಿಕ ಮಂತ್ರಿಗಳಾದ ಯಡಿಯೂರಪ್ಪನವರು ಎರಡನೇ ಹಾಗೂ ಅಂತಿಮ ಕಂತಿನ ಒಂದು ಪೂರಕ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಈ ವಿಚಾರದಲ್ಲಿ ಪ್ರತಿ ಪಕ್ಷದಲ್ಲಿರುವ ನಮ್ಮೆಲ್ಲ ನಾಯಕರು ಹಲವಾರು ವಿಚಾರಗಳನ್ನು ಇಲ್ಲಿ ಹೊರಗೆಡಹಿದ್ದಾರೆ. ತಿಳಿಸಿದ್ದಾರೆ. ತಿಳಿಸುವಂಥದ್ದನ್ನು ಮಾಡಿದ್ದಾರೆ. ಇದು ಸಂವಿಧಾನದ ಚೌಕಟ್ಟಿನೊಳಗಡೆ ಯಾವ ರೀತಿ ಮಾಡಬೇಕಾಗಿತ್ತು, ಇದು ಮಂಡನೆ ಮಾಡಿರುವಂಥದ್ದು ಯಾವ ರೀತಿ ವಿಭಿನ್ನವಾಗಿದೆ, ಆದ್ದರಿಂದ ಈ ತರಹ ಮಾಡಬಾರದಾಗಿತ್ತು, ಮುಂದೆ ಸಲಹೆಗಳನ್ನು ತೆಗೆದುಕೊಳ್ಳಿ, ಎನ್ನುವಂಥ ಮಟ್ಟದವರೆಗೂ ಮಾತನಾಡಿದ್ದಾರೆ. ಹಾಗೆಯೇಇದನ್ನೂ ಅನೈತಿಕವಾದ ರೀತಿಯಲ್ಲಿ ತಂದುಬಿಟ್ಟಿದ್ದೀರಿ, ಈ ತರಹ ತರಬಾರದಾಗಿತ್ತು ಎನ್ನುವ ರೀತಿಯಲ್ಲೂ ಕೂಡ

ಹಿರಿಯರು ಪ್ರತಿಪಾದನೆ ಮಾಡಿದ್ದಾರೆ. ಈಗ ನಾನು ತಮಗೆ ಈ ಒಂದು ಬಜೆಟ್‌ನಲ್ಲಿ ಎರಡೇ ಎರಡು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಪ್ರಾರಂಭದ ಟಿಪ್ಪಣಿಯಲ್ಲಿ ಅವರು ಹೇಳಿದ್ದಾರೆ. "2006–07ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಮಂಡಿಸಿದ ತರುವಾಯ ಸಾದಿಲ್ವಾರು ನಿಧಿಯಿಂದ ಮಂಜೂರಾದ ಮುಂಗಡಗಳಿಗೆ ಮತ್ತು ಇತರ ಅನಿರೀಕ್ಷಿತ ವೆಚ್ಚಗಳಿಗೆ ಸಂಬಂಧಿಸಿದ ಬಜೆಟ್ ಇದು". ಅಂದರೆ ನಮ್ಮ ಆರ್ಥಿಕ ಸಚಿವರು ಇಷ್ಟು ಪಾರದರ್ಶಕತೆಯಿಂದ ಈ ಒಂದು ಕೆಲಸಗಳನ್ನು ಮಾಡುತ್ತಿದ್ದಾರೆ, ಜನ ಸಾಮಾನ್ಯ ಕೊಡುವಂಥ ತೆರಿಗೆಯ ಒಂದೊಂದು ನಯಾ ಪೈಸೆಯ ಖರ್ಚನ್ನು ಕೂಡ ವೆಚ್ಚ ಮಾಡುವುದಕ್ಕೆ ಮುಂಚೆಯೇ ಈ ಒಂದು ಸದನದ ಮುಂದೆ ಇಟ್ಟು ಸದನದ ಪರಿಶೀಲನೆಗೆ ಒಳಪಡಿಸಿ ತದನಂತರ ವೆಚ್ಚ ಮಾಡಬೇಕೆನ್ನುವಂಥ ಮನೋಭಿಪ್ರಾಯವನ್ನು ಇಟ್ಟಿಕೊಂಡಿದ್ದಾರೆ, ಅಂದಾಗ ನಾವು ಅಭಿನಂದಿಸಬೇಕಾ? ಅಥವಾ ಸಂವಿಧಾನದ ಚೌಕಟ್ಟಿನೊಳಗಡೆ ಇದು ಬರಲಿಲ್ಲ ಎಂದು ಟೀಕೆಗಳ ಸುರಿಮಳೆಯನ್ನು ನಾವು ಕೊಡಬೇಕಾ? ನಾವು ಯೋಚನೆ ಮಾಡಬೇಕು. ಇವತ್ತು ಒಟ್ಟು ಈ ಒಂದು ಪೂರಕವಾದ ಬಜೆಟ್ ನಲ್ಲಿ 28 ಇಲಾಖೆಗಳಲ್ಲೂ ಕೂಡ ಒಂದೊಂದರಲ್ಲೂ ಕೂಡ ಈ ರಾಜ್ಯದಲ್ಲಿ ತೆರಿಗೆಯಿಂದ ಸಂಗ್ರಹವಾದ ಹಣವನ್ನು ಹೇಗೆ ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ಮೊದಲನೇ ಕಂತಿನ ಬಜೆಟ್ ನಲ್ಲಿ ಸುಮಾರು 45 ಸಾವಿರ ಕೋಟಿಯಲ್ಲಿ ತಿಳಿಸಿ, ಇವತ್ತು ಎರಡನೇ ಕಂತಿನಲ್ಲಿ ಇನ್ನೂ ನನಗೆ ಈ ಒಂದು ರಾಜ್ಯದ ಅಭಿವೃದ್ಧಿಯನ್ನು ಮಾಡಬೇಕೆಂದರೆ ಸುಮಾರು ಆರು ಸಾವಿರ ಕೋಟಿ ಹಣದ ಅಗತ್ಯತೆ ಇರುವಂಥದ್ದನ್ನು, ಅವಶ್ಯಕತೆ ಇರುವಂಥದ್ದನ್ನು ವಿಷದವಾಗಿ ಟಿಪ್ಪಣಿಗಳ ಸಹಿತ ನಮ್ಮ ಮುಂದೆ ಇಟ್ಟಿದ್ದಾರೆ. ಇದರಲ್ಲಿ ನಾನು ಒಂದು ಅಂಶವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಆರ್ಥಿಕ ಮಂತ್ರಿಗಳಾಗಿದ್ದಂಥ ಸಿದ್ಧರಾಮಯ್ಯನವರು ಹೇಳಿದರು, ನಾನು ಕೂಡ ಬಜೆಟ್ ಮಂಡನೆ ಮಾಡುವಂಥ ಸಂದರ್ಭದಲ್ಲಿ ಬೇಕಾದಷ್ಟು ರೀತಿಯಲ್ಲಿ ಯೋಚನೆಯನ್ನು ಮಾಡಿದ್ದೇನೆ, ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ, ಅವರ ಜೊತೆ ಸಮಗ್ರವಾಗಿ ಈ ರಾಜ್ಯಕ್ಕೆ ಏನೇನು ಹಣವನ್ನು ಒದಗಿಸಬೇಕಾಗಿದೆ ಎನ್ನುವಂಥದ್ದನ್ನು ಮಾಡಿದ್ದೇನೆ ಎಂದು ಅವರು ಕೂಡ ಈ ಪೂರಕ ಅಂದಾಜು ಬಜೆಟ್‌ಗಳನ್ನು ಮಂಡನೆ ಮಾಡಿರಲಿಲ್ಲವೇ?

ಬಹುಶಃ ನಮ್ಮ ರಾಜ್ಯದಲ್ಲಿ ಒಳ್ಳೆಯ ಆರ್ಥಿಕ ಮಂತ್ರಿಗಳು ಎನ್ನುವ ಹೆಸರನ್ನು ಅವರು ಪಡೆದಿದ್ದಾರೆ. ನಾನು ಅವರ ಒಬ್ಬ ಅಭಿಮಾನಿ ಕೂಡ. ಏಕೆಂದರೆ ಒಳ್ಳೆಯ ಆರ್ಥಿಕ ಮಂತ್ರಿಯಾಗಿ ಒಳ್ಳೆಯ ಕೆಲಸವನ್ನು ಅವರು ಮಾಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ವಿಭಿನ್ನವಾಗಿ ಸನ್ಮಾನ್ಯ ಯಡಿಯೂರಪ್ಪನವರು ಮಾಡಲಿಕ್ಕೆ ಹೊರಟಿದ್ದಾರೆ. ಒಂದು ರೀತಿಯಲ್ಲಿ ಸಾಧನೆ ಮಾಡಬೇಕು, ಇದುವರೆಗೂ ಸಿದ್ಧರಾಮಯ್ಯನವರು ಹೇಗೆ ಹೆಸರು ತರುವಂತೆ ಬಜೆಟ್ ಮಂಡಿಸಿದ್ದಾರೋ, ಅದಕ್ಕಿಂತಲೂ ಹೆಚ್ಚು ಹೆಸರು ತರುವಂಥಾದ್ದು, ರೈತರಿಗೆ ಅನುಕೂಲವಾಗುವಂಥಾದ್ದು, ಬಡ ಕಾರ್ಮಿಕರಿಗೆ ಅನುಕೂಲವಾಗುವಂಥಾದ್ದು ಮತ್ತು ಎಲ್ಲಾ ವರ್ಗದ ಜನರಿಗೂ ಅನುಕೂಲವಾಗುವ ಬಜೆಟ್ ತರಬೇಕೆಂದು ಅವರು ಪ್ರಯತ್ನ ಮಾಡುತ್ತಿರುವಾಗ, ಆ ಪ್ರಯತ್ನದಲ್ಲಿ ಅವರು 2ನೇ ಬಾರಿಗೆ ಯಶಸ್ವಿಯಾಗಿರುವಾಗ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕೇ? ಬೇಡವೇ? ಅದನ್ನು ನಾವು ಯೋಚಿಸಬೇಕು. ಪ್ರತಿಪಕ್ಷದಲ್ಲಿ ತಾವು ಕುಳಿತಿದ್ದೀರೆಂಬ ಮಾತ್ರಕ್ಕೆ ಟೀಕೆಗಳನ್ನು ಮಾಡುವುದು ಸರಿಯಲ್ಲ. ನಾವು ಓದುವುದಕ್ಕಾಗುವುದಿಲ್ಲವೆಂದರೆ, ಏಕೆ ಓದುವುದಕ್ಕಾಗುವುದಿಲ್ಲ? ಇದು ನಮ್ಮ ಕರ್ತವ್ಯ ಅಲ್ಲವೇ? 2 ಇಲಾಖೆಗಳಲ್ಲಿ, ಅಷ್ಟನ್ನೂ ಓದುವುದು ಬೇಡ, ಒಬ್ಬೊಬ್ಬರು ಓದಿದರೂ ನಾವು 224 ಜನ ಸದಸ್ಯರಿದ್ದೇವೆಂದರೆ, ಮಂತ್ರಿಗಳನ್ನು ಹೊರತುಪಡಿಸಿದರೂ, ಬಹಳಷ್ಟು ಚರ್ಚೆ ಮಾಡಬಹುದು. ನಾನು ಒಂದೇ ಒಂದು ವಿಚಾರವನ್ನು ಪ್ರಸ್ತಾಪಿಸಲು ಕೊನೆಯ ಘಟಕ್ಕೆ ಹೋಗುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಿಮ್ಮ ಮೇಲಿದ್ದ ಅನುಮಾನಗಳೆಲ್ಲವೂ ಪರಿಹಾರವಾಗಿವೆ. ಸುಮ್ಮನೇಕೆ ಆಗಿನಿಂದಲೂ ಯಡಿಯೂರಪ್ಪನವರನ್ನು ಒಪ್ಪಿಸುವುದಕ್ಕೆ try ಮಾಡುತ್ತಿದ್ದೀರಿ? ನಿಮ್ಮ ಮೇಲೆ ಅವರಿಗೆ ಅನುಮಾನವಿಲ್ಲ, ಬಿಡಿ.

ಶ್ರೀ ಹೆಚ್.ಡಿ. ಬಸವರಾಜು :- ನೀವೆಲ್ಲರೂ ಹಿರಿಯರಿದ್ದೀರಿ. ನೀವೇನೇ ಹೇಳಿದರೂ ಅದು ನಮಗೆ ಆಶೀರ್ವಾದವೆಂದು ನಾವು ತೆಗೆದುಕೊಳ್ಳಬೇಕು. ನೀವು ಮಾರ್ಗದರ್ಶನ ಮಾಡುವವರು. ನಿಮ್ಮ ಮಾತುಗಳನ್ನು ಅಷ್ಟು ಹಗುರವಾಗಿ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ನೀವೇನೇ ಹೇಳಿದರೂ ಅದು ನಮಗೆ ಒಳ್ಳೆಯದಾಗುತ್ತದೆ. ಹಾಗಾಗಿ, ನಾನು ಕೊನೆಗೆ ಘಟಕ್ಕೆ ಬರುತ್ತೇನೆ. ಎಲ್ಲವನ್ನೂ

ಓದುವುದಿಲ್ಲ. ಅಭಿಯಾಚನೆ ಸಂಖ್ಯೆ : 28. ನೀವು ಓದಿ. ಮಾತಿಗೆ ಮುಂಚೆ ಮಾಜಿ ಸದಸ್ಯರ ಬಗ್ಗೆ ಬಹಳ ಕಳಕಳಿ ತೋರಿಸುತ್ತೀರಿ. ಪ್ರಾಮಾಣಿಕವಾಗಿ ನೀವು ಮಾತನಾಡುತ್ತೀರಿ. ಅದರ ಬಗ್ಗೆ ಎರಡು ಮಾತಿಲ್ಲ. ಅವರು ಕರ್ನಾಟಕ ವಿಧಾನಸಭೆಯ ಮಾಜಿ ಸದಸ್ಯರ ವೈದ್ಯಕೀಯ ವೆಚ್ಚಗಳ ನಿಯಮಗಳಿಗೆ, ಸಂಬಂಧಪಟ್ಟ ಹಾಗೆ ಹೆಚ್ಚುವರಿ ಹಣವನ್ನು ಒದಗಿಸಿರಲಿಲ್ಲ. ಈ ಅಂದಾಜು ಪೂರಕ ಬಜೆಟ್‌ನಲ್ಲಿ ಒದಗಿಸಿದ್ದಾರೆಂದರೆ, ನಾವು ಅವರನ್ನು ಅಭಿನಂದಿಸುವುದು ಬೇಡವೇ? Vote on Account ಮುಗಿಯುವ ಸಂದರ್ಭ ಬಂದು, ಇನ್ನೊಮ್ಮೆ ಬರುವಾಗ ಆ ಬಿಲ್ಲುಗಳನ್ನೆಲ್ಲಾ ಪೆಂಡಿಂಗ್ ಇಟ್ಟು ಅನಂತರ ನಾವು ಅವರಿಗೆ ಹಣ ಮಂಜೂರು ಮಾಡುತ್ತೇವೆ ಎಂದರೆ, ನೀವು ಒಪ್ಪುತ್ತಿದ್ದೀರಾ? ಎಲ್ಲೋ ಒಂದು ಸಲ ನೀವು ಹೇಳಬಹುದು, ನಾವು main Budget ಮೇಲೆ discuss ಮಾಡಲಿಲ್ಲ. ಈಗ ಏಕೆ ತೆಗೆದುಕೊಂಡುಬಿಟ್ಟಿರಿ? ಅದರಲ್ಲಿ ಸೇರಿಸಬಹುದಾಗಿತ್ತು ಎಂದು. ಸೇರಿಸುವುದಕ್ಕಾಗಲಿಲ್ಲ. ಅದಕ್ಕೆ ತಾನೇ ಈ ಎರಡನೇ ಪೂರಕ ಬಜೆಟ್ ತಂದಿರುವುದು. ಸೇರಿಸುವುದಕ್ಕೆ ಆಗದಿದ್ದುದರಿಂದಲೇ ತಾನೇ ತಂದಿರುವುದು. ತದನಂತರ, ನಾವು ಅನಮೋದನೆ ಕೊಡಬೇಕಲ್ಲವೇ? ಅದರಲ್ಲಿ ಅನುಮೋದನೆ ಕೊಡುವುದಕ್ಕಿಂಥ ಮುಂಚೆ....

ಚೇರ್ಮನ್ :- ಬಸವರಾಜುರವರೇ ನೀವು ಅವರಿಗೆ ಉತ್ತರ ಕೊಡುವುದಕ್ಕೆ ಹೋಗಬೇಡಿ. ನೀವು ನೇರವಾಗಿ ನನಗೆ ಕೊಡಿ.

ಶ್ರೀ ಹೆಚ್.ಡಿ. ಬಸವರಾಜು :- ನಾನು ಖಂಡಿತವಾಗಿಯೂ ಅವರಿಗೆ ಉತ್ತರ ಕೊಡುತ್ತಿಲ್ಲ. ಅವರ ಮನಸ್ಸಿನಲ್ಲಿ ಎಲ್ಲೋ ಒಂದಿಷ್ಟು ಶಂಕೆಗಳಿವೆ. ಆ ಶಂಕೆಗಳು ಪರಿಹಾರ ಮಾಡಲು ಪ್ರಯತ್ನಿಸುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಇಲ್ಲ, ನಾವು ತೀರ್ಮಾನಕ್ಕೆ ಬಂದಿದ್ದೇವೆ. ಯಡಿಯೂರಪ್ಪನವರು ಇನ್ನು ಉತ್ತರ ಕೊಡುವುದು ಬೇಡ, ಸಾಕು! We are convinced.

ಶ್ರೀ ಹೆಚ್.ಡಿ. ಬಸವರಾಜು :– ಹಾಗಲ್ಲ. ನೀವು ಇಷ್ಟು ಜನರು ಬರೀ ಟೀಕೆಗಳ ಸುರಿಮಳೆಯನ್ನೇ ಸುರಿಸಿದ್ದೀರಿ. ಅದರಲ್ಲಿ ಒಬ್ಬರಾದರೂ ಒಪ್ಪುವಂತಹ ವಿಚಾರವನ್ನು ಹೇಳಿದ್ದಾರೆಯೇ? ನೀವು ಹೇಳಿದ್ದರೆ, ನಾನು ನಿಂತುಕೊಂಡು ನಿಜವಾಗಿಯೂ ಮಾತನಾಡುತ್ತಿರಲಿಲ್ಲ. ಯಡಿಯೂರಪ್ಪನವರು ಪೂರಕ ಬಜೆಟ್ ತಂದಿದ್ದಾರೆ, ಇದರಲ್ಲಿ ನಾವು ಒಪ್ಪುವಂತಹ ವಿಚಾರಗಳಿವೆ. ಕೊನೆಯ ಪುಟದಲ್ಲಿರುವುದನ್ನು ಹೇಳಿದೆ. ಮೊದಲನೆಯ ಪುಟ ಬೇಡ. ಮೊದಲನೆಯದು ಬೇಕಾದಷ್ಟು ಇದೆ. ಪೂರಕ ಬಜೆಟ್‌ನಲ್ಲಿ ಏನು ಹೇಳುತ್ತಾರೆ. ವಿಧಾನಸಭೆಯ ಮಾಜಿ ಸದಸ್ಯರು ವಿಧಾನ ಪರಿಷತ್ತಿನ ಮಾಜಿ ಸದಸ್ಯರ ವೈದ್ಯಕೀಯ ವೆಚ್ಚಗಳನ್ನು ಭರಿಸುವುದಕ್ಕೆ ಅನುಮೋದನೆ ಕೊಡುವುದು ಬೇಡವೇ? ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುವುದು ಬೇಡವೇ? ಇದರತ್ತ ಗಮನ ಕೊಡುವುದು ಬೇಡವೇ? ಇದರ ಬಗ್ಗೆ ನಾವು ಟೀಕೆ ಮಾಡುವುದಕ್ಕಾಗುತ್ತದೆಯೇ? ಅದು ನಂಬರ್ 1.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅದು ನಿಯಮವಾಗಿ ಎಷ್ಟು ದಿವಸವಾಯಿತು? ಬಜೆಟ್ ಮಾಡಬೇಕಾದರೆ, ಏಕೆ ದುಡ್ಡು ಇಟ್ಟುಕೊಳ್ಳಲಿಲ್ಲ? ನಿನ್ನೆ ದಿವಸ ನಿಯಮ ಮಾಡಿದಿರಾ? ಯಾರಾದರೂ spouses of deceased MLAs family ಗೆ Medical Reimbursement ಅನ್ನು ನಿನ್ನೆ ದಿವಸ ಮಾಡಿದಿರಾ? ಕಾನೂನು ಮಾಡಿದ್ದು ಯಾವಾಗ? ಅದನ್ನು original budget ನಲ್ಲಿ ಏಕೆ ಇಟ್ಟಿಲ್ಲ? ಇಲ್ಲಿ ಏಕೆ ಬಂತು? ಅದು ನಮ್ಮ ಚರ್ಚೆ.

ಶ್ರೀ ಹೆಚ್.ಡಿ. ಬಸವರಾಜು :– ಈಗ ಒಂದು ಮಾತನ್ನು ಹೇಳುತ್ತೇನೆ. ಇದನ್ನು ಬ್ಯಾಕ್‌ಲಾಗ್ ಎಂದು ಇಟ್ಟುಕೊಳ್ಳೋಣ. ಈಗ ನಾವು ಎಷ್ಟೋ ವರ್ಗದವರಿಗೆ ಕೆಲಸ ಕೊಡುತ್ತೇವೆ ಎಂದು ಹೇಳಿ, ಸಂದರ್ಭದಲ್ಲಿ ಕೊಡುವುದಕ್ಕಾಗಲಿಲ್ಲ. ಅನಂತರವಾದರೂ ಪ್ರಯತ್ನ ಮಾಡಬೇಕಲ್ಲವೇ? ಆ ರೀತಿ ಕೊಡುವಂಥ ಸಂದರ್ಭದಲ್ಲಿ ಆಗಲಿಲ್ಲ. ಈಗಲಾದರೂ ನಾವು ಮಾಡಬೇಕಲ್ಲ. ಅದಕ್ಕೋಸ್ಕರವೇ, ಅವರು ಪೂರಕ ಬಜೆಟ್ ಕೊಟ್ಟಿರುವುದು. ಅದಕ್ಕೆ ಅನುಮೋದನೆ ಕೇಳುತ್ತಿರುವುದು. ಈಗ ನಾನು ಇಷ್ಟನ್ನೂ ಓದುವುದಕ್ಕೆ ಹೋಗುತ್ತಿಲ್ಲ. ತಮ್ಮಲ್ಲಿರುವ ಸಂದೇಹವನ್ನು ದೂರ ಮಾಡಿ ಇವತ್ತು ಮಾನ್ಯ ಯಡಿಯೂರಪ್ಪನವರು ತುಂಬಾ ಪಾರದರ್ಶಕವಾಗಿ

ಪೂರಕ ಅಂದಾಜನ್ನು ಮಂಡಿಸಿದ್ದಾರೆ. ಈಗ 5 ಲಕ್ಷ ರೂಪಾಯಿ ದೇವಸ್ಥಾನಕ್ಕೆ "ನಿಮ್ಮ ಊರಿಗೆ ಕೊಟ್ಟಿದ್ದೀರಿ" ಎಂದು ಹೇಳುತ್ತಾರೆ. ಅವರು ಅದನ್ನು ಹೇಳದೇ ಮಾಡಬಹುದಾಗಿತ್ತಲ್ಲವೇ? ತಾವು ಅರ್ಥಮಂತ್ರಿಗಳಾಗಿದ್ದಿರಿ. ಹೇಳದೇ ಮಾಡಬಹುದಾಗಿತ್ತಲ್ಲವೇ? ಇಲ್ಲಿ ಚರ್ಚೆಯಾಗಿ ವಿಚಾರ ತೆಗೆದುಕೊಂಡು ನಾವು ಮಾತನಾಡಿದರೆ, ಬಹುಶಃ ಪ್ರತಿಪಕ್ಷದಲ್ಲಿರುವ ನಮ್ಮ ನಾಯಕರ ಮನಸ್ಸಿಗೆ ಹಿತವಾಗಿ ಟೀಕೆ – ಟಿಪ್ಪಣಿಗಳನ್ನು ನಿಲ್ಲಿಸುವ, ಯಡಯೂರಪ್ಪನವರನ್ನು ಅಭಿನಂದಿಸುವ, ಇಲ್ಲಿ ಏನು 5,994 ಕೋಟಿ ರೂಪಾಯಿಗಳನ್ನು ಪೂರಕ ಅಂದಾಜುಗಳಲ್ಲಿ ಕೇಳಿದ್ದಾರೆ, ಅದನ್ನು ನೀವು ಒಪ್ಪುವಂತಹ, ಎಲ್ಲರೂ ಸರ್ವಸಮ್ಮತವಾಗಿ, ಒಟ್ಟಾಗಿ ಬರಲಿ ಎಂಬ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆಯೇ ಹೊರತು ಬೇರೆ ಯಾವ ದೃಷ್ಟಿಯಿಂದಲೂ ಇಲ್ಲ. ನೀವೆಲ್ಲರೂ ಒಪ್ಪಿದ್ದೀರಿ ಎಂದರೆ, ಇನ್ನು ನಾನು ಜಾಸ್ತಿ ಚರ್ಚೆ ಮಾಡುವುದಿಲ್ಲ. ಸನ್ಮಾನ್ಯ ಯಡಿಯೂರಪ್ಪನವರು ಉತ್ತರ ಕೊಡುತ್ತಾರೆ. ನಾನು ಇಷ್ಟಕ್ಕೆ ನಿಲ್ಲಿಸಿ, ನೀವೆಲ್ಲರೂ ಒಪ್ಪಿರುವುದಕ್ಕೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ :– ಬಸವರಾಜುರವರು, ಇಷ್ಟು ಹೊತ್ತು ಮಾತನಾಡಿದರು. ಅವರು ಯಡಿಯೂರಪ್ಪನವರ ಪರವಾಗಿ ಇದ್ದಾರೆಯೇ? ಅಥವಾ ಇಲ್ಲವೇ? ಅಷ್ಟು ಹೇಳಿಬಿಡಲಿ, ಸಾಕು.

ಶ್ರೀ ಹೆಚ್.ಡಿ. ಬಸವರಾಜು :– ಆ ವಿಚಾರದಲ್ಲಿ ಶಂಕೆ ಬೇಡ. ಅವರ ಪರವಾಗಿ ಇಲ್ಲವೆಂದರೆ, ನಿಮ್ಮ ಹತ್ತಿರ ಬರಬೇಕಾಗಿತ್ತು ಅಲ್ಲವೇ? ಬಂದಿದ್ದೇನೆಯೇ? ಬರಲಿಲ್ಲ.

ಶ್ರೀ ಎ.ಕೃಷ್ಣಪ್ಪ (ವರ್ತೂರು) :– ಮಾನ್ಯ ಅಧ್ಯಕ್ಷರೇ, Page 118ರಲ್ಲಿ ಸಂಖ್ಯೆ 13", ಸರ್ಕಾರವು ಇತ್ತೀಚೆಗೆ 7 ನಗರಸಭೆಗಳು ಮತ್ತು ಒಂದು ಪುರಸಭೆಯನ್ನು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸಿ ಬೃಹತ್ ಬೆಂಗಳೂರು ಎಂದು ರಚಿಸುವುದಾಗಿ ಘೋಷಿಸಿದೆ. ಆದುದರಿಂದ, ಮಹಾನಗರ ಪಾಲಿಕೆ ಪ್ರದೇಶದಲ್ಲಿ ಬಂಡವಾಳ ಕಾಮಗಾರಿ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ 100 ಕೋಟಿ ರೂಪಾಯಿಗಳ ಅನುದಾನವನ್ನು ಅಭಿಯಾಚನೆಯಲ್ಲಿ ಸೇರಿಸಿದೆ". ಅಲ್ಲಾ ಸ್ವಾಮಿ,

741 ಕಿಲೋಮೀಟರ್‌ಗಳಷ್ಟು ಪ್ರದೇಶ Greater Bangalore ಗೆ ಈಗ ಸೇರಿದೆ. ಬೆಳಿಗ್ಗೆ ಮೀಟಿಂಗ್ ಕರೆದರು, ರಾತ್ರಿ ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿದರು, ಬೆಳಿಗ್ಗೆ ನೋಟಿಫಿಕೇಶನ್ ಆಯಿತು! ಈ ಸರ್ಕಾರಕ್ಕೆ ಏನು ತರಾತುರಿ ಇತ್ತೋ ಗೊತ್ತಿಲ್ಲ. ಯಾವ ಯೋಚನೆಗಳಿಲ್ಲ, ಯೋಜನೆಗಳ ಒಂದು ಅಪ್ರೋಚ್ ಇಲ್ಲ, ತರಾತುರಿಯಲ್ಲಿ ಡಿಸೈಡ್ ಮಾಡಿದ್ದಾರೆ. ಈಗ ಹಾಹಾಕಾರವಾಗಿದೆ. ಮುನಿಸಿಪಾಲಿಟಿಗಳಲ್ಲಿ ಇದ್ದ ದುಡ್ಡನ್ನು ನಮ್ಮ ಕ್ಷೇತ್ರದ ಅಭಿವೃದ್ಧಿಗೆ ನಾವು ಖರ್ಚು ಮಾಡುವಂತಿಲ್ಲ, particular ಆಗಿ ಕುಡಿಯುವ ನೀರಿಗೆ. ಗ್ರಾಮ ಪಂಚಾಯಿತಿಗಳಲ್ಲಿ ಏನು ದುಡ್ಡಿತ್ತು, ಬೆಂಗಳೂರು ಪೂರ್ವ ಮತ್ತು ದಕ್ಷಿಣ, ಹಾಗೆಯೇ, ಉತ್ತರ ಭಾಗದ ತಾಲ್ಲೂಕುಗಳಲ್ಲಿ, ಈ ದುಡ್ಡನ್ನು ನಾವು ಖರ್ಚು ಮಾಡುವಂತಿಲ್ಲ. ಈಗ ಬಿಸಿಲಿನ ಪರಿಸ್ಥಿತಿ ಇದೆ. ಅಲ್ಲಿ ಹೇಳುವವರು, ಕೇಳುವವರಿಲ್ಲ. ಇವರು Greater Bangalore ಗೆ merge ಮಾಡುವವರು, ಇಚ್ಛಾನುಸಾರ, ಸ್ವೇಚ್ಛಾನುಸಾರ ಮಾಡಿದರೆ, ಹೇಗೆ? ಮಾಡಲಿ. ಸರ್ಕಾರ ಇದೆ, ಇವರಿಗೆ ಅಧಿಕಾರ ಇದೆ, ಕಿಮ್ಮತ್ತು ಇಟ್ಟುಕೊಂಡಿದ್ದಾರೆ. ಮಾಡಲಿ. ಆದರೆ, ಇವತ್ತು ಅಲ್ಲಿ ಏನು ಸಮಸ್ಯೆಯಾಗಿದೆ ಎಂದರೆ, ಅದರಲ್ಲಿ ಏನೇನು ಕೊಡುತ್ತಾರೋ, 5–6 ಸಾವಿರ ಕೋಟಿ ಕೊಡುತ್ತಾರೆಂದು ನಿರೀಕ್ಷಿಸಿದ್ದೆವು. ಒಟ್ಟಾರೆ, ಈ ಖಜಾನೆಗೆ ಬರುವ ದುಡ್ಡಿನಲ್ಲಿ highest contribution ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಿಂದ, ಅದರಲ್ಲೂ ನಮ್ಮ ಪೂರ್ವ ವರ್ತೂರು ವಿಧಾನಸಭಾ ಕ್ಷೇತ್ರದಿಂದ. ಅಂದರೆ, ಬಜೆಟ್‌ನಲ್ಲಿ ಕೊಟ್ಟಿರುವ details ನನ್ನ ಹತ್ತಿರ ಇದೆ. ಏನೇನು ಕೊಟ್ಟಿದ್ದಾರೆಂದು ಬಜೆಟ್ ಮೇಲೆ ಮಾತನಾಡುವಾಗ ಹೇಳೋಣ. ಈಗ ಕುಡಿಯುವ ನೀರು ಇಲ್ಲ, ರಸ್ತೆಗಳಿಲ್ಲ, infrastructure ಇಲ್ಲದೇ, ಎಲ್ಲಾ Investors ಚೆನ್ನೈ ಮತ್ತು ಹೈದರಾಬಾದ್‌ಗೆ ದೌಡಾಯಿಸುತ್ತಿದ್ದಾರೆ. 83 ದೇಶಗಳಿಂದ ಬಂದ ಜನರು ಇಲ್ಲಿ ಬಂಡವಾಳ ಹಾಕಬೇಕಾದಂತಹ ಜಾಗದಲ್ಲಿ ಇವತ್ತು ಪಕ್ಕದ ರಾಜ್ಯಗಳಿಗೆ ಹೋಗುತ್ತಿದ್ದಾರೆ. ಮತ್ತೆ ಇವರು ಎಷ್ಟು ದಯೆ ತೋರಿಸಿದ್ದಾರೆಂದರೆ, 15–16 ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಖಜಾನೆಗೆ ತುಂಬುವಂತಹ ಪ್ರದೇಶಕ್ಕೆ ಎಂದರೆ, Greater Bangalore ಗೆ ಸುಮಾರು 496 ಕಿಲೋಮೀಟರ್‌ಗಳಷ್ಟು ಹೊಸ ಪ್ರದೇಶ ಸೇರಿದೆ. ಇಲ್ಲಿ ಕೇಳಿರುವುದು ಎಷ್ಟೆಂದರೆ,

100 ಕೋಟಿ ರೂಪಾಯಿಗಳು. ಇವರಿಗೇನಾದರೂ ಜನರ ಮೇಲೆ ಅಭಿಮಾನವಿದ್ದು merge ಮಾಡಿದರೋ? ಅಥವಾ ಇವರು ಬೇರೆ ಹಿತವನ್ನು ಗಮನದಲ್ಲಿಟ್ಟುಕೊಂಡು merge ಅನ್ನು ಘೋಷಿಸಿ ನಮಗೆ ಈ ಒಂದು ತಾಪತ್ರಯವನ್ನು ಸೃಷ್ಟಿಸಿದ್ದಾರೆ. ಜೊತೆಗೆ, ಮುನಿಸಿಪಾಲಿಟಿಗಳಲ್ಲಿ ಇದ್ದ ದುಡ್ಡು ಏನಾಯಿತು? ಗ್ರಾಮ ಪಂಚಾಯಿತಿಗಳಲ್ಲಿ ಇದ್ದ ಹಣ ಏನಾಯಿತು? ನೀರಿಗಾಗಿ, ರಸ್ತೆಗಾಗಿ, infrastructure ಗೆ ಒಟ್ಟಾರೆ ನೀವು ಖರ್ಚು ಮಾಡುವುದಕ್ಕೆ ಇವತ್ತಿನವರೆಗೂ ಆದೇಶ ಕೊಟ್ಟಿಲ್ಲ. ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಲ್ಲ. ಯಾರ್ಯಾರನ್ನೋ ಬೆಂಗಳೂರಿನಲ್ಲಿ ಇದ್ದವರನ್ನು ತೆಗೆದುಕೊಂಡು ಬಂದು ಅಲ್ಲಿ ಕೂರಿಸಿದ್ದಾರೆ. ಅವರಿಗೆ powers ಇಲ್ಲ. ನಮಗೆ powers ಇಲ್ಲವೆಂದು ಹೇಳುತ್ತಾರೆ. ಕುಡಿಯುವ ನೀರಿಗೆ ಬಹಳಷ್ಟು ದೊಡ್ಡ ಹಾಹಾಕಾರವಾಗಿದೆ. 94% ರೂಪಾಯಿಗಳಷ್ಟು ಹಣವನ್ನು CMC ಗೆ ಕಾವೇರಿ ನೀರಿಗಾಗಿ ದುಡ್ಡು ಕಟ್ಟಿದ ನಂತರ, ಏನು ಇವರ agreement ನಲ್ಲಿ ಇತ್ತು, ಅದರ ಪ್ರಕಾರ ಕಾವೇರಿ ನೀರಿನ connection ಕೊಡುವುದಕ್ಕಾಗಲಿಲ್ಲ.. ಇವತ್ತು 14–15 ಲಕ್ಷದಷ್ಟು ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ ಜನರು ಕುಡಿಯುವ ನೀರಿಗಾಗಿ ಹಾಹಾಕಾರ ಪಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ ಇವರು ಈ ಪೂರಕ ಬಜೆಟ್‌ನಲ್ಲಿ ಒಟ್ಟಾರೆ 100 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಏನು ಮಾಡುತ್ತಾರೆ? ಯಾವಾಗ ಮಾಡುತ್ತಾರೆ? ಅದುವರೆಗೆ ಜನರು ಬದುಕುವುದು ಹೇಗೆ? ಇವರ ಆಡಳಿತದಲ್ಲಿ ಏನಾದರೂ ಪರಿಹಾರ ಇದೆಯೇ? ಕೇಳಿ. ಮೊನ್ನೆ ಎ.ಕೆ. ಅಂಟನಿಯವರು, Defence Minister ಬೆಂಗಳೂರಿಗೆ ಬಂದಿದ್ದಾಗ Scientist ಗಳನ್ನು ಮೀಟ್ ಮಾಡಿ ಮಾತನಾಡುವ ಕಾಲಕ್ಕೆ ಅವರು ಹೇಳಿದರು. "ನಾವು ಇಲ್ಲಿ ಬೆಂಗಳೂರಿನಲ್ಲಿ ಬದುಕುವುದಕ್ಕೆ ರಕ್ಷಣೆ ಇಲ್ಲ. ಎಲ್ಲಿ ನೋಡಿದರೂ ದಾರಿದೀಪಗಳಿಲ್ಲ, ಯಾರ್ಯಾರು ರಾತ್ರಿ ಶಿಫ್ಟ್‌ನಲ್ಲಿ ಬರುತ್ತಾರೆ, ಅವರನ್ನೆಲ್ಲಾ ಲೂಟಿ ಮಾಡುತ್ತಿದ್ದಾರೆ, ಸಾಯಿಸುತ್ತಿದ್ದಾರೆ, ದಾರಿದೀಪಗಳಿಲ್ಲ". ಇಂತಹ ಪರಿಸ್ಥಿತಿಯಲ್ಲಿ ಶ್ರೀಮಾನ್ ಯಡಿಯೂರಪ್ಪನವರು, ಆರ್ಥಿಕ ಮಂತ್ರಿಗಳು 100 ಕೋಟಿ ರೂಪಾಯಿಗಳನ್ನು ಇಲ್ಲಿ ಸೂಚಿಸಿದ್ದಾರೆ. ಕೊಡಲೇ ಬಾರದಾಗಿತ್ತು ಆ 100 ಕೋಟಿ ರೂಪಾಯಿ ತಾನೇ ಏಕೆ ಕೊಡುತ್ತೀರಿ? Main budget ನಲ್ಲಿ ಏನೇನು

ಕೊಟ್ಟಿದ್ದೀರಿ items ಇಲ್ಲಿದೆ. ಆ item ನ್ನು ಜಾರಿಮಾಡದೇ infrastructure ಮೇಲೆ ಎಷ್ಟು impact ಆಗುತ್ತದೆ ಎಂಬ ಬಗ್ಗೆ ನಾವು ವಿವರಗಳನ್ನು ಹೇಳುತ್ತೇವೆ. Power ವಿಚಾರದಲ್ಲಿ ಸರ್ಕಾರವೇನಾಗಿದೆ ಎಂಬ ಬಗ್ಗೆ ಸಹ ಮಾತನಾಡೋಣ. ಕುಡಿಯುವ ನೀರಿನ ಬಾಬ್ತು ಏನಾಗಿದೆ ಎಂಬುದನ್ನೂ ಹೇಳೋಣ. ಕಾಂಗ್ರೆಸ್ ಸರ್ಕಾರ ಹೋದ ಮೇಲೆ flyovers ಏನಾಯಿತು ಎಂಬ ಬಗ್ಗೆ ಹೇಳೋಣ. ನೀವೇನು ಇಲ್ಲಿ ತೋರಿಸಿದ್ದೀರಾ? 15–16 ಸಾವಿರ ಕೋಟಿ ರೂಪಾಯಿಗಳನ್ನು ಖಜಾನೆಗೆ ತುಂಬುವಂತಹ ಪ್ರದೇಶಕ್ಕೆ ನಿಮ್ಮ ಆದ್ಯ ಗಮನವೇನಾಗಿದೆ ಎಂದು ಮಾನ್ಯ ಯಡಿಯೂರಪ್ಪನವರು ಹೇಳಬೇಕಾಗುತ್ತದೆ. ಲಕ್ಷಾಂತರ ಜನರನ್ನೇನು ತಂದು ಹೊಸ ಬದುಕು, ಹೊಸ ಚಿಂತನೆಯನ್ನು ಮಾಡಲು ಹೋಗಿ ಅವರಿಗೇನು ನಿಮ್ಮ ಆಡಳಿತದಲ್ಲಿ ಹಾಹಾಕಾರವನ್ನು ಸೃಷ್ಟಿಮಾಡಲು ಹೊರಟಿದ್ದೀರಿ ಅದನ್ನು ಹೇಳಬೇಕಾಗುತ್ತದೆ. ನೂರು ಕೋಟಿಯಲ್ಲ ತೀರಾ ಕಡಿಮೆಯೆಂದರೆ ಎರಡು ಸಾವಿರ ಕೋಟಿಯನ್ನು ಈ ಬಾಬ್ತಿಗೆ ಅವರು ಹೇಳಲೇ ಬೇಕಾಗುತ್ತದೆ. Main Budget ನಲ್ಲೂ ಹೇಳಿಲ್ಲ, ಅಲ್ಲಿ drainage ಗಳಿಗೇನು ಮಾಡುತ್ತೇವೆ, Power Sector ಗಳಿಗೇನು ಮಾಡುತ್ತೇವೆ, ಉದ್ಯಾನವನಗಳಿಗೇನು ಮಾಡುತ್ತೇವೆ, ಕೆರೆಗಳನ್ನು ಸರಿಮಾಡಲು ಏನು ಮಾಡುತ್ತೇವೆ ಯಾವ ಪ್ರಸ್ತಾಪಗಳೂ ಇಲ್ಲ. ಇವರು ಹೇಳಿದ್ದ 3–4 items ಇಲ್ಲೇ ಇದೆ. ಹಾಗೆಂದ ಮೇಲೆ ಇವರು ಈ ರೀತಿ ಕಳಕಳಿ ಇಟ್ಟುಕೊಂಡಿರುವವರು Greater Bangalore ನ್ನು ಏಕೆ declare ಮಾಡಬೇಕಾಗಿತ್ತು? ನಾವು meeting ನಲ್ಲಿ ಸುಧಾರಣೆ ಮಾಡಲು, ಒಳ್ಳೆಯ ಆಡಳಿತವನ್ನು ಕೊಡಲು, Financial resources ನ್ನು ನಮ್ಮ ಕಂಟ್ರೋಲ್‌ಗೆ ತೆಗೆದುಕೊಳ್ಳುವುದಕ್ಕೆ ಬಾಂಬೆ ಮಾದರಿಯಲ್ಲಿ ಎರಡು ಕಾರ್ಪೋರೇಷನ್‌ಗಳನ್ನು ಮಾಡಿ ಎಂದು ಹೇಳಿದೆವು. ನಮ್ಮನ್ನು ಕೇಳಿದರು ಸಂಜೆ ಕ್ಯಾಬಿನೇಟ್‌ನಲ್ಲಿ ಇಟ್ಟು ಪಾಸ್ ಮಾಡಿಬಿಟ್ಟರು. ಅದರ ಅರ್ಥವೇನು? ಅದಕ್ಕೆ ನಾನು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಕಡೆಯ ಪಕ್ಷ ನೀವು ಇದರಲ್ಲಿ ಎರಡು ಸಾವಿರ ಕೋಟಿ ಘೋಷಣೆ ಮಾಡಬೇಕು. ಅಲ್ಲಿನ ಆಗುಹೋಗುಗಳಿಗೆ ತ್ವರಿತವಾಗಿ ಕಾರ್ಯಕ್ರಮಗಳನ್ನು ಹಾಕಬೇಕು. ಇಲ್ಲದಿದ್ದರೆ ಬಂಡವಾಳವನ್ನು ಹಾಕುವಂತಹ

ಜನ ಇಲ್ಲಿರುವವರೂ ಬಿಟ್ಟುಹೋಗುತ್ತಿದ್ದಾರೆ. ಯಾವುದು ಹೀಗೆ rise ಆಯಿತೋ ಇವರ ಕಾಲದಲ್ಲಿ ಹಾಳಾಗುತ್ತಿದೆ. ಅದು ಸತ್ಯದ ಸಂಗತಿ. ಬೇಕಾದರೆ ಅವರು ವಿಚಾರಣೆ ಮಾಡಿ ತಿಳಿದುಕೊಳ್ಳಿ. ನಾನೇನು ಸುಳ್ಳನ್ನು ಹೇಳುತ್ತಿಲ್ಲ. ಯಾವ inverstors ಇಲ್ಲಿ Delhi ನೋಡದೆಯೇ ಬೆಂಗಳೂರನ್ನು ನೋಡಲು ಓಡೋಡಿ ಬರುತ್ತಿದ್ದರು, ತಾಜ್‌ಮಹಲ್‌ಗಿಂತಾ ಬೆಂಗಳೂರೇ ಅಂದ, ಚೆಂದವೆಂದು ಬರುತ್ತಿದ್ದರು. ಅವರೆಲ್ಲಾ ಇವತ್ತು ಆ ಕಡೆ ಹೋಗುತ್ತಿದ್ದಾರೆ. ಚೆನ್ನೈ ಸಬರ್‌ಬನ್‌ನಲ್ಲಿ ಇವತ್ತು 7400 ರೂಪಾಯಿ ಚದರ ಅಡಿ. ಇಲ್ಲಿಗೆ ಬರಬೇಕಾಗಿದ್ದ ಅಭಿವೃದ್ಧಿ ಆ ಕಡೆಗೆ ಹೋಗುತ್ತಿದೆ. ನೀವು Greater Bangalore ಎಂದೇನು declare ಮಾಡಿದಿರಿ ಮನಸ್ಸಿನಲ್ಲೇನನ್ನು ಇಟ್ಟುಕೊಂಡು declare ಮಾಡಿದಿರೋ, ಎಲ್ಲಿಂದ resources ತರುತ್ತಾರೋ, resources mobilisation ಗೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೋ ಗೊತ್ತಿಲ್ಲ. ಆದರೆ ಈಗ ತತ್‌ಕ್ಷಣ ಎರಡು ಸಾವಿರ ಕೋಟಿ ರೂಪಾಯಿಗಳನ್ನು ನೀವು ಕೊಡಬೇಕು. ನಮ್ಮ ಮುನಿಸಿಪಾಲಿಟಿಗಳಲ್ಲಿ ಒಂದೊಂದರಲ್ಲಿ 20–25 ಕೋಟಿ ದುಡ್ಡು ಇತ್ತು. Ending March 31 target ಇನ್ನೂ ಹತ್ತತ್ತುಕೋಟಿ ಇದೆ. ಅದು ಯಾವುದನ್ನೂ ಗಮನದಲ್ಲಿಟ್ಟುಕೊಳ್ಳದೆಯೇ, ಅವರನ್ನು ಈ ರೀತಿ neglect ಮಾಡುವುದು ಸರ್ಕಾರಕ್ಕೆ ಸಾಧುವಲ್ಲ. ಆದ್ದರಿಂದ ಕಡೆಯ ಪಕ್ಷ ಎರಡು ಸಾವಿರ ಕೋಟಿ ರೂಪಾಯಿಗಳನ್ನು ತೋರಿಸಿ ತತ್‌ಕ್ಷಣ ಬಿಡುಗಡೆ ಮಾಡಬೇಕೆಂದು ವಿನಂತಿಸುತ್ತೇನೆ. Thank you very much.

ಶ್ರೀ ಧರ್ಮಸಿಂಗ್ :– ಗ್ರೇಟರ್ ಬೆಂಗಳೂರಿನ ಬಗ್ಗೆ ಕೃಷ್ಣಪ್ಪನವರು ಹೇಳಿದ್ದಾರೆ. ಇವತ್ತು 100 ಕೋಟಿ ರೂಪಾಯಿಗಳನ್ನು general ಆಗಿ ಬೆಂಗಳೂರು ನಗರದ ಕುಡಿಯುವ ನೀರಿಗಾಗಿ ಇಟ್ಟಿದ್ದೇವೆ. ಇವತ್ತು ಬೆಂಗಳೂರು ನಗರದ ಎಲ್ಲಾ ಕಡೆ ಕುಡಿಯುವ ನೀರಿಗೆ ಹಾಹಾಕಾರವಿದೆ. ಸಿದ್ಧರಾಮಯ್ಯನವರು ಉಪಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳಾಗಿದ್ದಾಗ ನಾವು ಜಪಾನ್ ರಾಷ್ಟ್ರದ ಬ್ಯಾಂಕ್‌ನ ಜೊತೆ ಮಾತನಾಡಿ 3384 ಕೋಟಿ ಹಣವನ್ನು ಕೊಟ್ಟಿದ್ದಾರೆ. ಆಗಿನ ಕೇಂದ್ರದ ಸಚಿವರಾದ ಗುಲಾಮ್‌ನಬಿ ಆಜಾದ್‌ರವರು ಮೂರು ವರ್ಷಗಳ ಹಿಂದೆ ರಾಮಲಿಂಗಾರೆಡ್ಡಿಯವರು ಸಚಿವರಾಗಿದ್ದಾಗ ಶಂಕುಸ್ಥಾಪನೆ ಮಾಡಿದ್ದರು. ಆ

ಕೆಲಸವೇನಾಯಿತು? ಇವತ್ತು ಕುಡಿಯುವ ನೀರಿನ ಸಮಸ್ಯೆ ಹಳ್ಳಿಗಳ ಪ್ರದೇಶದಲ್ಲಿ ಬೇರೆ ಪ್ರದೇಶಗಳಲ್ಲಿದೆ. ಇಡೀ ರಾಷ್ಟ್ರದಲ್ಲಿ ಬೆಂಗಳೂರಿನ 6ನೇ ಸಿಟಿ. This is the 6th city in the world ಎಲ್ಲಿ ಲೊಯರ್ ಲೆವಲ್‌ನಿಂದ ಹೈಯರ್ ಲೆವೆಲ್‌ಗೆ 1500 ಫೀಟ್ water ಅನ್ನು pump ಮಾಡಬೇಕಾಗಿದೆ. ಇದು ರಾಕ್ ಏರಿಯಾ. ನೀವಿಲ್ಲಿ ಬಾವಿತೋಡಿದರೂ ನೀರು ಬರುವುದಿಲ್ಲ. ಪತ್ರಕರ್ತ ಮಿತ್ರರೂ ಇದ್ದಾರೆ, ಇದು world ನಲ್ಲಿ 6ನೇ ಸಿಟಿ. ಬಾಂಬೆ is different. ಅಲ್ಲಿ ಗ್ರಾವಿಟಿ ಇದೆ. When I was HUD Minister I had visited Bombay. ಅಲ್ಲಿ ಗ್ರಾವಿಟಿ ಇದೆ. ಅಲ್ಲಿ foot ball ground ಇದ್ದಂತೆ water tank ಇದೆ. ಅಲ್ಲಿ ಗ್ರಾವಿಟಿ ಇರುವುದರಿಂದ ನೀರು ಹರಿದು ಬರುತ್ತದೆ. ಆದರೆ, ಇಲ್ಲಿ ಕೆಳಗಿನಿಂದ higher level ಗೆ 1500 ಫೀಟ್ ನೀರನ್ನು ಪಂಪ್ ಮಾಡಬೇಕಾಗಿದೆ. ಇವತ್ತು ಪೂರಕ ಅಂದಾಜುಗಳ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಸಿದ್ಧರಾಮಯ್ಯನವರು ಸ್ಪಷ್ಟವಾದ ತಮಗೆ ಹೆಚ್ಚಿನ ಸಹಾಯ ಮಾಡಿದ್ದಾರೆ. ಅವರು oppose ಮಾಡುತ್ತಿಲ್ಲ. ಇವತ್ತು ತಾವು ಬಜೆಟ್‌ನಲ್ಲಿ ಬೆಂಗಳೂರಿಗೆ ಮುಂದೆ ಬರತಕ್ಕ ದಿವಸಗಳಲ್ಲೇನು ಅಪಾಯವಾಗುತ್ತಿದೆ, ಎಷ್ಟು ಜನಸಂಖ್ಯೆ ಬೆಳೆಯುತ್ತಿದೆ ಅದಕ್ಕೇನು ಮಾಡುತ್ತಿದ್ದೀರಿ? ಜಪಾನ್‌ನಿಂದ ತಂದಂತಹ ಹಣವನ್ನು, ನಮ್ಮ ಕಾಲದಲ್ಲಿ ಏನು ಶಂಕು ಸ್ಥಾಪನೆ ಮಾಡಿದ್ದೇವೆ, ಇವತ್ತು ಮಹಾನಗರ ಪಾಲಿಕೆ, Bangalore Water Supply Board ಏನೂ ಕೆಲಸ ಮಾಡುತ್ತಿಲ್ಲ. ಇದರ ಬಗ್ಗೆ ಅವರು ಪ್ರಸ್ತಾಪ ಮಾಡಿದರೆಂದು ನಾನು ಹೇಳುತ್ತಿದ್ದೇನೆ. ಮತ್ತೆ ಮುಂದೆ ಮಾತನಾಡುತ್ತೇವೆ. ನೀವೇನು ಬೆಂಗಳೂರಿನ ಬಗ್ಗೆ ಕನಸು ಕಾಣುತ್ತಿದ್ದೀರಿ ಅದರ ಬಗ್ಗೆ ಇರತಕ್ಕ ಸಮಸ್ಯೆಗಳನ್ನೂ ಕೂಡ ಬಗೆಹರಿಸುವ ಪ್ರಯತ್ನ ಮಾಡಬೇಕು.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :- ಮಾನ್ಯ ಅಧ್ಯಕ್ಷರೇ, ನಾನು ಕೇವಲ ಎರಡು ನಿಮಿಷದಲ್ಲಿ ಮಾನ್ಯ ಉಪಮುಖ್ಯಮಂತ್ರಿಯವರ ಗಮನಸೆಳೆಯಲು ಇಷ್ಟಪಡುತ್ತೇನೆ. ಅಭಿಯಾಚನೆ ಸಂಖ್ಯೆ : 9, Co-operative department ಬಗ್ಗೆ ಹೇಳಬಯಸುತ್ತೇನೆ. ಇವತ್ತು supplementary budget ನಲ್ಲಿ ಭವಿಷ್ಯದಲ್ಲಿ ಕೊಡಬೇಕಾಗಿರುವ ಹಣದ ಬಗ್ಗೆ ಒಂದು ಪ್ರಾವಿಜನ್ ಮಾಡಿದ್ದಾರೆ.

ಆದರೆ, ಈಗಾಗಲೇ ಮಾನ್ಯ ಸಿದ್ಧರಾಮಯ್ಯನವರು ಹೇಳಿದಂತೆ 2002 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿರುವ ಅಷ್ಟೂ ಡಿ.ಸಿ.ಸಿ ಬ್ಯಾಂಕುಗಳಿಗೆ ಇನ್ನೂ 450 ಕೋಟಿ ರೂಪಾಯಿ ಬಾಕಿ ಇರಬೇಕಾಗಿದೆ. ಅದು inter subsidy, 2006 January ಗೆ ಬರತಕ್ಕ reimbursement ಹಣವನ್ನೂ ಇಟ್ಟುಕೊಂಡು 450 ಕೋಟಿ ಹಣವನ್ನೇನಾದರು ಕೊಟ್ಟು ಬಡ್ಡಿ ಮನ್ನಾ ಮಾಡಿದರೆ, ಸಾಲ ಮನ್ನಾ ಮಾಡಿದರೆ ಡಿ.ಸಿ.ಸಿ ಬ್ಯಾಂಕು ಉಳಿಯುತ್ತಿದ್ದವು ಅಥವಾ ಕೋಆಪರೇಟಿವ್ structure ಉಳಿಯುತ್ತಿದ್ದವು. ಈಗ 2006 ಆದಮೇಲೆ ಸಹಕಾರಿ ಶತಮಾನೋತ್ಸವವನ್ನು ಮಾಡಲು ಹೋಗುತ್ತಿದ್ದೀರಿ. 2006 ಆದಮೇಲೆ ನಾವು ಈ ಶತಮಾನೋತ್ಸವವನ್ನು ಮಾಡಿದಂತೆ, ಈ ಇಲಾಖೆಯನ್ನೇ ಸಮಾಪ್ತಿ ಮಾಡಲು ಹೋಗುತ್ತಿದ್ದೇವೆ ಎಂಬ ಭಯ ನಮ್ಮ ಮನಸ್ಸಿನಲ್ಲಿದೆ. ನಾನು ಸಿದ್ಧರಾಮಯ್ಯನವರಿಗೂ ವಿನಂತಿ ಮಾಡಿಕೊಳ್ಳುತ್ತೇನೆ, ತಾವು Fiscal Responsibility Act ತಂದಿರಿ. ಆದರೆ, ಯಾವಾಗಲೂ ನಬಾರ್ಡ್‌ನವರು ನಿಮ್ಮನು inter subsidy waive off ಮಾಡುವುದಾಗಲಿ, loan waive off ಮಾಡುವುದಾಗಲಿ repeatedly ನಿಮಗೆ request ಮಾಡಿಕೊಳ್ಳುತ್ತಾರೆ. "ಬಜೆಟರಿ ಪ್ರಾವಿಜನ್ ಮಾಡಿ ಅನಂತರ ಬೇಕಾದರೆ ನೀವು ಇದಕ್ಕೆ ಕೈಹಾಕಿ" ಎಂದು request ಮಾಡಿಕೊಳ್ಳುತ್ತಾರೆ. ಹೋದ ವರ್ಷದ್ದೇ 450 ಕೋಟಿ ರೂಪಾಯಿಗಳನ್ನು ನೀವು ಕೊಟ್ಟಿಲ್ಲ. ಪುನಃ ಈ ವರ್ಷ 1950 ಕೋಟಿ ನಾವು ಕೊಡುತ್ತೇವೆಂಬ ಸಾಹಸಕ್ಕೆ ಕೈಹಾಕುತ್ತಿದ್ದೀರಿ. ಆಕಸ್ಮಾತ್ ನೀವು ಏನಾದರೂ ಈ packs ನಿಂತುಹೋದರೆ ನಾಳೆ ಭವಿಷ್ಯದಲ್ಲಿ ನಾವೆಲ್ಲರೂ ಇದಕ್ಕೆ ಹೊಣೆಗಾರರಾಗುತ್ತೇವೆ. ಇವತ್ತು ನಾನು ನಿಮ್ಮನ್ನು ಬೊಟ್ಟುಮಾಡಿ ಹೇಳುತ್ತಿಲ್ಲ. ಇದು 2002ರಿಂದ ಉಳಿದಿರತಕ್ಕ ಹಣ. ಎಸ್.ಎಂ.ಕೃಷ್ಣರವರು ಮಾಡಿದಾಗಿನಿಂದಲೂ ನಾವು ಹೇಳುತ್ತಲೇ ಬಂದಿದ್ದೇವೆ. ಅದರ ಜೊತೆಗೆ ಇನ್ನೊಂದು ಭಯಾನಕ ಆದೇಶವನ್ನು ಮೊನ್ನೆ ತಂದಿದ್ದಾರೆ. Finance department ನವರು interest subsidy ಯನ್ನು ಸಿದ್ಧರಾಮಯ್ಯನವರಿದ್ದಾಗ 5.5% ಕೊಡುತ್ತಿದ್ದರು. ಅದಕ್ಕೀಗ ನಬಾರ್ಡ್‌ಗೆ ಒಂದು ರೇಟು, own fund ಗೆ ಒಂದು ರೇಟು ಮಾಡಿದ್ದಾರೆ. ನಬಾರ್ಡ್ fund ನಿಂದೇನು ಸಾಲ ಕೊಡುತ್ತೇವೆ ಅದಕ್ಕೆ 3% interest subsidy

ಕೊಡುತ್ತೇನೆಂದು ಹೇಳುತ್ತೀರಿ. ಇವತ್ತು 5% ಗೆ ಹಣವನ್ನು ಇಟ್ಟುಕೊಳ್ಳುತ್ತಾರೆ? Commercial Banks ನವರು 8%, 9% deposit ಗೆ ಬಡ್ಡಿ ಹಣವನ್ನು ಕೊಡುತ್ತಿದ್ದಾರೆ. ಆದರೆ, ಇವತ್ತು ನೀವು 5% ಕೊಟ್ಟು ನಾವು depositors ಗೆ ಹಣವನ್ನೇನು ಕೊಡಬೇಕು? ಡಿ.ಸಿ.ಸಿ ಬ್ಯಾಂಕುಗಳು ಎಷ್ಟು ಲುಕ್ಸಾನಿಗೆ ಬರುತ್ತವೆ ಎಂದು ಗಮನಿಸಬೇಕು. ತಾವು ಬರತಕ್ಕ ಆಯವ್ಯಯದಲ್ಲಾದರೂ at least 450 ಕೋಟಿ ರೂಪಾಯಿಗಳನ್ನು clear ಮಾಡಿ ಭವಿಷ್ಯದಲ್ಲಿ ತಾವು ಕೊಡಬೇಕಾಗಿರುವ 1950 ಕೋಟಿ ಕೊಡದಿದ್ದರೆ ಸಹಕಾರಿ ಇಲಾಖೆಯ ಸಮಾಪ್ತಿಗೆ ತಾವೇ ಕಾರಣೀಭೂತರಾಗುತ್ತೀರಿ ಎಂಬ ಮಾತನ್ನು ನಾನು ನೇರವಾಗಿ ಸರ್ಕಾರಕ್ಕೆ ಮನದಟ್ಟಣೆ ಮಾಡಿಕೊಟ್ಟು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) :- ಮಾನ್ಯ ಅಧ್ಯಕ್ಷರೇ ಪೂರಕ ಅಂದಾಜುಗಳಲ್ಲಿ ಸಹಕಾರ ಇಲಾಖೆ ಬಗ್ಗೆಯೇ ನಾನು ಮಾತನಾಡುತ್ತಿದ್ದೇನೆ. ಮಾನ್ಯ ಶಿವಾನಂದ್ ಪಾಟೀಲ್‌ರವರು ಹೇಳಿದ್ದನ್ನು ನಾನು ಸಮರ್ಥಿಸುತ್ತೇನೆ. ಎಲ್ಲಾ ಬ್ಯಾಂಕ್‌ಗಳು, ಸಹಕಾರ ಸಂಘಗಳು ಮುಳುಗಿ ಹೋಗುವ ಪರಿಸ್ಥಿತಿಗೆ ಬಂದಿವೆ. ಈಗ 460 ಕೋಟಿ ರೂಪಾಯಿಗಳು ಬಾಕಿ ಇವೆ. ಆ ಬಾಕಿಯನ್ನು ಕೊಡುವುದಕ್ಕೆ ನೀವು ಯೋಚನೆ ಮಾಡಿದ್ದೀರಾ? ನಬಾರ್ಡ್‌ರವರು ನಮಗೆ ಎಲ್ಲಾ ರೀತಿಯ ಸಾಲವನ್ನೂ ಸಹ ನಿಲ್ಲಿಸಿದ್ದಾರೆ. ಮಾನ್ಯ ಯಡಿಯೂರಪ್ಪನವರೇ ನಮ್ಮ ಬ್ಯಾಂಕ್‌ನ್ನು ನಾವು already ಮುಚ್ಚಿದ್ದೇವೆ. ಒಂದೊಂದು ಜಿಲ್ಲೆ ಒಂದೊಂದು ರೀತಿಯ ಪರಿಸ್ಥಿತಿಯಲ್ಲಿವೆ. ಅದನ್ನು ತಾವು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಬೇಕು. ತಾವು ಮೊದಲು ಏಪ್ರಿಲ್ 1 ರಿಂದ ಎಂದು ಹೇಳಿದ್ದೀರಿ, ಈಗ ಎರಡನೇ ತಿಂಗಳಿನಿಂದ ಎಂದು ಹೇಳುತ್ತಿದ್ದೀರಿ. ಎರಡು ತಿಂಗಳು ಹಿಂದಕ್ಕೆ ಹಾಕಿದಿರಿ. ಒಂದೊಂದು district ನಲ್ಲಿ ಒಂದೊಂದು ಸಮಯದಲ್ಲಿ ಸಾಲ ಕೊಡಲಾಗುತ್ತದೆ. ನಮ್ಮಲ್ಲಿ ನವೆಂಬರ್‌ನಿಂದ ಸಾಲ ಕೊಡುತ್ತೇವೆ. ಡಾ: ನಂಜುಂಡಪ್ಪ ವರದಿಯ ಪ್ರಕಾರ ಬೀದರ್, ಗುಲ್ಬರ್ಗಾ backward district ಗಳಾಗಿವೆ. ನಮ್ಮಲ್ಲಿ ನವೆಂಬರ್ 1 ರಿಂದ ಸಾಲ ಕೊಡುತ್ತೇವೆ. ಸಾಲ ತೆಗೆದುಕೊಳ್ಳುವವರು ನವೆಂಬರ್ 1ಕ್ಕೆ ನಮ್ಮಲ್ಲಿ ಸಾಲ ತೆಗೆದುಕೊಳ್ಳುತ್ತಾರೆ. ಕಿಸಾನ್ ಕಾರ್ಡ್‌ಗಳ ವಿಚಾರದಲ್ಲಿಯೂ ಅಷ್ಟೇ. ಕಿಸಾನ್

ಕ್ರೆಡಿಟ್ ಕಾರ್ಡ್ ಇವತ್ತು ತೆಗೆದುಕೊಳ್ಳುತ್ತಾನೆ, ನಾಳೆ ವಾಪಸ್ ಕೊಡುತ್ತಾನೆ, ನಾಡಿದ್ದು ಮತ್ತೆ ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ system ಈ ರೀತಿ ಇದೆ. ಈಗ ಎರಡನೇ ತಿಂಗಳಿನಲ್ಲಿ ಎಂದರೆ ಕಷ್ಟವಾಗುತ್ತದೆ. ಮೊದಲು ನಾಲ್ಕನೇ ತಿಂಗಳು ಎಂದು ಹೇಳಿದ್ದೀರಿ, ಈಗ ಎರಡನೇ ತಿಂಗಳು ಎಂದು ಹೇಳುತ್ತಿದ್ದೀರಿ. ಎರಡನೇ ತಿಂಗಳು ಎಂದು ಹೇಳಿದರೆ, ಅದರ ವ್ಯಾಪ್ತಿಗೆ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳು ಬರುವುದಿಲ್ಲ. ನಮ್ಮ ಬ್ಯಾಂಕುಗಳು ಚೆನ್ನಾಗಿದ್ದರೂ ನಾವು ಅವುಗಳನ್ನು ಮುಚ್ಚುವ ಪರಿಸ್ಥಿತಿಯಲ್ಲಿದ್ದೇವೆ. ಎಲ್ಲಾ ಸಹಕಾರ ಸಂಘಗಳ ಸ್ಥಿತಿಯೂ ಹಾಗೆಯೇ ಇದೆ. ತಾವು ಸಾಲ ಮನ್ನಾ ಮಾಡುವ ನಿರ್ಣಯವನ್ನು ಮಾಡಿದ್ದೀರಿ. ತಾವು ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ಅದನ್ನು ಜಾರಿಗೆ ತನ್ನಿ. ಸಾಲ ಮನ್ನಾ ಮಾಡುವುದು ಒಳ್ಳೆಯದು. ಅದನ್ನು ನಾವೆಲ್ಲಾ ಸ್ವಾಗತ ಮಾಡುತ್ತೇವೆ. ಸಾಲ ಮನ್ನಾ ಮಾಡುವುದಿದ್ದರೆ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಿ ಅಥವಾ ಎಲ್ಲಾ ರೈತರಿಗೂ ಸಮಾನವಾಗಿ ಮಾಡಿ. ನವೆಂಬರ್ 1 ರಿಂದ ಸಾಲ ಮನ್ನಾ ಎಂದು ನೀವು ಘೋಷಣೆ ಮಾಡಿದ್ದರೆ, ಬೀದರ್, ಗುಲ್ಬರ್ಗಾ ಮತ್ತಿತರ ಕೆಲವು ಬೇರೆ ಬೇರೆ ಖರೀಬ್ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಆ ಜಿಲ್ಲೆಗಳ ಯಾವ ರೈತರಿಗೂ ಕೂಡ ಅನುಕೂಲವಾಗುವುದಿಲ್ಲ. ಸಾಲ ಮನ್ನಾ ಘೋಷಿಸಿದ್ದರೂ ಅವರಿಗೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ತಾವು ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕೆಂಬುದು ನನ್ನ ಭಾಷಣದ ಉದ್ದೇಶವಾಗಿದೆ.

ಆ) 2006-07ನೇ ಸಾಲಿನ ಪೂರಕ ಅಂದಾಜುಗಳ [ಎರಡನೇ ಹಾಗೂ ಅಂತಿಮ ಕಂತು] ಕುರಿತು ನಡೆದ ಚರ್ಚೆಗೆ ಸರ್ಕಾರದ ಉತ್ತರ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸಿನ ಸಚಿವರು) :- ಮಾನ್ಯ ಅಧ್ಯಕ್ಷರೆ, ಈ ಪೂರಕ ಅಂದಾಜುಗಳ ಬಗ್ಗೆ ಪ್ರತಿಪಕ್ಷದ ನಾಯಕರಾದಂತಹ ಸನ್ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ರಾಜೇಂದ್ರನ್‌ರವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು, ಮಾನ್ಯ ಬಸವರಾಜ್‌ರವರು, ಮಾನ್ಯ ಕೃಷ್ಣಪ್ಪನವರು, ಮಾನ್ಯ ಶಿವಾನಂದ